
# ಅಪರಂಜಿ

ತಿಳಿನಗೆಯ ಕಾರಂಜಿ



ಮೇ - 2013





# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 30
ಸಂಚಿಕೆ – 8
ಮೇ – 2013

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಕೈ ಜಾರಿದ ದೋಸೆ.... | **ವತ್ಸಲ** | 3 |
| ಮೈಸೂರು ಟಾಂಗಾ... | **ಜೆಬಿ ಕೋಟೆ ಅನಂತ್** | 7 |
| ಪ್ಯಾರ್‌ಗೆ ಆಗುಟ್ಬಿಟ್ಟೈತೇ.. | **ಗುರುಮೂರ್ತಿ ಇಂದ್ರಾಳಿ** | 12 |
| ಕಾಕಾಯಣ | **ವಿಜಯ ಗುರುರಾಜ** | 17 |
| ಪಾಸ್‌ವರ್ಡ್ ಪ್ರಕರಣ | **ನಂದಿನಿ ಕಾಪಡಿ** | 22 |
| ಟೆಂಪಲ್ ಪ್ರೀಮಿಯರ್... | **ಇ.ಆರ್. ರಾಮಚಂದ್ರನ್** | 25 |
| ತಿಂಡಿಪೋತ | **ಸುಷ್ಮಾ ನಿವಾಲ್ಕರ್** | 28 |
| ಸೋಲೋತ್ಸವ | **ಸಿ.ಆರ್. ಸತ್ಯ** | 31 |
| ತುಂತುರು | **ದಂನಳ** | 35 |
| ಬೇಸಿಗೆ ಬಗ್ಗೆ ಒಂದು... | **ಗೋಪಾಲಿ** | 36 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 39 |

**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**

*ಮುದ್ರಣ:* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಟಿಕೆಟ್ ಹಂಚಿಕೆ: ಬೇವು ಜಾಸ್ತಿ – ಶೀರ್ಷಿಕೆ

**● ಬೆಲ್ಲ ಇಲ್ಲ !!**

★★★

ನವೋದಯ ಸಾಹಿತ್ಯ ಅತ್ಯಂತ ಶ್ರೇಷ್ಠ – ಹೇಳಿಕೆ

**● ರನ್ನ, ಪಂಪ ಬೆಚ್ಚಿಬಿದ್ದರಂತೆ !!**

★★★

ಅಮಾವಾಸ್ಯೆಯ ದಿನ ಇಪ್ಪತ್ತೆರಡು ನಾಮಪತ್ರ ಸಲ್ಲಿಕೆ – ಸುದ್ದಿ

**● ಕರುಣಾಳು ಬಾ ಬೆಳಕೆ !!**

★★★

ನಾಮಪತ್ರ ಸಲ್ಲಿಕೆ : ಏಪ್ರಿಲ್ ಹತ್ತರಿಂದ – ಸುದ್ದಿ

**● ಒಂದನೆಯ ತಾರೀಖು ಶುರುಮಾಡಿದ್ದರೆ ಅನ್ವರ್ಥವಾಗುತ್ತಿತ್ತು !!**

★★★

ಕುಲ ಸಚಿವೆ ಸ್ಥಾನ ನೇಮಕಾತಿ ರದ್ದು, ಹೈ ಕೋರ್ಟಿಗೆ ಸೀತಮ್ಮ – ಸುದ್ದಿ

**● ರಾಮ, ರಾಮ !!**

★★★

''ನನ್ನ ದೌರ್ಬಲ್ಯಗಳನ್ನು ತೋರಿಸಿ'' – ಶ್ರೀ ಮೋದಿ

**● ಆತ್ಮಾವಲೋಕನ ಎಂದರೇನು ಅಂತ ಅರ್ಥವಾಯಿತು !!**

★★★

ಕ್ರಿಕೆಟ್ ಬೆಟ್ಟಿಂಗ್ ದಂಧೆ : ಹತ್ತು ಮಂದಿ ಬಂಧನ – ಕ್ರೀಡಾ (?) ಸುದ್ದಿ

**● ಹನ್ನೊಂದು ಮಂದಿ ಇರಬೇಕಲ್ಲಾ !!**

★★★

ಜೆ.ಡಿ.ಎಸ್. ತೊರೆದ ಮುನಿ ಕೃಷ್ಣ – ಸುದ್ದಿ

**● ಅವರು ಮುನಿ-ದಿರಬೇಕು !!**

★★★



# ಕೈ ಜಾರಿದ ದೋಸೆ ಪ್ರಕರಣ

**- ವತ್ಸನ**

**ಬೆಂ**ಗಳೂರಿನ ಬೇಸಿಗೆಯ ರೀತೀನೇ ವಿಚಿತ್ರಾರೀ. ಒಂದು ವಾರ ಚೆನ್ನಾಗಿ ಬಿಸಿಲು ಕಾದರೆ ಸಾಕು ಕಾರ್ಮೋಡಗಳು ಎಲ್ಲಿಂದಲೋ ಬಂದು ಆಗಸವನ್ನು ಕವಿದು ಸಂಜೆಯ ಹೊತ್ತಿಗೆ ಸಿಡಿಲು ಗುಡುಗುಗಳಿಂದ ತುಂಬಿದ ಜೋರು ಮಳೆ ಸುರಿದು ರಸ್ತೆಗಳನ್ನೆಲ್ಲಾ ಕಾಲುವೆಗಳನ್ನಾಗಿ ಮಾಡಿ ಹೋಗಿಬಿಡುತ್ತೆ. ಮಾರನೆಯ ದಿನ ಯಥಾಪ್ರಕಾರ ಬಿಸಿಲು, ಧಗೆ. ಹೀಗೊಂದು ಮಳೆ ಬಿದ್ದ ಮಾರನೆಯ ಬೆಳಗ್ಗೆ ನಾನು ಶರಲೇಖನೊಂದಿಗೆ ಮಿಡ್ ಮಾರ್ನಿಂಗ್ ಟೀ ಸವಿಯುತ್ತಾ ಕುಳಿತಿದ್ದೆ. ಒಮ್ಮೆಲೇ ನನ್ನ ಮೊಬೈಲ್ ರಿಂಗಾಯಿತು. ಆಚೆ ಬದಿಯಿಂದ ಸಮರ್ಥ್ (ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಅವರ ಅಳಿಯ) ಮಾತನಾಡುತ್ತಿದ್ದ. ''ಅಂಕಲ್, ಸೀಮಾ ಮತ್ತು ನಾನು ಇಂದು ಮಧ್ಯಾಹ್ನ ಒರಯಾನ್ ಮಾಲ್‌ನಲ್ಲಿ ಲೈಫ್ ಆಫ್ ಪೈ ನೋಡಲು ಹೊರಟಿದ್ದೀವಿ. ನೀವು ಮತ್ತು ಶರಲೇಖ ಅಂಕಲ್ ನಮ್ಮೊಂದಿಗೆ ಬರಕ್ಕಾಗುತ್ತಾ. ಮೂವಿ ಬಹಳ ಚೆನ್ನಾಗಿದೆಯಂತೆ'' ಅಂತ ಕೇಳಿದ. ಅಷ್ಟು ವಿಶ್ವಾಸದಿಂದ ಕರೆದರೆ ಇಲ್ಲ ಅನ್ನುಕ್ಕಾಗುತ್ತದೆಯೇ. ಶರಲೇಖನನ್ನು ಕೇಳಿದೆ. ಏನನ್ನೋ ಓದುವುದರಲ್ಲಿ ಮಗ್ನನಾಗಿದ್ದ ಅವನು ಏನೂ ಉತ್ತರಿಸದೇ ಬಲ ಹೆಬ್ಬೆರಳನ್ನು ಮೇಲೆತ್ತಿ ಥಮ್ಸ್ ಅಪ್ ಸಂಜ್ಞೆ ತೋರಿಸಿ ತನ್ನ ಓದನ್ನು ಮುಂದುವರಿಸಿದ. ಸಮರ್ಥ್‌ಗೆ ನಮ್ಮ ಒಪ್ಪಿಗೆ ತಿಳಿಸಿ ಮೊಬೈಲ್ ಪಕ್ಕಕ್ಕಿಟ್ಟು ಕುರ್ಚಿಗೆ ಒರಗಿದೆ. ಮಧ್ಯಾಹ್ನದ ಐಪಿಎಲ್ ಮ್ಯಾಚ್ ನೋಡುವುದು ತಪ್ಪುತ್ತಲ್ಲಪ್ಪಾ ಎಂಬ ಆತಂಕ ಒಂದು ಕ್ಷಣ ಮನದಲ್ಲಿ ಹಾದುಹೋಯಿತು. ಮರುಕ್ಷಣನೇ ಚೆನ್ನೈ ಸೂಪರ್ ಕಿಂಗ್ಸ್ ತಾನೇ. ಅವರು ಗೆಲ್ಲೋದನ್ನ ನೋಡಿ ಸಂಕಟಪಡೋ ಬದಲು ಸುಖವಾಗಿ ಮಲ್ಟಿಪ್ಲೆಕ್ಸ್‌ನ ಎ.ಸಿ. ಅನುಭವಿಸಬಹುದಲ್ಲಾ ಎಂಬ ಸಮಾಧಾನ ಮನವನ್ನು ತುಂಬಿತು.

ಸಮರ್ಥ್ ಮತ್ತು ಸೀಮಾ ತಮ್ಮ ಅತ್ಯಾಧುನಿಕ ಹೋಂಡಾಸಿಟಿಯಲ್ಲಿ ಮಧ್ಯಾಹ್ನ ಎರಡೂವರೆಗೆ ಸರಿಯಾಗಿ ಬಂದರು. ನಾವೆಲ್ಲಾ ಕಾರಿನಲ್ಲಿ ಕುಳಿತು ರಾಜಾಜಿನಗರದ ಕಡೆಗೆ ಹೊರಟೆವು. ಮಾಲ್‌ನ ಗೇಟನ್ನು ದಾಟಿದನಂತರ ಕಾರುಗಳ ಸೆಕ್ಯೂರಿಟಿ ತಪಾಸಣೆಗಾಗಿ ಒಂದು ಉದ್ದದ ಕ್ಯೂ ಇತ್ತು. ನಮ್ಮ ಸರದಿ ಕಾಯುತ್ತಾ ನಾವೂ ಕ್ಯೂನಲ್ಲಿ ನಿಂತೆವು. ಸೆಕ್ಯೂರಿಟಿ ಜನರು ಪ್ರತಿಯೊಂದು ಕಾರಿನ ಡಿಕ್ಕಿಯನ್ನು ತೆಗೆಸಿ, ಕಾರಿನ ತಳಭಾಗಕ್ಕೆ ಕನ್ನಡಿ ಹಿಡಿದು ಕಾರನ್ನು ಮುಂದೆ ಬಿಡುತ್ತಿದ್ದರು. ''ಇದೊಂದು ಅರ್ಥವಿಲ್ಲದ ರಿಚುವಲ್ ಆಗಿಹೋಗಿದೆ. ಯಾವ ಆತಂಕವಾದಿ ತಾನೇ ಇವರಿಗೆ ಕಾಣಿಸಲಿ ಅಂತ ತನ್ನ ಕಾರಿನ ಡಿಕ್ಕಿಯಲ್ಲಿ ಅಥವಾ ಕಾರಿನ ಕೆಳಗಡೆ ಬಾಂಬ್ ಇಟ್ಟುಕೊಂಡು ಬರ್ತಾನೆ! ಸುಮ್ಮನೆ ಕಾಲಹರಣ ಅಷ್ಟೇ'' ಅಂತ ಉದ್ಗರಿಸಿದ ಸಮರ್ಥ್. ಶರಲೇಖ ಅವನಿಗೆ ಉತ್ತರಿಸುತ್ತ, ''ಅದು ಹಾಗಲ್ಲ ಸಮರ್ಥ್, ಈ ತಪಾಸಣೆ

ವಿಧಿಗಳನ್ನ ಆತಂಕವಾದಿಗಳನ್ನು ಹಿಡಿಯುವ ಉದ್ದೇಶದಿಂದ ಮಾಡಿಲ್ಲ. ಯಾವನಾದರೂ ಅಮಾಯಕ ಕಾರು ಚಾಲಕನ ಕಾರಿಗೆ ದುಷ್ಕರ್ಮಿಗಳು ಬಾಂಬನ್ನು ಅವನಿಗೆ ತಿಳಿಯದಂತೆಯೇ ತಗುಲಿಸಿ ಅದನ್ನು ಮಾಲ್‌ನ ಒಳಗೆ ಸಾಗಿಸುವ ಉದ್ದೇಶವಿದ್ದರೆ ಅದನ್ನ ವಿಫಲಗೊಳಿಸುವ ಪ್ರಯತ್ನ ಇದು. ಇಷ್ಟು ದಿನಗಳ ಕಾಲ ನಮ್ಮ ಮಾಲ್‌ಗಳು ಬಾಂಬ್ ಧಾಳಿಯಿಂದ ಮುಕ್ತವಾಗಿದ್ದರೆ ಅದಕ್ಕೆ ಇಂತಹ ರೊಟೀನ್ ತಪಾಸಣೆಗಳೇ ಕಾರಣ. ಹಾಗೆಂದ ಮಾತ್ರಕ್ಕೆ ಈ ವಿಧಾನಗಳು ಸಂಪೂರ್ಣ ಯಶಸ್ವಿ ಅಂತೇನೂ ಅಲ್ಲ. ಮಾಲ್ ಒಳಗೆ ಬಾಂಬ್ ಸಾಗಿಸಲು ಬಹು ಸುಲಭದ ವಿಧಾನಗಳಿವೆ. ಈಗ ಅದರ ವಿಚಾರ ಬೇಡ'' ಅಂತ ಹೇಳಿದ. ಅಷ್ಟು ಹೊತ್ತಿಗೆ ನಮ್ಮ ಕಾರು ತಪಾಸಣೆಯಲ್ಲಿ ತೇರ್ಗಡೆ ಹೊಂದಿ ಮುಂದೆ ಸಾಗಿತ್ತು.

ಸಿನಿಮಾ ನೋಡಿ, ಫುಡ್ ಕೋರ್ಟ್‌ನಲ್ಲಿ ರವೆ ಇಡ್ಲಿ ತಿಂದು ಮನೆ ಸೇರಿದಾಗ ಸಂಜೆ ಆಗಿತ್ತು. ಹಿಂತಿರುಗುವ ದಾರಿಯುದ್ದಕ್ಕೂ ಸಿನಿಮಾದ್ದೇ ಮಾತುಕತೆ. ''ಅಬ್ಬ ಈ ಏನಿಮೇಷನ್ ಟೆಕ್ನಾಲಜಿ ಎಷ್ಟು ಮುಂದುವರಿದಿದೆ ಅಲ್ವಾ. ಸಿನಿಮಾದಲ್ಲಿ ಏನಿಮೇಟೆಡ್ ಹುಲಿ ಯಾವುದು, ನಿಜವಾದ ಹುಲಿ ಯಾವುದು ಅಂತ ಗುರುತಿಸೋದಕ್ಕೇ ಆಗೋದಿಲ್ಲ. ನಿಜವಾಗ್ಲೂ ಹ್ಯಾಟ್ಸ್ ಆಫ್'' ಅಂತ ಸೀಮಾ ಸರ್ಟಿಫಿಕೇಟ್ ಕೊಟ್ಟದ್ದೂ ಆಯಿತು. ಸಮರ್ಥನಿಗೆ ಇರ್ಫಾನ್ ಖಾನ್‌ನ ನಟನೆ ತುಂಬಾ ಇಷ್ಟವಾದಹಾಗೆ ಕಂಡಿತು. ''ಅದೆಷ್ಟು ಸ್ಪಷ್ಟವಾಗಿ ಇಂಗ್ಲಿಷ್ ಮಾತಾಡ್ತಾ ಇದ್ದ ಅವನು. ಹಲವಾರು ತಿಂಗಳುಗಳ ಕಾಲ ತಯಾರಿ ತೊಗೊಂಡಿರಲೇ ಬೇಕು. ಸೂರಜ್ ಶರ್ಮಾ ಕೂಡ ತುಂಬಾ ಚೆನ್ನಾಗಿ ಆಕ್ಟ್ ಮಾಡಿದ್ದಾನೆ. ಅಂದಹಾಗೆ ಬಾಂಬೆ ಜಯಶ್ರೀ ಹಾಡಿದ ಲಾಲಿಹಾಡು ಆಸ್ಕರ್‌ಗೆ ಕೂಡ ನಾಮಿನೇಟ್ ಆಗಿತ್ತಂತೆ'' ಅಂತೆಲ್ಲಾ ಹೊಗಳಿದ ಸಮರ್ಥ್.

ಮಾರನೆಯ ಬೆಳಗ್ಗೆ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿಯವರಿಂದ ತರಾತುರಿ ಫೋನ್ ಕರೆ ಬಂತು. ''ಒರಾಯನ್ ಮಾಲ್‌ನಲ್ಲಿ ನಿನ್ನೆ ರಾತ್ರಿ ಸ್ಫೋಟ ಆಗ್ಯದಂತ. ನಾನು ಅಲ್ಲಿಗೇ ಹೊಂಟೀನಿ. ಲಗೂನ ಇಬ್ರೂ ಬರ್‍ರಲಾ. ಜೀಪ್ ಕಳಿಸೀನಿ'' ಅಂತ ಅವರು ಹೇಳಿದರು. ಅಷ್ಟು ಹೊತ್ತಿಗೆ ಹೊರಬಾಗಿಲ ಗಂಟೆ ಕಿಚುಗುಟ್ಟಿತು. ಬಾಗಿಲು ತೆರೆದಾಗ ಜೀಪ್ ಡ್ರೈವರ್ ಹಾಜರಾಗಿದ್ದ. ಅವಸರದಲ್ಲಿ ನಾವಿಬ್ಬರೂ ಹೊರಟೆವು. ''ಅಲ್ಲಾ ಇದೆಂಥಾ ಕಾಕತಾಳ ನ್ಯಾಯಾನೋ, ನಿನ್ನೆ ಇಲ್ಲೇ ಬಂದು ಸೆಕ್ಯೂರಿಟಿ ವಿಷಯಾನೇ ಮಾತಾಡ್ತಾ ಇದ್ವಿ. ಈಗ ನೋಡಿದ್ರೆ ಸ್ಫೋಟ ಆಗಿ ತನಿಖೆಗೆ ಹೊರಡೋ ಹಾಗೆ ಆಗಿದೆ'' ಅಂತ ನಾನು ಉದ್ಗರಿಸಿದೆ. ''ಕಾಕತಾಳೀಯನೂ ಅಲ್ಲ ಏನೂ ಅಲ್ಲ. ಇವರ ಭದ್ರತಾ ವ್ಯವಸ್ಥೆ ನೋಡಿದ ಮೇಲೆ ಇಂತಹ ಅಪಘಾತ ಆಗೋದಕ್ಕೇ ಕಾಯುತ್ತಾ ಇದ್ದದ್ದು ನನಗಂತೂ ಖಚಿತವಾಗಿತ್ತು'' ಅಂತ ಹೇಳಿದ ಶರಲೇಖ. ಮಾಲ್ ಸೇರಿದ ನಂತರ ಒಬ್ಬ ಕಾನ್ಸ್‌ಟೇಬಲ್ ನಮ್ಮನ್ನು ಇದಿರುಗೊಂಡು ತನ್ನ ಬಾಸ್ ಹತ್ತಿರ ಕರೆದುಕೊಂಡು ಹೋದ.

ಮಾಲ್ ಎರಡನೇ ಮಹಡಿಯಲ್ಲಿದ್ದ ಒಂದು ಬಟ್ಟೆ ಅಂಗಡಿಯ ಮುಂದೆ ಪೋಲೀಸರ ಗುಂಪೊಂದು ನಿಂತಿತ್ತು. ಅಂಗಡಿಯ ಮುಂಭಾಗವೆಲ್ಲಾ ಸುಟ್ಟಿದ್ದು ನೋಡಿದರೆ ಅದೇ ಸ್ಫೋಟದ ತಾಣ ಎಂಬುದು ಸ್ಪಷ್ಟವಾಗಿ ತಿಳಿಯುತ್ತಿತ್ತು. ಶರಲೇಖ ವಿಳಂಬವಿಲ್ಲದೇ ತನ್ನ

ಕಾರ್ಯದಲ್ಲಿ ಮಗ್ನನಾದ. ಅಂಗಡಿಯ ಪ್ರತಿಯೊಂದು ಮೂಲೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮಾಹಿತಿ ಸಂಗ್ರಹಣೆಯಲ್ಲಿ ತೊಡಗಿದ ಶರಲೇಖ. ಕಿರಿಯ ಪೋಲಿಸ್ ಅಧಿಕಾರಿಗಳು ಅವನ ಹಿಂದೆ ಸುತ್ತುತ್ತಾ ಅವನ ವಿಧಾನಗಳಿಂದ ಪತ್ತೇದಾರಿ ವಿದ್ಯೆಯ ಸೂಕ್ಷ್ಮಗಳನ್ನು ತಿಳಿಯಲು ಯತ್ನಿಸುತ್ತಿದ್ದರು. ಪೋಲಿಸ್ ನಾಯಿಗಳು ಅಂಗಡಿಯನ್ನೆಲ್ಲಾ ಸುತ್ತಿ ಅಪಘಾತದ ದೃಶ್ಯಕ್ಕೆ ಒಂದು ಗಂಭೀರತೆಯನ್ನು ಒದಗಿಸಿದ್ದವು. ಮಧ್ಯಾಹ್ನದ ಹೊತ್ತಿಗೆ ಶರಲೇಖ ನನ್ನ ಬಳಿ ಬಂದು ''ಇಲ್ಲಿ ಸಂಗ್ರಹಿಸಬೇಕಾದ್ದನೆಲ್ಲಾ ಸಂಗ್ರಹಿಸಿ ಆಯಿತು. ಮಿಕ್ಕ ಕೆಲಸವೆಲ್ಲಾ ಊರುಸುತ್ತಿಯೇ ನಡೆಯುವಂತಹದು. ನೀನು ಮನೆಗೆ ಹೋಗು. ಸಂಜೆಗೆ ನಿನ್ನನ್ನು ಕಾಣುವೆ. ಬಹುಶಃ ಅಷ್ಟುಹೊತ್ತಿಗೆ ಏನಾದರೂ ಸುಳಿವು ಸಿಕ್ಕಬಹುದು'' ಅಂತ ಹೇಳಿದ. ನಾನು ಮನೆಯ ಕಡೆ ಹೊರಟೆ.

ಆ ಸಂಜೆ ಬೆಂಗಳೂರಿನವರು ಡಿಲ್ಲಿ ಮೇಲೆ ಆಡಿದ ಮ್ಯಾಚ್ ಸೂಪರ್ ಓವರ್ ಹಂತಕ್ಕೆ ಬರುತ್ತೆ ಅಂತ ನಾನು ಖಂಡಿತ ಎಣಿಸಿರಲಿಲ್ಲ. ಡಿಲ್ಲಿಯವರು 152 ರನ್ ಮಾಡಿ ತಮ್ಮ ಇನ್ನಿಂಗ್ಸ್ ಮುಗಿಸಿದಾಗ, ನಮ್ಮ ಕ್ರಿಸ್ ಗೇಲ್ ಇಷ್ಟು ರನ್‌ಗಳನ್ನ ಎಡಗೈಯಲ್ಲೇ ಹೊಡೆದುಬಿಡುತ್ತಾನೆ ಅಂತ ಬೀಗುತ್ತಿದ್ದೆ. ಅಂತೂ ಇಂತೂ ನಮ್ಮವರು ಗೆಲ್ಲುವ ಹೊತ್ತಿಗೆ ರಾತ್ರಿ ಹನ್ನೆರಡಾಗಿತ್ತು. ಶರಲೇಖನ ಸುಳಿವೇ ಇರಲಿಲ್ಲ.

ಮಾರನೆಯ ಬೆಳಿಗ್ಗೆ ನಾನು ಎದ್ದು ತಿಂಡಿ ತಿನ್ನುತ್ತಿದ್ದಾಗ ಶರಲೇಖ ಬಂದ. ರಾತ್ರಿಯೆಲ್ಲಾ ನಿದ್ದೆಗೆಟ್ಟು ಓಡಾಡಿ ಬಂದದ್ದು ಅವನ ಮುಖದಲ್ಲಿಯೇ ಕಾಣುತ್ತಿತ್ತು. ''ಇನ್ನು ಒಂದು ಗಂಟೆಯಲ್ಲಿ ರೆಡಿಯಾಗು. ಮಲ್ಲೇಶ್ವರದ ಪೋಲಿಸ್ ಠಾಣೆಗೆ ಹೋಗಬೇಕು ದಾರಿಯಲ್ಲಿ ಎಲ್ಲಾ ಹೇಳುತ್ತೇನೆ'' ಅಂತ ಹೇಳಿ ಶರಲೇಖ ಒಳಗೆ ನಡೆದ. ಸ್ವಲ್ಪ ಹೊತ್ತಿನ ನಂತರ ಜೀಪ್ ಬಂದು ನಮ್ಮನ್ನು ಠಾಣೆಗೆ ಕರೆದೊಯ್ಯಿತು.

ಠಾಣೆಯಲ್ಲಿ ಉಳ್ಳಾಗಡ್ಡಿಯವರ ಮುಂದೆ ಒಬ್ಬ ಯುವಕನನ್ನು ಕೈಗಳಿಗೆ ಬೇಡಿತೊಡಿಸಿ ನಿಲ್ಲಿಸಿದ್ದರು. ಶರಲೇಖನನ್ನು ನೋಡಿದ ಕೂಡಲೇ ಉಳ್ಳಾಗಡ್ಡಿಯವರು, ''ಅಪರಾಧಿ ತನ್ನ ತಪ್ಪನ್ನ ಒಪ್ಪಿಕೊಂಡು ಬಿಟ್ಟಿದ್ದಾನೆ. ನೀವು ಕೊಟ್ಟ ಸುಳಿವಿನಿಂದ ಈ ಸಮಸ್ಯೆ ಬೇಗ ಪರಿಹಾರವಾದಂತಾಯಿತು. ನಮ್ಮ ಕಮಿಷನರ್ ಬಹಳ ಇಂಪ್ರೆಸ್ ಆಗಿದ್ದಾರೆ'' ಅಂತ ಹೇಳಿದರು. ಶರಲೇಖ ''ಬ್ರಿಲಿಯಂಟ್, ಹಾಗಾದರೆ ನಮ್ಮ ಕೆಲಸ ಇಲ್ಲಿ ಮುಗಿದಂತಾಯಿತಲ್ಲಾ. ಇನ್ನು ನಾವು ಹೊರಡಬಹುದು ತಾನೇ. ಮಲ್ಲೇಶ್ವರದವರೆಗೂ ಬಂದಮೇಲೆ ಹತ್ತನೇ ಕ್ರಾಸಿನ ದೋಸೆ ಕ್ಯಾಂಪ್‌ಗೆ ಭೇಟಿ ನೀಡದೇ ಇದ್ರೆ ಹೇಗೆ?'' ಅಂತ ಹೇಳಿದ. ಉಳ್ಳಾಗಡ್ಡಿ ''ನಿಮ್ಮ ಸಹಾಯಕ್ಕೆ ಧನ್ಯವಾದಗಳು. ಅಂದಹಾಗೆ ಒಂದು ಕೋರಿಕೆ......''

''ಏನದು?''

''ನಿಮ್ಮ ಸಹಾಯ ಪಡೆದಿರೋದನ್ನ ನಮ್ಮ ಕಮಿಷನರ್ ಸಾಹೇಬರಿಗೆ ತಿಳಿಸಿಲ್ಲ. ಆ ವಿಷಯ ಗೋಪ್ಯವಾಗಿದ್ದರೆ ನನ್ನ ಕೆರಿಯರ್‌ಗೆ ಅನುಕೂಲ'' ಅಂದರು ಉಳ್ಳಾಗಡ್ಡಿ. ಶರಲೇಖ ನಸುನಕ್ಕು ಅವರಿಗೆ ಥಮ್ಸ್ ಅಪ್ ತೋರಿಸಿ ನನ್ನನ್ನೂ ಕರೆದುಕೊಂಡು ಸಂಪಿಗೆ ರಸ್ತೆಯಕಡೆ ನಡೆದ. ದಾರಿಯಲ್ಲಿ ಅವನ ವಿವರಣೆ ಶುರುವಾಯಿತು.

‘‘ನಿನ್ನೆ ಆ ಬಟ್ಟೆ ಅಂಗಡಿ ಸ್ಫೋಟವನ್ನ ಪರಿಶೀಲಿಸಿದಾಗ ಅದು ಒಳಗಿನವರೇ ಮಾಡಿರೋ ಕೆಲಸ ಅಂತ ಖಚಿತವಾಯಿತು. ಅಂಗಡಿಯ ಮಾಲೀಕರು ಈ ರೀತಿ ಸ್ಫೋಟಮಾಡಿ ಕಡಿಮೆ ಬೆಲೆಯ ಸರಕೆಲ್ಲವನ್ನೂ ನಾಶಪಡಿಸಿ ಆಮೇಲೆ ಅವುಗಳ ಮೇಲೆ ಹೇರಳ ವಿಮೆ ಹಣವನ್ನು ಪಡೆಯುವುದು ಗೊತ್ತಿದ್ದೇ. ಆದರೆ ಇದಕ್ಕೊಂದು ಸಾಕ್ಷಿ ಬೇಕಲ್ಲಾ. ಅದಕ್ಕೆ ಅಂಗಡಿಯ ಪರಿಶೀಲನೆ ಮುಗಿದ ಮೇಲೆ ಉಳ್ಳಾಗಡ್ಡಿಯವರ ಜೊತೆಗೂಡಿ ಪಕ್ಕದ ಒಡವೆ ಅಂಗಡಿಯ ಎಲ್ಲ ನೌಕರರನ್ನೂ ವಿಚಾರಿಸಿದೆ. ಸ್ಫೋಟದ ದಿನದಿಂದ ಆ ಅಂಗಡಿಯ ಮೇಲ್ವಿಚಾರಿಣಿ ಸುಚಿತ್ರಾ ರಜೆ ತೆಗೆದುಕೊಂಡಿದ್ದ ಸಂಗತಿ ತಿಳಿಯಿತು. ನೇರವಾಗಿ ಅವಳ ಮನೆಗೆ ಹೋದೆವು. ಉಳ್ಳಾಗಡ್ಡಿ ಅವಳನ್ನು ರಜೆ ತೆಗೆದುಕೊಂಡ ಕಾರಣವನ್ನು ಕೇಳಿದಾಗ ಆಕೆ ತಬ್ಬಿಬ್ಬಾದಳು. ದಸ್ತಗಿರಿಯ ಬೆದರಿಕೆ ಒಡ್ಡಿದ ಮೇಲೆ ಆಕೆ ಬಾಯಿಬಿಟ್ಟಳು. ಬಟ್ಟೆ ಅಂಗಡಿಯ ಮಾಲೀಕನ ಮಗ ಅವಳ ಸ್ನೇಹಿತನಂತೆ. ಸ್ಫೋಟದ ಹಿಂದಿನ ದಿನ ಅವನು ಸುಚಿತ್ರಾಗೆ ಎರಡುದಿನ ರಜೆ ತೆಗೆದುಕೊಳ್ಳಲು ಆಗ್ರಹ ಪಡಿಸಿದನಂತೆ. ಸ್ಫೋಟ ನಿಯಂತ್ರಣ ಮೀರಿ ಪಕ್ಕದ ಅಂಗಡಿಗೆ ಹರಡಿದರೆ ಅವಳಿಗೆ ಅಪಾಯವಾಗದಿರಲಿ ಎಂಬ ಮುಂಜಾಗ್ರತೆ ಅವನಿಗೆ. ಅವಳನ್ನೂ ಕರೆದುಕೊಂಡು ಬಟ್ಟೆ ಅಂಗಡಿ ಮಾಲೀಕ ಮತ್ತು ಅವನ ಮಗನನ್ನು ವಿಚಾರಣೆಗೆ ಗುರಿಪಡಿಸಿದಾಗ ಸತ್ಯ ಹೊರಬಿತ್ತು.’’

ಅಷ್ಟು ಹೊತ್ತಿಗೆ ನಾವು ಮಲ್ಲೇಶ್ವರದ ಹತ್ತನೇ ಕ್ರಾಸಿನಲ್ಲಿರುವ ದೋಸೆ ಕ್ಯಾಂಪ್ ಸೇರಿದ್ದೆವು. ಅದು ದರ್ಶಿನಿ ರೀತಿಯ ಜಾಗ. ದೋಸೆಯನ್ನು ನಿಂತೇ ತಿನ್ನಬೇಕು ಅಲ್ಲಿ. ಗರಿಗರಿಯಾದ ಮಸಾಲೆ ದೋಸೆಯನ್ನು ಕೌಂಟರಿನಿಂದ ಪಡೆದು ಮುಂದಿನ ಮೇಜಿನ ಮೇಲಿಟ್ಟು ಕೊಂಡೆವು. ಇನ್ನೇನು ತಿನ್ನಬೇಕು ಅನ್ನುವಷ್ಟರಲ್ಲಿ ನನ್ನ ಮೊಬೈಲ್ ರಿಂಗಾಯಿತು. ಅದನ್ನು ಕೈಗೆ ತೆಗೆದುಕೊಂಡಾಗ ಆಕಸ್ಮಿಕವಾಗಿ ಅದರಲ್ಲಿ ಟೈಮ್ ನೋಡಿದೆ. ಹತ್ತೂ ಇಪ್ಪತ್ತೆಂಟು ಆಗಿತ್ತು. ಒಮ್ಮೆಲೇ ಒಂದು ಬಲವಾದ ಸ್ಫೋಟ ಪರಿಸರವನ್ನು ತುಂಬಿತು. ಯಾರೋ ನಮ್ಮನ್ನೆಲ್ಲಾ ಗೋಡೆಯ ಕಡೆಗೆ ನೂಕಿದಂತಾಯಿತು. ಮೇಜಿನ ಮೇಲಿದ್ದ ತಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿ ಆದವು. ಶರಲೇಖ ಬಹು ಶಾಂತ ಮನಸ್ಸಿನಿಂದ ‘‘ಇವತ್ತು ನಮಗೆ ದೋಸೆ ಯೋಗವಿಲ್ಲ. ಇನ್ನು ಇಲ್ಲಿರುವುದು ಸರಿಯಲ್ಲ. ಮನೆಗೆ ಹೊರಡೋಣ’’ ಎಂದ. ಆ ಏಪ್ರಿಲ್ ಹದಿನೇಳರ ಬೆಳಗ್ಗೆ ಆತಂಕವಾದ ಮಲ್ಲೇಶ್ವರಕ್ಕೂ ಕಾಲಿಟ್ಟಿತು.

❑

---

ಮುಖ್ಯಮಂತ್ರಿಯ ಕುರ್ಚಿ ಆಸೆ ಹಲವರಿಗೆ
ಸಾಕು ಅದೊಂದೇ ರಾಜಕೀಯ worryಗೆ
ಜನಗಳ ಕಣ್ಣಿಗೆ ಮಾತ್ರ ಚಿತ್ತ ಅಭಿವೃದ್ಧಿಯತ್ತ
ಆದರೆ ಗಮನವೆಲ್ಲ ದೊಡ್ಡ ಕುರ್ಚಿಯತ್ತ

*– ಸುಕೇಶವ*

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯಲ್ಲಿ
ಪ್ರಥಮ ಬಹುಮಾನ ಪಡೆದ ಲೇಖನ

# ಮೈಸೂರು ಟಾಂಗಾ ಮಸ್ತಾನ್

**- ಜೆಬಿ ಕೋಟೆ ಅನಂತ್**

**ನ**ಮ್ಮ ಮಸ್ತಾನ್ ಮೈಸೂರು ಟಾಂಗಾ ಓಡಿಸೋನು. ಈ ಕಸಬು ಅವರ ಕುಟುಂಬದ ಕಸಬು. ಮಸ್ತಾನ್ ಮೂರನೇ ತಲೆಮಾರಿನವನು. ಇವನ ತಾತ ಮಹಮದ್ ಗೌಸು ಅರಮನೆ ಕುದುರೆ ಲಾಯದಲ್ಲಿ ಕೆಲಸ ಮಾಡುತ್ತಿದ್ದನಂತೆ. ಅಂದಿನ ಅರಸರ ಖಾಸಾ ಜಾಕಿ. ಅವನಿಗೆ ವಯಸ್ಸಾಗಿ ಲಾಯದ ಕೆಲಸ ಅವನ ಕೈಲಿ ಆಗಲ್ಲ ಅಂದಾಗ ಅರಸರು ಕೈತುಂಬಾ ಕಾಸು, ಬಟ್ಟೆಬರೆ, ಅವನು ಸಾಕುತ್ತಿದ್ದ ಕುದುರೆ ''ದಿಲ್‌ದಾರ್'' ಅವನಿಗೆ ಕೊಟ್ಟು ರಿಟೈರ್‌ಮೆಂಟ್ ಮಾಡಿದರಂತೆ.

ಈ ಗೌಸುದೋ.. ಎರಡು ಸಂಸಾರ. ಎರಡೂ ಸಾಕಷ್ಟು ದೊಡ್ಡದು. ಅದನ್ನ ತೂಗಿಸಕ್ಕೆ ಕುದುರೆ ''ದಿಲ್‌ದಾರ್''ಗೆ ಬಂದು ಟಾಂಗಾ ಹೊಂದಿಸಿ, ಅದರ ಕೊರಳಗಂಟೆ ಮೈಸೂರು ತುಂಬಾ ಸದ್ದು ಮಾಡತ್ತೆ. ಗೌಸು, ಛಲ್ ಬೇಟ ಛಲ್... ಬಾಜು... ಬಾಜು... ಅನ್ನೋ ಆವಾಜ್ ಜನರಿಗೆ ಕೇಳಿಸ್ತಾ... ಎದುರಿಗೆ ಬಂದ ಪರಿಚಯಸ್ಥರನ್ನ ಸಲಾಂ ಸಾಬ್.. ಸಲಾಂ ಅಣ್ಣ ಅಂತ ಹೇಳ್ತಾ ಮೈಸೂರು ಟಾಂಗಾ ಓಡಿಸ್ತಾ ಇದ್ದ.

ಈಗ ಈ ನಮ್ಮ ಮಸ್ತಾನ್ ಮೂರನೇ ತಲೆ, ಕುದುರೆ ಹೈದರ್‍ರೂ ಮೂರನೇ ತಲೆ, ಎಲ್ಲಾ ಪರಂಪರಾ ಸ್ಟೈಲು ಯಾರ್‍ರಿ.. ಯಾರ್‍ರಿ.. KRS, ಮಂಡಿಮೊಹಲ್ಲಾ, ಒಂಟಿಕೊಪ್ಪಲು, ಅಗ್ರಹಾರ, ತೊಣಚಿ ಕೊಪ್ಪಲು, ಪ್ಯಾಲೇಸು, ಬೆಟ್ಟ, Zoogarden, ಮಾರ್ಕೆಟ್ ಅಂತಾ ಕೂಗ್ತಾ ಓಡಿಸ್ತಾ ಕುದುರೆ ಹೈದರ್ ಹೊಟ್ಟೆ ಇವನ ಸಂಸಾರದ ಆರು ಜನರ ಹೊಟ್ಟೆ ತುಂಬಿಸ್ತಾ ನಗ್ತಾ ನಗ್ತಾ ಬಾಳಿನ ಬಂಡೀನ ಸಾಗಿಸ್ತಾನೆ.

ಹೀಗೆ ಒಂದಿನ ಮೇಲುಕೋಟೆ ಕಡೆ ಯಜಮಾನರೊಬ್ಬರು ಹಣೆಮೇಲೆ ಭರ್ಜರಿ ಟ್ರೇಡ್ ಮಾರ್ಕು ಹಾಕ್ಕೊಂಡು, ಸೀಟಿನ ಕೆಳಗೆ ಬಸ್ಸಿನ ಮೇಲೆ ತೊಡೆ ಮೇಲೆ ಹೀಗೆ ಭಾರಿ ಲಗ್ಗೇಜು ಸಮೇತ ಇಳಿತಿದ್ದಂಗೆ ಮಸ್ತಾನ್ ಆಗತಾನೆ ಹುಟ್ಟಿದ ಚಿಗರೆಮರಿ ಜಿಗಿದಂಗೆ ಜಿಗಿತಾ ಲಗ್ಗೇಜಿಗೆ ಕೈ ಹಾಕಿ ನೋಡ್ತಾನೆ. ಒಂದೊಂದು ಭಾರಿ ಭಾರಿ ತೂಕದ್ದೇ ಗೋಣಿಚೀಲ, ಬಟ್ಟೆಚೀಲ, ಪಂಚೆಗಂಟು ಒಟ್ಟು ಮುಕ್ಕಾಲು ಡಜನ್. ಏ ಥೋಡೋ ಸಾಮಿ... ನಾನು ಎಲ್ಲಾ ಇಳಿಸಿ ಕೊಡ್ತೀನಿ. ನೀವು ಸುಮ್ಕೆ ನೋಡ್ಕೊಳಿ ಎಲ್ಲಾ ಸರಿಯಾಗಿದಯಾ ಅಂತ ಅಂದೋನೇ ಶುರು ಹಚ್ಕೊಂಡ ಮಸ್ತಾನ್.

ಸಾಮಿ.. ಗಿಂತಿ ಕರೋ... ಎಲ್ಲಾ ಐಟಂಗಳೂ ಐತಾ ಅಂತ, ಇರಿ ಇನ್ನೊಂದು ದಪ ಬಸ್ ಒಳಗೆ ಚೆಕ್ ಮಾಡತೀನಿ.. ಅಂದೋನೆ ಚೆಕ್ ಅಂತ ಬಸ್ ಹತ್ತಿ ಚೆಕ್ ಮಾಡಿ ಸಾಮಿ ಏನೂ

ಬಿಟ್ಟಿಲ್ಲ ಅಂದ ಭಟ್ಟರು ಲೆಕ್ಕ ಹಾಕಿದರು. ಬ್ಯಾಗುಗಳು, ಪಂಚೇಲಿ ಕಟ್ಟಿದ ಗಂಟು, ಊಟದೆಲೆ ಕಟ್ಟೇ, ದೊನ್ನೆ ಕಟ್ಟೆ ಎಲ್ಲಾ ಒಟ್ಟು 9, ಕೈಯಲ್ಲಿದ್ದ ದರ್ಬೆ ಸೇರಿದರೆ 10. ಭಟ್ಟರು ಎಣಿಸಿ ಎಲ್ಲಾ ಸರಿಯಾಗಿದೆ ಅಂತ ಮೊಹರು ಒತ್ತಿದರು.

ಏಕ್ ಮಿನಿಟ್ ಸಾಮಿ ಟಾಂಗಾಗೆ ತರತೀನಿ ಅಂತ ಹೇಳಿ.. ಜಟಕಾ ಸ್ಟ್ಯಾಂಡಿಗೆ ಜಿಗಿದು ಗಾಡಿ ತಂದು ನಿಲ್ಲಿಸಿದ. ಸಾಮಿ.. ಹತ್ತಿ ಸಾಮಿ... ಹಲ್ಲೂಸೆ ಎನ್ನುತ್ತಾ ಮುಂದೆ ಹೋಗಿ ನಿಂತು.. ಔರ್ ತೋಡ ಸಾಮ್ನೆ.. ಔರ್ ತೋಡ ಸಾಮ್ನೆ ಅಂತ ಹೇಳಿ ಲಗ್ಗೇಜ್ ಎಲ್ಲಾ ಗಾಡಿ ಒಳಗೆ ತುಂಬಿದ. ತಾನು ಸಾರಥಿಯಂತೆ ಮುಂದೆ ಕೂತು.. ಛಲ್.. ಛಲ್.. ಬೇಟ.. ಛಲ್.. ಅಂತ ಗಾಡಿ ಓಡಿಸಿದ. ಓ.. ನಜೀರ್ ಬಾಯ್ ಜರ ಬಾಜು... ಬಾಜು.. ಸಾಮಿ.. ಔರ್ ತೋಡ ಸಾಮ್ನೆ... ಭಟ್ಟರು ತಮ್ಮ ದಡೂತಿ ದೇಹನ ಒಂದಿಷ್ಟು ಅಲುಗಾಡಿಸಿದರು. ಸಾಮಿ.. ನಾನು ಯಾರಿಗೂ ಎಲ್ಲಿಗೆ ಹೋಗಬೇಕು, ಕಹ ಜಾನೇಕ? ಅಂತ ಕೇಳಕ್ಕಿಲ್ಲ. ಗಿರಾಕಿಗಳು ಮದುವೆ, ಮುಂಜಿ, ನೆಂಟರ ಮನೆ, ಮಾತುಕತೆ, ವ್ಯಾಪಾರ, ವ್ಯವಹಾರ ಅಂತ ಹೋಗ್ತಾ ಇರ್ತಾರೆ, ನಾವು ಎಲ್ಲಿಗೆ ಅಂತ ಕೇಳಿಬಿಟ್ಟು. ಅದರ ಕೆಲಸ ಖೋತಾ ಆದ್ರೆ ಅವರು ನಮಗೆ ಥೂ ಯಾವನ್ರಿ ಅವನು ಅಪಶಕುನದ ಆಸಾಮಿ ಅಂತ ಬೈಯಕ್ಕಿಲ್ಲಾ?

ಹೌದು ಕಣಯ್ಯ.. ಅಂತ ಒಪ್ಪಿಗೆ ಸೂಚಿಸಿದರು. ಹಾಗೆ.. ಹೂಂ.. ಬಾಡಿಗೆ ಎಷ್ಟು. ಹಾಂ.. ಒಂಟಿಕೊಪ್ಪಲು.. ಮನೆ.. ಅಂತಂದರು.

ಒಂಟಿಕೊಪ್ಪಲೋ ತೊಣಚಿಕೊಪ್ಪಲೋ ಬಾಡಿಗೆ ಕೊಟ್ಟೇ ಕೊಡತೀರ. ಕೊಡದೀರ ಎಲ್ಲೋಯ್ತೀರಾ ಸಾಮಿ ಅಂದ ಮಸ್ತಾನ್.. ಅದು ಸರಿ ಎಷ್ಟು ಹೇಳು ಅಂದರು ಭಟ್ಟರು.

ಸಾಮಿ ಎಷ್ಟು ಕಿತ ನೀವು ಟಾಂಗಾದಾಗೆ ಓಡಾಡಿದೀರ... ನಿಮಗೇ ಗೊತ್ತು.. ಎಷ್ಟು ಅಂತ... ನೀವು ಬಡಾ ದಿಲ್‌ದಾರ್ ಸಾಮಿ ಹಂಗಿದೀರ ನಮ್ಮಂತ ಗರೀಬ್ ಜನದ್ದು ಹೊಟ್ಟೆಮೇಲೆ... ಈ ಘೋಡಾದು ಹೊಟ್ಟೆ ಮೇಲೆ.. ಹೊಡಯಕ್ಕಿಲ್ಲ ಅಂತ ನಂಗೆ ನಂಬಿಕೆ ಐತೆ..

ಸಾಮಿ.. ತುಂ ಆರಾಮ ಸೆ ಬೈಟೋ.. ಸಾಮಿ.. ಸಾಮಿ ತೋಡ ಮೇಲೆ ಬನ್ನಿ... ಔರ್ ತೋಡ.. ಅಬ್‌ಟೀಕ್ ಹೋಗಯೆ... ಗಾಡಿ... ಹಿಂಬಾರ ಆದ್ರೆ ಗೋಡಗೆ ತಕಲೀಫ್ ಆಗತೆತೆ.. ಛಲ್..ಬೇಟ ಹೈದರ್.. ಓ ಸೈಕಲ್ ವಾಲ.. ಬಾಜು.. ಬಾಜು..

ಅಯ್ಯಂಗಾರ್ ಆರಾಮವಾಗಿ ಕೂತು ಅಂಬಾಳ್ ನಶ್ಯ ಏರಿಸಿ ಕೈಜಾಡಿಸಿ ಏನಯ್ಯ ಸಾಬು.. ಸ್ವಂತದ್ದ ಗಾಡಿ ಅಂದರು.

ಹೂಂ ಸಾಮಿ ಅಲ್ಲಾದು ದಯೆ.. ನಿಮ್ಮಂತೋರ ಆಶೀರ್ವಾದ... ಗಾಡಿ ಸ್ವಂತ ಮಾಡಿಕೊಂಡಿದೀನಿ ಸಾಮಿ... ಸಾಮಿ.. ''ಹೈದರ್''ಲು ಅಂದ... ಓ ಟಿಪ್ಪು ತಂದೆ 'ಹೈದರ್' ಅಂದ್ರು ಭಟ್ರು. ನೈ ನೈ ಸಾಬ್.. ಇದು ನಮ್ದು ಗೋಡ ''ಹೈದರು..'' ಏಕ್‌ದಂ.. ಒಂದೇ ಇಸ್ಪೀಡು. ಟಕಟಕ... ಅಂತ. ಇದು ಬಡಾಖಾರ್ಂದಾರ್ದು ಗೋಡ ಸಾಮಿ. ಇದರದು ವಂಶದ್ದು ಗೋಡಗಳು ಅರಮನೆ ಫೌಜಲ್ಲಿ ಇದ್ದವಂತೆ. ನಮ್ದು ದಾದ ಮಹಮದ್ ಗೌಸು... ಅರಮನೆ ಪೈಲ್ವಾನ್...

ಅವರು ಗೋಡಾಗಳಿಗೆ ಮಾಲೀಸ್ ಮಾಡೋದ್ರಲ್ಲಿ ಉಸ್ತಾದು... ನಮ್ದು ದಾದ ಬುಡ್ಡ ಆಗ್ಬಿಟ್ಟು ಕೆಲಸ ಬಿಡೋವಾಗ, ಒಂದು ಕುದುರೆ ತೋಫಾ ಕೊಟ್ಟರು ಮಾರಾಜರು. ಈ ಹೈದರ್ರು ಅದರದು ಮೊಮ್ಮಗ... ಈ ಹೈದರ್ರು ಬಲೆ ಪಾಕಡಾ ಸಾಮಿ.. ಅರಮನೆದು ಮುಂದೆ ಹೋದರೆ ಸೀದಾ ನೋಡ್ಕೊಂಡು ಹೋಗಕ್ಕಿಲ್ಲ ಅರಮನೆ ನೋಡ್ತಾ.. ನೋಡ್ತಾ.. ಖುಷಿಗೆ ಪಟ್ಕೊಂಡಿ.. ಹೋಗತಾನೆ. ಇನ್ನು ಸ್ವಾಚು ಸರ್ಕಲ್... ಸುತ್ತೋವಾಗ.. ಒಂದು ನಿಮಿಷ ನಿಂತ್ಕಂಡಿ.. ನಜೆರ್ರುಗೆ ಒಪ್ಪಿಸಿ ಮುಂದೆ ಹೋಗ್ತಾನೆ ಸಾಮಿ ಅಂದ.

ಭಟ್ಟರು ಅವರ ಖಾಂದಾನೋರೆಲ್ಲಾ ಮಾಡಿದ ಕೆಲಸ ಅಲ್ಲವಾ. ಅದೂ ಮಾಡ್ತಾ ಇದೆ. ಕುದುರೆ ಚೆನ್ನಾಗಿ ಸಾಕಿದಿ ಕಣಯ್ಯ ಅಂದರು. ಸ್ವಾಮಿ ಸಚ್ ಬೋಲ್ತಾಹುಂ... ನಿಜ ಹೇಳ್ತೀನಿ.. ಕೈಯಾಗಿ... ಚಾಟಿ ಇದ್ರೂ ಒಂದು ಸರ್ತಿನೂ ಒಂದು ಏಟು ಹಾಕಿಲ್ಲ... ಸಾಮಿ ನಮ್ದು ಮನೇಲಿ 6 ಜನ. ಅಸಲಿಗೆ ಲೆಕ್ಕಕ್ಕೆ ಏಳು ಜನ. ಈ ಹೈದರ್‌ನ ಸೇರಿಸಿ, ಹೈದರ್ ಛಲ್‌ಬೇಟ.. ಜರ ಜಲ್ದಿ ಚಲೋ... ಗಾಡಿಗೆ ಹೊಡೆಯೋವಾಗ ಮಾತಿಗೆ ಆಡ್ಕೊಂಡು ಹೋಗಬೇಕು ಸಾಮಿ.. ನಮ್ದು ಮಾತ್ಗೆ ಈ ಹೈದರು ಹೌದು ಹೌದು.. ಕರಕೆ ತಲೆಗೆ ಅಲ್ಲಾಡಿಸ್ತಾನೆ. ಭಗವಾನ್ ಕೆ ಕಸಂ... ಈ ಹೈದರ್‌ನ ಮುಟ್ಕೊಂಡು ಸತ್ಯಗೆ ಹೇಳ್ತೀನಿ.. ದಿನಾ 250–300ಕ್ಕೆ ಮೋಸಗೆ ಇಲ್ಲ ಸಾಮಿ... ದಸರಾ ಟೇಮು.. ಫಾರಿನ್ನೋರು ಗಿರಾಕಿ ಸಿಕ್ಕರೆ.. 500–600 ರೂಪಾಯಿ ಕಮಾಯಿ ಗ್ಯಾರಂಟಿ. ಎಷ್ಟೇ ಕಮಾಯಿ ಆಗಲಿ ಎಲ್ಲಾ ನಮ್ದು ಬೀವಿದು ಎಲೆ ಅಡಿಕೆದು ಚೀಲಾಗೆ ಹೋಗತೈತೆ. ಹೈದರ್ದು ಗಂಟೆದು ಶಬ್ದ ಕೇಳತ್ತಿದ್ದಂಗೆ ನಮ್ದು ಬೀವಿ ಮಮ್ತಾಜ್ ಬೇಗಂ ಬಂದು ಜೇಬೆಲ್ಲಾ ಜಪ್ತಿಗೆ ಮಾಡಿ... ಪೈಸ ಬಿಡದಂಗೆ ಖಾಲಿ ಮಾಡತಾರೆ. ನಾನು ತಲೆಗೆ ಕೆರ್ಕೊಂಡು ನಿಂತರೆ... ಕ್ಯೊಂಜಿ.. ನಿಮಗೆ ಯಾಕೆ ಪೈಸ? ನಾಷ್ಟ ಊಟ ಮನೇಲೇ ಆಯ್ತದೆ... ಅಂತ ಗದರಿಬಿಟ್ಟಿ ಹೋಗ್ತಾರೆ.. ಎಲೆ ಅಡಿಕೆ ಚೀಲ ಸೊಂಟಕ್ಕೆ ಸಿಕ್ಕಿಸಿ ಬಾಯಲ್ಲಿ ಪಾನ್ ಹಾಕ್ಕೊಂಡಿ.

ಸಾಮಿ.. ನಾನು ಕಿಲಾಡಿ, ನಿನ್ನೆ ಒಂದು ಕೆಲಸ ಮಾಡಿದೆ, ಮಸ್ತ್ ಕಮಾಯಿ ಆಗಿತ್ತು ಯಾರೋ ಫಾರಿನ್ನೋರು. ಪೂರ ದಿನ ಮೈಸೂರು ಸುತ್ತಿಸಿದೆ. ರಾತ್ರಿ 8ಕ್ಕೆ ಹೋಟಲ್‌ಗೆ ಬಿಟ್ಟೆ ಪೂರ ಚೆ ಸೌ 600ರೂ. ಕೊಟ್ಟರು ಸಾಮಿ. ಮನೇಲಿ ಹೆಂಗಸರಿಗೆ ಗೊತ್ತು ಸಾಮಿ.. ರಜಾಗೆ ದಿನ ಒಳ್ಳೆ ಕಮಾಯಿ ಆಗಿರತ್ತೆ ಅಂತ. ಜಗಡ ಕೈಕು ಸಾಮಿ ನಾನೇ 450 ಕೊಟ್ಟು ಖಾಲಿ ಜೇಬು ತೋರಿಸಿದೆ. ಹಮಾರ ಬೀವಿ ಖುಷ್ ಹಂಬಿ ಖುಷ್.. ನಮ್ದು ಬೀಡಿ, ಟೀ, ಪಾನ್ ಖರ್ಚಿಗೆ 25ರೂಪಾಯಿ ಕೊಟ್ಟಳು. ಸಾಕಾ... ಇರಲಿ ಬಿಡಿ ಸಾಮಿ. ಕೊಡೋನು ಬಿಡೋನು ಉಪ್ಪರವಾಲಿ... ಇದಾನೆ.

ನಾವು ಇಷ್ಟೆಲ್ಲಾ ಕಷ್ಟ ಪಡೋದು ಯಾಕೆ ಸಾಮಿ ತೋಡ ಖುಷಿಗೆ ಇಲ್ಲಾ ಅಂದ್ರೆ. ಜುಮ್ಮಕಾದಿನ ಅದೇ ಸುಕ್ರವಾರ... ಹೊಸ ಸಿನಮಾ ಬರ್ತವೆ ನೋಡಬೇಕು. ಖರ್ಚು ಜಾಸ್ತಿ. ಇನ್ನು ಗಿರಾಕಿ ಇಲ್ಲದಾಗ ಹೈದರ್ ಬಾಯಿಗೆ ಹುರಳಿದು ಥೈಲಿ ಕಟ್ಟಿ... ಚನ್ನಪ್ಪನ ಹುಲ್ಲಿನ ಮಂಡಿಲಿ ಅಂದರ್–ಬಾಹರ್‌ಗೆ ಆಡ್ತೀವಿ. ಹೋದರೆ ಒಂದು 50 ಬಂದರೆ ಒಂದು 100 ಚಟ ಸಾಮಿ. ಅದಕ್ಕೆ ಯೋಚನೆ ಮಾಡಿದೆ ಹೆಂಗಾನ ಮಾಡಿ ಒಂದಿಷ್ಟು ಕಾಸು ಉಳಿಸಬೇಕು ಅಂತ. ಅಚಾನಕ್ ಒಂದು Idea ಬಂತು. ಸಾಮಿ ಆಗೆಯ ಒಂಟಿಕೊಪ್ಪಲು, ಹೂಂ... ಇನ್ನೂ

ಮುಂದೆ... ನಡಿ ಹೇಳ್ತೀನಿ ಅಂದರು ಭಟ್ಟರು. ಭಲ್ ಬೇಟ... ನಜದೀಕ್ ಆಗಯೆ.. ಭಲ್.. ಭಲ್.. ಏನು ಬಂತೋ ಐಡಿಯಾ ಅಂದರು ಭಟ್ಟರು. ನಾನು ಪಚ್ಚಾಸ್ ಪಚ್ಚಾಸ್ ಕತೀನ್ ನೋಟ – 50 ರೂ. 3 ನೋಟು ಚಿಕ್ಕದಾಗಿ ಮಡಸಿ ಪ್ಲಾಸ್ಟಿಕ್ ಕವರನಾಗಿ ಮಡಗಿ, ದಾರ ಸುತ್ತಿ ಹೈದರ್‌ದು ಹುರಳಿದು ಚೀಲದಲ್ಲಿ ಚುಪಾಕೆ ರಖದಿಯ. ಮುಚ್ಚಿಟ್ಟು ಬಿಟ್ಟೆ ನಮ್ದು ಬೀವಿಗೆ 450 ಕೊಟ್ಟು ಖಾಲಿದು ಜೋಬಿಗೆ ತೋರಿಸಿ ಯಾಮಾರಿಸಿ ಬಿಟ್ಟೆ

ನಮ್ದು ಬೀವಿ... ಚಲೋ ಬೈ ಅಂದರ್ ಖಾನ ತಯಾರ್ ಹೈ ಅಂತ ಆವಾಜ್ ಹಾಕಿದ್ರು ನಾನು ಹಾಂ.. ಹಾಂ.. ಅಂತ ಅಲ್ಲಿ ಇಲ್ಲಿ ನೋಡ್ತಾ ಇದ್ದೆ. ಅರೆ ದಸ್ ಬಜೆಗಯಾ... ಚಲೋ ಅಂತ ಹೇಳಿ ಗಾಡಿ ಕೆಳಗೆ ನೇತಾಡ್ತ ಇದ್ದ ಹುರಳಿ ಚೀಲ ಬಿಚ್ಚಿ ಹೈದರ್ ಮುಖಕ್ಕೆ ತಗಲಾಕಿ ಖಾ ಬೇಟ ಖಾ ಅಂತ ಅದರ ಬೆನ್ನ ಸವರಿ ನನ್ನ ತಳ್ಕೊಂಡು ಒಳಗೆ ಹೋದಳು. ನಂಗೋ 50ರೂ. 3 ನೋಟು... 150 ಹೋಯ್ತಲ್ಲ ಅಂತ ಯೋಚನೇಲಿ ಊಟ ಸೇರಲಿಲ್ಲ, ಕ್ಯಾಜಿ ಬಾಹರ್.. ಖಾಕೆ ಆಗಯಕ್ಯಾ... ಅಂದ್ರು ಬೀವಿ... ನೈಜಿ ಅಂತ ಹೇಳಿ ನೀರಿನ ಚಂಬು ಖಾಲಿ ಮಾಡಿ ಜೋರಾಗಿ ತೇಗಿ... ಎದ್ದು ಹೈದರ್ ಹತ್ತಿರ ಓಡಿದೆ.. ಥೈಲಿಗೆ ಚೆಕ್ ಮಾಡಿದ್ರೆ.. ಹೈದರ್ ಹುರಳಿ ಪೂರಾಗೆ ಪೂರ ತಿಂದುಬುಟ್ಟು.. ಮೆಲಕು ಹಾಕ್ತಾ ಅವನೆ. 150ರೂ. ಬೆವರಿಂದು ಕಮಾಯಿ.. ಕುತ್ಕೊಂಡು ಯೋಚನೆ ಮಾಡಿ ಅದೇ ಸರಿ ಅನ್ಕೊಂಡು ಹೋಗಿ ಮಲಗಿದೆ ಗಪ್ ಚುಪ್ ಆಗಿ. ಬೆಳಗಿನ ಜಾವ 5ಕ್ಕೆ ಎದ್ದಿ ಹೈದರ್‌ಗೆ ಹತ್ತಿರ ಹೋಗಿ... ಚೆಕ್‌ಗೆ ಮಾಡಿದ್ರೆ... ಇನ್ನಾ ಹಾಕಿಲ್ಲ ಅಂದೆ. ಭಟ್ಟರು ಗಾಬರಿ ಇಂದ ಏನು ಅಂದ್ರು... ಅದೇ ಲದ್ದಿ ಸಾಮಿ ಅಂದ ಸಾಬು ಭಟ್ಟರಿಗೆ... ಏನು ಅಂತ ಕೇಳಬಾರದಾಗಿತ್ತು ಅನ್ನಿಸ್ತು. ಸಾಮಿ.. ನಾನು ಏನು ಮಾಡಿದೆ ಗೊತ್ತಾ ಸಾಮಿ... ಹೈದರ್‌ದು ಮೈ ಎಲ್ಲಾ ಚಂದಾಗಿ ಮಸಾಜ್‌ಗೆ ಮಾಡಿ ಚೆನ್ನಾಗಿ ಬೆನ್ನು ತಟ್ಟಿದೆ... ಆಗ ಬಿತ್ತು ನೋಡಿ, ತೊಪ್ ತೊಪ್ ಅಂತ. ''ಏನು ಬಿದ್ದಿದ್ದು'' ಅಂದ್ರು ಭಟ್ಟರೇ ಅದೇ ಲದ್ದಿ ಸಾಮಿ. ಮತ್ತದೇ ತಪ್ಪು ಅನ್ಕೊಂಡ್ರು ಭಟ್ಟರು. ಸಾಬು, ಒಂದು ಕಡ್ಡಿ ತಗೊಂಡು ಹಿಂಗಂದಿ. 50ರ 3 ನೋಟು 150ರೂ. ಇದ್ದ ಪ್ಲಾಸ್ಟಿಕ್ ಪ್ಯಾಕೆಟ್ಟು ಅಲ್ಲೇ ಐತೆ. ದಿಲ್ ಖುಷ್ ಹೋಗಯೆ ಸಾಮಿ. ಹಂಗೆ ಅದ್ನ ಕಿಲೀನ್‌ಗೆ ಮಾಡಬಿಟ್ಟು ಜೋಬಿಗೆ ಸೇರಿಸಿದೆ. ಅಂತಿದ್ದಂಗೆ ಭಟ್ಟರು ಆಂ.. ಅಲ್ಲಿ ತೆಂಗಿನ ಮರ ಇರೋಮನೆ.. ಹೆಂಚಿಂದು.. ಓ.. ಬಡಾ ಮೆಕಾನ್.. ಸಾಮಿ ಗಾಡಿ ಪೂರ ನಿಲ್ಲೋಗಂಟ ಇಳಿಬೇಡಿ.. ಓ ಓ ಓ.. ಹಲ್ಲು.. ಹಲ್ಲು.. ಬೇಟ ಖಡ ಹೋಜಾವ್ ಸಾಮಿ ಇಳೀರಿ... ನಾನು ಲಗ್ಗೇಜ್ ಇಳಿಸ್ತೀನಿ ಅಂದ ಸಾಬು... ಕೈಯಲ್ಲಿ ದರ್ಬೆ ಕಟ್ಟು ಹಿಡಿದು ಭಟ್ಟರ ಭಾರಿ ಬಾಡಿ ಲ್ಯಾಂಡ್ ಆಯಿತು.

ಸಾಬು ಒಂದೊಂದೆ ಲಗ್ಗೇಜು ತಂದು ಜಗಲಿ ಮೇಲೆ ಜೋಡಿಸಿದ. ಭಟ್ಟರು ನಶ್ಯ ಏರಿಸಿ ಲೆಕ್ಕ ಮಾಡಿದರು. ಟೀಕ್ ಹೈ ಕ್ಯಾ ಪೂರಾ ದಸ್ ಐಟಂ.. ಗಿಂತಿ ಕರೋ ಸಾಮಿ ಅಂದ ಸಾಬಿ. ಸರಿಯಾಗಿದೆ ಕಣೋ ಅಂತ ಜನಿವಾರಕ್ಕೆ ಕೈ ಹಾಕಿ ಬೀಗದ ಕೈ ತೊಗೊಂಡು ಬೀಗ ತೆಗೆದರು. ಸಾಬು, ಸಾಮಿ ಮೈ ಅಂದರ್ ಖು ಇದನ್ನೆಲ್ಲಾ ಒಳಗೆ ಇಡಲಾ ಅಂದ. ಹೂಂ ಇಡು ಅಂದರು ಭಟ್ಟರು.. ಸಾಬು ಹಾಗೇ ಮಾಡಿ ಕೈಕಟ್ಟಿ ನಿಂತ.

ಭಟ್ಟರು ಸಾಬು ಎಷ್ಟೋ ಬಾಡಿಗೆ ಅಂದ್ರು. ಲಗ್ಗೇಜು ಬಸ್ ಮೇಲಿಂದ ಇಳಿಸಿದ್ದು ಇಲ್ಲಿಟ್ಟದ್ದು ಎಲ್ಲಾ ಸೇರಿಸಿ 120ರೂ. ಕೊಡಿ ಸಾಮಿ ಅಂದ ಸಾಬು. ಭಟ್ಟರು 100ರ ಎರಡು ನೋಟು ಸಾಬು ಕೈಗೆ ಹಾಕಿದರು. ಸಾಬು ಅದನ್ನ ಪೈಜಾಮ ಜೇಬಿಗೆ ಸೇರಿಸಿ ಇನ್ನೊಂದು ಜೋಬಿಂದ 50ರ ಒಂದು ನೋಟು 10ರ ಮೂರು ನೋಟು ತೆಗೆದು ಮುಂದೆ ಹಿಡಿದ. 50ರ ನೋಟು ನೋಡಿದ ತಕ್ಷಣ ಭಟ್ಟರು flash backಗೆ ಹೋದರು. Plastic cover, 50ರ 3 ನೋಟು, ಕುದುರೆ etc. ದೇಹಾವರಿ ನಗು ಬೀರ್ತಾ.. ತುಂಬಾ ಕೆಲಸ ಮಾಡಿದೀಯ. Bus ಮೇಲೆ ಹತ್ತಿ ಲಗೇಜ್ ಇಳಿಸಿದೀಯ, ಒಳಗೆ ತಂದು ಇಟ್ಟಿದೀಯ ಈ ದುಡ್ಡನ್ನ ನೀನೇ ತಗೋ ರಾಜು ಹೋಟಲಲ್ಲಿ ಸೆಟ್ ದೋಸೆ ತಿಂದು ಕಾಫಿ ಕುಡಿ ಅಂತ ಹೇಳಿ ಗೇಟ್‌ವರೆಗೂ ಅವನ್ನ ಬಿಟ್ಟು ಒಳಗೆ ಬಂದರು ಭಟ್ಟರು.

ಇತ್ತೀಚೆಗೆ ಬಂದ ವರದಿ ಪ್ರಕಾರ ಮೇಲುಕೋಟೆ ತಿರುನಾರಾಯಣ ಭಟ್ಟರ್, ಆಗಮಿಕರು, ಜ್ಯೋತಿಷ್ಯ ಶಾಸ್ತ್ರ ಪಂಡಿತರು, ಯಾರೇ 50ರೂ. ನೋಟು ಕೊಟ್ಟರು ಕೈಯಲ್ಲಿ ಮುಟ್ಟದೆ ಚಿಲ್ಲರೆ ಕೊಡಿ ಅಂತ ಒತ್ತಾಯ ಮಾಡಿ ತೆಗೆದು ಕೊಳ್ಳುತ್ತಾರಂತೆ.

❑

---

ಪ್ರತಿ ಬಾರಿ ಶಾಸಕರಾದವರೂ ಮಾಡುತ್ತಾರೆ
ಕುಟುಂಬದವರೊಂದಿಗೆ ವಿದೇಶ ಪ್ರವಾಸ
ಅದಕ್ಕೆ ಹೆಸರು ಮಾತ್ರ ಅಭಿವೃದ್ಧಿ ಅಧ್ಯಯನ
ಆದರೆ ಆಗುವುದು ಮಾತ್ರ ಮೋಜಿನ ಯಾನ

* * *

ಇಂದೊಂದು ಪಕ್ಷಕ್ಕೆ ನಾಳೆಯೊಂದು ಪಕ್ಷಕ್ಕೆ
ಜೋತು ಬೀಳುವುದು ನಿಜಕ್ಕೂ ಅಧಿಕಾರಕ್ಕೆ
ಇಲ್ಲೋ ಅಲ್ಲೋ ಎಲ್ಲೋ ಒಂದು ಸಿಕ್ಕರೆ ಸಾಕು
ನನಗೊಂದು ಮಂತ್ರಿಗಿರಿ ಅನ್ನೋದೇ ಜೋಕು

* * *

ರಾಜಕೀಯ ಅಂದರೆ ಕಪ್ಪು ಹಣದ ಉಗ್ರಾಣ
ಬಿಡುವುದಿಲ್ಲ ಹಣ ಬೇಕಾದರೆ ಬಿಡುತ್ತಾರೆ ಪ್ರಾಣ
ಗೊತ್ತು ಇವರಿಗೆ ನಮ್ಮನ್ನು ಧಾಳಿಮಾಡುವುದಿಲ್ಲ
ದುಡ್ಡು ಕೂಡಿಹಾಕಲು ಯಾರದೂ ಮುಲಾಜಿಲ್ಲ

*– ಸುಕೇಶವ*

**ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯಲ್ಲಿ**
**ದ್ವಿತೀಯ ಬಹುಮಾನ ಪಡೆದ ಲೇಖನ**

# ಪ್ಯಾರ್‌ಗೆ ಆಗುಬ್ಬಿಟೈತೇ...

- ಗುರುಮೂರ್ತಿ ಇಂದ್ರಾಳಿ

'ಸಖತ್ ಹಿಟ್ ಮಗಾ ಸಾಂಗು. ನಾನೂ ನನ್ ಲವ್ವರ್‌ಗೆ ಇದೇ ಸಾಂಗು ಹಾಡಿ ಬುಟ್ಟಿಗೆ ಹಾಕ್ಕೊಂಡಿದ್ದೀನಿ ನೋಡ್ ಮಗಾ' ಅಂತ ತಿಮ್ಮ ತಿವಿದು ಹೇಳಿದ ರಂಗನಿಗೆ. ಸತತ ನಾಲ್ಕು ವರ್ಷದಿಂದ ನಾಲ್ಕು ಹುಡುಗಿಯರಿಗೆ ಲವ್ ಮಾಡೋಕೆ ಟ್ರೈ ಮಾಡಿ ಸೋತು ಸುಣ್ಣವಾದ ರಂಗ ಈ ಸಾಂಗು ಕೇಳಿದ್ರೇನೇ ಉರೀತಿದ್ದ.

'ಯಾಕೋ ಈ ಸಾಂಗು ಹಾಡಿ ನನ್ನನ್ನು ಹುಚ್ಚನನ್ನಾಗಿಸ್ತೀರ? ಈ ದಿಲ್, ಅಂದ್ರೆ ಹಾರ್ಟು. ಅದೇ ಹೃದಯ ಅಂತಾರಲ್ಲ ಅದನ್ನು ಪರಪರ ಕೆರ್ಕೊಂಡು, ಹುಡ್ಗಿ ಹಿಂದೆ ಸರಸರ ಅಂತ ಹೋಗಿ ಪ್ರೇಮಜ್ವರ ಶುರು ಹಚ್ಕೊಂಡು, ಮರ ಮರ ಸುತ್ತಾಡಿ, ತರ ತರ ಹಾಡು ಹಾಡ್ತಾ ನರ ವೀಕ್ ಮಾಡ್ಕೊಂಡು ಹೆತ್ತವರಿಗೆ ಭಾರ ಆಗಿ ನೇಚರ್ ಹಾಳು ಮಾಡ್ಕೋಬೇಡ್ರಲೋ' ಅಂತ ಚಡ್ಡಿದೋಸ್ತುಗಳಿಗೆಲ್ಲ ಎಚ್ಚರಿಕೆಯ ಮಾತಾಡಿದ. ಕಾರಣ ರಂಗನನ್ನು ಯಾವ ಹುಡ್ಗೀನೂ ಲವ್ ಮಾಡಿರ್ಲಿಲ್ಲ. ಅದಕ್ಕೆ ಈ ಬಿಟ್ಟಿ ಉಪದೇಶ! ಇವನ ಗೋಳು ನೋಡಲಾರದ ಕೊನೇ ಬೆಂಚಿನ ಸ್ನೇಹಿತರೆಲ್ಲ ಜೊತೆಯಾಗಿ ರಂಗ ಹೀಗೇ ಮಾತಾಡ್ತಿದ್ರೆ ಮಠ ಸೇರಿ ಕೊಳ್ತಾನೆ ಅಂತ ಅಂದ್ಕೊಂಡು ರಂಗನೂ ಪ್ಯಾರ್‌ಗೆ ಆಗುಬ್ಬಿಟೈತೇ... ಅಂತ ಖುಷಿಯಿಂದ ಸಾಂಗು ಹಾಡೋ ಹಾಗೆ ಮಾಡ್ಲೇ ಬೇಕು ಅಂತ ಪಣ ತೊಟ್ಟರು. ಸಕತ್ ಥ್ರಿಲ್ ಆದ ರಂಗ ಲವ್ ಸಕ್ಸಸ್ ಆದ್ರೆ ಬಾರ್ ಪಾರ್ಟಿ ಗ್ಯಾರಂಟಿ ಅಂತ ಆವಾಜ್ ಹಾಕಿದ. ಚಡ್ಡಿ ಹೈಕಳು ಹುರ್ರೇ... ಅಂತ ಚಪ್ಪಾಳೆ ಬಾರಿಸ್ಕೊಂಡು ವಿಸೀಲ್ ಹೊಡೀತಾ ಈ ರಂಗನಿಗೆ ಯಾವ ಹುಡ್ಗಿ ಸೆಟ್ ಆಗ್ಬಹುದು ಅಂತ ಕೂಡಲೇ ಲೆಕ್ಕ ಹಾಕಿದ್ರು. ಯಾಕೇಂದ್ರೆ ಪಾರ್ಟಿ ಪಕ್ಕಾ ಆಗಿತ್ತು. ಮೂಲೆ ಮನೆ ಮಾಲಾ, ಮೇಲಿನ ಮನೆ ಮೀನಾಕ್ಷಿ, ತರಕಾರಿ ಅಂಗಡಿ ಅಂಬುಜಾ, ಚರ್ಮುರಿ ಅಂಗಡಿ ಚೆನ್ನಿ ಬಿಟ್ರೆ ಬೇರೆ ಎಲ್ಲಾ ಹುಡ್ಗೀರು ಪ್ಯಾರ್‌ಗೆ.. ಲೀಸ್ಟ್‌ಗೆ ಸೇರಿ ಹೋಗಿದ್ರು. ಇದರಲ್ಲೆರಡು ರಂಗನ ಬಜೆಟ್‌ಗೆ ಸರಿ ಹೊಂದೊಲ್ಲ, ಇನ್ನೆರಡು ರಂಗನೇ ಅಡ್ಜೆಸ್ಟ್ ಆಗೊಲ್ಲ.

'ಲೇ ಮಚ್ಚ.. ಜಗಲಿಕಟ್ಟೆ ಜಲಜ ರಂಗನಿಗೆ ಸಕತ್ತಾದ ಜೋಡಿ ಕಣ್ರೋ' ಅಂತ ಕುತೂಹಲಕಾರಿಯಾದದ್ದೇನೋ ಕಂಡು ಹಿಡಿದಂತೆ ಒಬ್ಬ ಅರಚಿದ.

'ಅವಳಿಗೆ ವಯಸ್ಸು ನಲ್ವತ್ತು ಮಾರಾಯ, ಅದು ನಿನಗೆ ಗೊತ್ತುಂಟಾ? ಅವಳು ಕಲಿತದ್ದು ಜಾಸ್ತಿಯಾಗಿ ಈಗ ಮೂರನೇ ತರಗತಿಯ ಪಾಠವನ್ನು ದಿನಾ ಓದುತ್ತಾಳೆ. ಯಾಕೆ ಗೊತ್ತುಂಟೋ? ಅವಳು ಈಗ ಮೂರನೇ ಕ್ಲಾಸಿನ ಟೀಚರ್ ಮಾರಾಯ. ನೀನು ಎಂಥದು ನೀನು? ನಮ್ಮ ರಂಗನಿಗೆ ನೀನು ಅಂಥ ಜೋಡಿಯನ್ನು ಹುಡುಕುವುದಾ? ನಿಂಗೆ ಮಂಡೆ

ಸಮ ಉಂಟಾ? ನಮ್ಮ ಮಂಗಳೂರಿಗೆ ಬಂದು ನೀನು ಹೀಗೆ ಮಾತಾಡಿದರೆ ನಿನ್ನ ಸೊಂಟ ಮುರೀತಾರೆ ಅದು ಗೊತ್ತುಂಟಾ?'

'ಗುರೂ.. ಆದ್ರೂ ಜಲಜ ಸ್ವೀಟ್ ಸಿಕ್ಸ್‌ಟೀನ್ ತರ ಇದ್ದಾಳೆ. ಈಡು ಜೋಡು ಸರಿ ಹೊಂದುತ್ತೆ. ರಂಗ ಹೂಂ ಅಂದ್ರೆ ಸಾಕು ಜಲಜ ರಂಗನ ಒಂದೇ ನೋಟಕ್ಕೆ ಜಾರಿ ಬೀಳ್ತಾಳೆ' ಇನ್ನೊಬ್ಬನ ಡೈಲಾಗು ಸೇರಿತ್ತು.

'ಏ ಮಂಗ್ಯಾ.. ಇವನ್ಯಾವನ್ಲ? ನೆನ್ನೆ 'ಡರ್ಟಿ ಪಿಚ್ಚರ್' ನೋಡ್ಕೊಂಡು ಬಂದು ಇವತ್ತು ಡರ್ಟಿ ತರ ಮಾತಾಡೋವ್ನು? ರಂಗನಿಗೆ ಲಂಗ ಧಾವಣಿ ಹಾಕಿರೋ ಹುಡ್ಗಿ ಇದ್ರೆ ಹೇಳೋ ತಮ್ಮಾ' ಮತ್ತೊಬ್ಬನ ಸಲಹೆ.

'ಲೈಫಲ್ಲಿ ಲವ್ ಇಲ್ದೆ ಹೇಗಿರ್ತೀಯ ಕಾಂತ? ಹೇಗಿರ್ತೀಯ? ಲವ್ ಮಾಡ್ದೋರಿಗೆಲ್ಲ ಹಾರ್ಟ್ ಇರೋಲ್ಲ, ಹಾರ್ಟ್ ಇರೋರೆಲ್ಲ ಲವ್ ಮಾಡಲ್ಲ ಗೊತ್ತಾ ಮ್ಯಾನ್? ಐ ಡೋಂಟ್ ಲೈಕ್ ಇಟ್' ಅಂತ ಉಪ್ಪಿ ಫ್ಯಾನು ಕರಿಸುಬ್ಬು ಹೇಳಿದ.

'ಲೋ ಯಾಕ್ರೋ ನೀವೆಲ್ಲ ಈ ರಂಗನ ತಲೆ ತಿಂತೀರಾ? ಮಗಾ... ನಿನ್ನ ಬೈಕ್‌ಗೆ ಪೆಟ್ರೋಲ್ ಫುಲ್ ಹಾಕ್ಕೊಂಡು ನಾಳೆ ಕಬ್ಬನ್ ಪಾರ್ಕ್ ಹತ್ರ ನಿಂತಿರು. ನಿನ್ಗೆ ಸರಿಯಾದ ಜೋಡಿ ಕರ್ಕೊಂಡು ಬರ್ತೀನಿ' ಅಂತ ಸೆಂಟ್ ಮಂಜ ಖಡಾಖಂಡಿತವಾಗಿ ನುಡಿದ. ರಂಗ ಮಂಜನನ್ನು ತಬ್ಬಿಕೊಂಡು 'ನೀನೇ ನನ್ನ ಕುಚಿಕ್ಕು ಫ್ರೆಂಡ್ ಕಣೋ. ಆಪತ್ಬಾಂದವ ನನ್ನ ಪ್ರೀತಿ ಸ್ವೀಕೃತವಾದಲ್ಲಿ ನಿನ್ನ ಚರಣ ಕಮಲಗಳಿಗೆ ಪುಷ್ಪಗಳನ್ನಿಟ್ಟು ಪಾದ ಪೂಜೆ ಮಾಡ್ತೀನಿ' ಎಂದ. 'ಇವೆಲ್ಲ ಬಿಲ್ಡ್ ಆಫ್ ಬೇಡ ರಂಗ. ಪಾರ್ಟಿ ದಿನ ನಿನ್ನ ಹಾರ್ಟ್ ಗಟ್ಟಿ ಇಲ್ಲದಿದ್ರೂ ಪರ್ವಾಗಿಲ್ಲ, ಕಿಸೆ ಗಟ್ಟಿಯಿದ್ರೆ ಸಾಕು. ಬೆಳಗ್ಗಿನವರೆಗೂ ಎಂಜಾಯ್ ಮಾಡ್ಕೊಂಡು ಇರ್ತೀವಿ' ಎಂದ ಸೆಂಟ್ ಮಂಜ.

ಈ ಡಬ್ಬಾ ನನ್ಮಕ್ಳು ಹಣವೆಲ್ಲಾ ಉಡಾಯಿಸಿ ಬೆಳಗ್ಗೆ ಆಗೋದ್ರೊಳಗೆ ಬೆಗ್ಗರ್ ಮಾಡ್ತಾರೇನೋ ಅಂತ ಹೆದರಿದ ರಂಗ. ಆದ್ರೂ ಹೃದಯದಲ್ಲಿ ಹುಡುಗಿ ನಗ್ತಾಳೆ ಅನ್ನೋ ಫೀಲಿಂಗು! ನೋ ಸ್ಲೀಪಿಂಗು!

ಮರುದಿನ ಹೀರೋ ಆಗಿ ಮಿಂಚುತ್ತಿದ್ದ ರಂಗನ ಬಳಿ ಬಂದರು ಸ್ನೇಹಿತರು. ಜೊತೆಗೊಬ್ಬಳು ಸುಂದರ ಹುಡುಗಿ ಕೂಡಾ ಇದ್ದಳು. ಸೆಂಟ್ ಮಂಜ ರಂಗನ ಕಿವಿಯ ಬಳಿ 'ಮಗಾ.. ಹುಡ್ಗಿ ಏನು ಕೇಳಿದ್ರೂ ಹೌದು ಅನ್ನು ಅಥವಾ ರೈಲು ಬಿಡು. ಅದು ಬಿಟ್ಟು ಬೇರೆ ಏನಾದ್ರೂ ಮಾತಾಡಿದ್ರೆ ಮುಖಕ್ಕೆ ಮಂಗಳಾರತಿ ಆಗುತ್ತೆ ಹುಷಾರು' ಅಂತ ಹೇಳಿ ಅವಳನ್ನು ರಂಗನ ಬಳಿ ಬಿಟ್ಟು ಉಳಿದವರೆಲ್ಲ ದೂರ ಹೋದರು. ರಂಗನ ಮುಂದೆ ಬೆಳದಿಂಗಳ ಬಾಲೆ! ಒಂಟಿಯಾಗಿ ಮಾತಾಡೋ ಅವಕಾಶ. ರಂಗ ಕ್ಲೀನ್ ಬೌಲ್ಡ್! ಹೂ ನಗೆ ಬೀರಿದ ಹುಡುಗಿ 'ನಾನು ಪಾರ್ವತಿ ಅಂತ. ನನ್ನನ್ನು ತುಂಬಾ ದಿನದಿಂದ ನೋಡ್ತಿದ್ದೀರಂತೆ' ಕೇಳಿದಳು. ರಂಗನಿಗೆ ಖುಷಿಯಿಂದ ಹಾರ್ಟ್ ಜೋರಾಗಿ ಹೊಡೆದು ಕೊಂಡಿತು. ಮಂಜ ಹೇಳಿಕೊಟ್ಟಂತೆ 'ಹೌದು' ಎಂದ.

‘ನಿಮ್ಮ ಫ್ರೆಂಡ್ ಹೇಳಿದ್ರು ಬೇರೆ ಯಾವ ಹುಡ್ಗೀರನ್ನು ನೀವು ಇದುವರೆಗೂ ಕಣ್ಣೆತ್ತಿ ಕೂಡಾ ನೋಡಿಲ್ವಂತೆ. ನನಗೋಸ್ಕರ ಏನು ಬೇಕಾದ್ರೂ ಮಾಡ್ತೀರಂತೆ ಹೌದಾ?’ ಎಂದು ಕಣ್ಣು ಮಿಟುಕಿಸಿದಾಗ ರಂಗನಿಗೆ ಅವಳ ಅಂದ ಇನ್ನೂ ಹೆಚ್ಚಾದಂತೆ ಕಂಡು ‘ಹೌದು’ ಎಂದ. ‘ನೇರವಾಗಿ ಹೇಳೋಕೆ ನಿಮ್ಗೆ ಭಯ ಆಗಿರ್ಬೇಕು. ನಿಮ್ಮ ಫ್ರೆಂಡ್ಸ್ ನಿಮ್ಮ ಬಗ್ಗೆ ಎಲ್ಲಾ ಹೇಳಿದ್ದಾರೆ. ನೀವು ತುಂಬಾ ಸ್ಮಾರ್ಟ್ ಆಗಿದ್ದೀರ ಐ ಲೈಕ್ ಯೂ’ ಎಂದಾಗ ರಂಗನಿಗೆ ಸುಸ್ತೋ ಸುಸ್ತು. ‘ಸರಿ ನಾಳೆ ಮೀಟ್ ಮಾಡೋಣ’ ಎಂದವಳೇ ರಂಗನ ಮೊಬೈಲ್ ನಂಬರ್ ಪಡೆದು ‘ಬಾಯ್’ ಹೇಳಿ ಹೊರಟಳು. ರಂಗ ಕನಸಿನ ಲೋಕಕ್ಕೆ ಎಂಟ್ರಿ ಕೊಟ್ಟ. ‘ರಂಗನ ಪ್ರೇಮಕ್ಕೆ ಜೈ...’ ಎಂದು ಸ್ನೇಹಿತರು ಹತ್ತಿರ ಬಂದಾಗಲೇ ವಾಸ್ತವಕ್ಕೆ ಮರಳಿದ ರಂಗ ಆ ಹುಡುಗಿಯ ಬಗ್ಗೆ ವಿಚಾರಿಸಿದ.

‘ಏನಿಲ್ಲ ಮಗಾ.. ನಿನ್ನ ಅಪ್ಪನ ಹತ್ರ ಒಂದು ಕೋಟಿಗೂ ಜಾಸ್ತಿ ಆಸ್ತಿ ಇದೆ. ಹುಡುಗ ದಿನಕ್ಕೊಂದು ಕಾರಲ್ಲಿ ಓಡಾಡ್ತಾನೆ. ಆದ್ರೂ ಇದುವರೆಗೆ ಯಾರನ್ನೂ ಲವ್ ಮಾಡಿಲ್ಲ. ನಿಮ್ಮಂಥ ಚೆಲುವೇನ ನೋಡಿದ್ದೇ ತಡ ನಮ್ಮ ಗುರೂ ಊಟ, ನಿದ್ದೆ ಸರಿಯಾಗಿ ಮಾಡ್ತಿಲ್ಲ. ಆವಾಗಾವಾಗ ಹದಿನೈದು ನಿಮಿಷಕ್ಕೊಮ್ಮೆ ತಲೆಲಿರೋದನ್ನೆಲ್ಲ ಮರೆತು ‘ಗಜನಿ’ ತರ ಏನೇನೋ ಬರ್ಕೋತಾನೆ ಅಂತ ರೈಲು ಬಿಟ್ವಿ ನೋಡು. ಏಕ್‌ದಂ ಚಕ್ಕಾಸ್. ಹುಡ್ಗಿ ಫುಲ್ಲು ಟೆನ್‌ಷನ್’ ಎಂದ ಮಂಜ. ‘ಅಲ್ವೋ ನನ್ನ ಹತ್ರ ಕೋಟಿ ಆಸ್ತಿ ಎಲ್ಲಿಂದ ಬಂತು? ಇರೋದೇ ಒಂದು ಮುರುಕಲು ಮನೆ. ನಾಳೆ ಹುಡ್ಗಿಗೆ ವಿಷ್ಯ ಗೊತ್ತಾದ್ರೆ ನಾನೇನೋ ಮಾಡ್ಲಿ?’ ರಂಗ ಪೇಚಾಡಿದ.

‘ಅದೆಲ್ಲ ಸರಿ. ಬೈಕ್‌ಗೆ ಯಾಕೆ ಪೆಟ್ರೋಲ್ ಹಾಕೋಕೆ ಹೇಳಿದ್ದು?’ ರಂಗ ಕೇಳಿದ. ‘ಅದು ನಮಗಾಗಿ. ನೀನು ಪ್ರೇಮಲೋಕದಲ್ಲಿ ಕನಸು ಕಾಣ್ತಾ ಇರು. ನಾವು ಎಂಜಾಯ್ ಮಾಡ್ಕೊಂಡು ಸಂಜೆಯೊಳಗೆ ಗಾಡಿ ಕೊಡ್ತೀವಿ’ ಎಂದು ಮೂರು ಜನ ರಂಗನ ಚಡ್ಡಿ ಹೈಕಳು ಬೈಕ್ ಏರಿ ಹೊರಟರು. ರಂಗ ಯಾರ್ದೋ ದುಡ್ಡು ಎಲ್ಲಮ್ಮನ ಜಾತ್ರೆ ಅಂದ್ಕೊಂಡ.

ರಾತ್ರಿಯೆಲ್ಲ ನಿದ್ದೆಯಿಲ್ಲದೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ ರಂಗನ ಮೊಬೈಲಿಗೆ ಕರೆ ಬಂತು. ಅದೇ ಪಾರೂಳ ಮಧುರವಾದ ಕಂಠ.

‘ನಾವು ಪಾರ್ಕ್‌ನಲ್ಲಿ ಮೀಟ್ ಮಾಡೋದು ಯಾರಾದ್ರೂ ನೋಡಿದ್ರೆ? ಈಗ್ಲೇ ಮನೇಲಿ ಗೊತ್ತಾದ್ರೆ ರಂಪ ಮಾಡ್ತಾರೆ. ನೀವು ನಾಳೆ ಕಾರಲ್ಲಿ ಬನ್ನಿ’ ಎಂದಳು. ಪಾರ್ವತಿಯ ಮುತ್ತಿನಂಥ ಮಾತಿಗೆ ರಂಗ ಸೋತು ಹೋದ. ಆದ್ರೆ ಕಾರ್ ಎಲ್ಲಿಂದ ತರೋದು? ತಲೆ ಕೆರ್ಕೊಂಡು ಸ್ನೇಹಿತನಿಗೆ ಫೋನಾಯಿಸಿ ವಿಷಯ ತಿಳಿಸಿದ.

‘ಹಾಗಂದ್ಲ ಮಗಾ... ಕಾರ್‌ಗೆ ಏನೋ ಮಾಡೋದು? ಓಕೆ.. ನೀನೇನೂ ಯೋಚ್ನೆ ಮಾಡ್ಬೇಡ. ಪಾರ್ಕ್ ಹತ್ರ ನಾಳೆ ನಿಂತಿರು. ಅವಳು ಬರೋ ಅರ್ಧಗಂಟೆ ಮುಂಚೆ ಕಾರು ಕಳಿಸ್ತೀನಿ. ನನ್ನ ಹಳೇ ದೂರದ ಫ್ರೆಂಡ್ ಹತ್ರ ಕಾರ್ ಇದೆ. ಕಾರ್ ನಿನ್ನದೇ ಅಂತ ಹುಡ್ಗಿ ಹತ್ರ ಹೇಳು. ನೀನೇನೂ ಟೆನ್‌ಷನ್ ಮಾಡ್ಕೋಬೇಡ’ ಎಂದವನು ಫೋನಿಟ್ಟ ಸೆಂಟ್ ಮಂಜ.

ಬೆಳಗ್ಗೆ ಪಾರ್ಕ್ ಹತ್ತಿರ ಕಾರು ತಂದು ಕೊಟ್ಟ ಒಬ್ಬ ದಡೂತಿ ವ್ಯಕ್ತಿ ರಂಗನ ಕೈ ಕುಲುಕಿ ಹೊರಟು ಹೋದ. ಇದಾಗಿ ಸ್ವಲ್ಪ ಹೊತ್ತಿನಲ್ಲಿ ಪಾರೂಳ ಆಗಮನವಾಗಿತ್ತು. 'ಬಂದು ತುಂಬಾ ಹೊತ್ತಾಯ್ತಾ? ಸ್ಸಾರಿ...' ಎಂದು ಹೂ ನಗೆ ಬೀರಿದಳು. 'ಇಟ್ಸ್ ಓಕೆ' ಎಂದು ಕಾರಿನಲ್ಲಿ ಕುಳಿತ ರಂಗ 'ಬನ್ನಿ ಕೂತ್ಕೊಳ್ಳಿ' ಅಂತ ಪ್ರೇಯಸಿಗೆ ಆಹ್ವಾನವಿತ್ತು, 'ನಿನ್ನೆ ರಾತ್ರಿಯಿಂದ ನಿದ್ದೆ ಬಂದಿಲ್ಲ' ಎಂದು ಮನದ ಭಾವನೆಗಳನ್ನು ಒಂದೊಂದಾಗಿ ಹೊರಗಿಟ್ಟ. 'ನಿಮ್ಮಂಥವರು ಸಿಗೋಕೆ ನಾನು ಪುಣ್ಯ ಮಾಡಿದ್ದೆ' ಎಂದು ಪಾರೂ ಲವ್‌ಗೆ ಗ್ರೀನ್ ಸಿಗ್ನಲ್ ಕೊಟ್ಟಳು. ರಂಗನಿಗೆ ಸ್ವರ್ಗಕ್ಕೆ ಮೂರೇ ಗೇಣು. ಇನ್ನೇನು ಪ್ಯಾರ್‌ಗೆ ಆಗ್ಬುಟ್ಟೈತೆ... ಅಂತ ಸಾಂಗ್ ಹಾಡ್ಬೇಕು ಅಂತ ಅಂದ್ಕೊಳೋ ಹೊತ್ತಿಗೆ ಪೊಲೀಸ್ ಪೇದೆಗಳು ಹತ್ತಿರ ಬಂದರು. 'ಗಾಡಿ ನಿಮ್ದೇನಾ?' ಒಬ್ಬ ಪೇದೆ ಕೇಳಿದ.

'ಹೂಂ ಸಾರ್' ಎಂದ ರಂಗ ಎದೆಯುಬ್ಬಿಸುತ್ತ. ಪಕ್ಕದಲ್ಲಿ ಪಾರೂ ಇದ್ದದ್ದರಿಂದ ಹೆಮ್ಮೆಯಿಂದ ಉತ್ತರಿಸಿದ.

'ಹೊರಗೆ ಬಾರೋ ಮಗ್ನೆ..' ದಬಾಯಿಸಿದ ಪೊಲೀಸ್ ಪೇದೆ. ಕಂಗಾಲಾದ ರಂಗ ನಡುಗುತ್ತಲೇ ಇಳಿದ. ಪಾರ್ವತಿಗೂ ಅಚ್ಚರಿಯಾಗಿ ಇಳಿದಳು.

'ಕಾರನ್ನು ಕಳ್ಳತನ ಮಾಡಿ ಹುಡ್ಗೀನ ಕೂರಿಸ್ಕೊಂಡು ಮಜಾ ಉಡಾಯಿಸ್ತಿದ್ದೀಯ? ನಡಿಯೋ ಸ್ಟೇಷನ್‌ಗೆ. ಎಲ್ಲೆಲ್ಲಿ ಎಷ್ಟೆಷ್ಟು ನರ ಇದೆ ಅಂತ ತೋರ್ಸಿ ಕೊಡ್ತೀನಿ.'

'ಸಾರ್... ಸಾರ್ ನಂಗೇನೂ ಗೊತ್ತಿಲ್ಲ ಸಾರ್. ಈ ಕಾರು... ಅದು...' ರಂಗ ಪಾರ್ವತಿಯ ಮುಖ ನೋಡಿದ. ಪಾರೂಳ ಮುಖ ಸಿಟ್ಟಿನಿಂದ ಕೆಂಪಗಾಗಿತ್ತು.

'ಏನಮ್ಮಾ... ನಿನಗೆ ಇವನ ಬಗ್ಗೆ ಗೊತ್ತಾ?' ದರ್ಪವಿತ್ತು ಪೇದೆಯ ಧ್ವನಿಯಲ್ಲಿ.

'ಹೆಚ್ಚೇನೂ ಪರಿಚಯ ಇಲ್ಲ ಸಾರ್. ಫ್ರೆಂಡ್ ಅಂತ ಹೇಳ್ಕೊಂಡು ಎರಡು ದಿನದಿಂದ ಹಿಂದೆ ಬೀಳ್ತಿದ್ದಾನೆ' ಎಂದಳು ಪಾರು. ರಂಗನ ಹಾರ್ಟ್ ಚೂರು ಚೂರಾಗಿ ಒಡೆದು ಹೋಯ್ತು!

'ನೀನು ಹೋಗಮ್ಮ.... ಇವ್ನ ಹೇಗೆ ಬೆಂಡೆತ್ತಬೇಕು ಅಂತ ನನಗ್ಗೊತ್ತು. ಇವ್ರದ್ದೆಲ್ಲ ದೊಡ್ಡ ಗ್ಯಾಂಗ್ ಇರ್ಬೇಕು' ಅಂತ ಶರ್ಟಿನ ಕಾಲರ್ ಹಿಡಿದಾಗ ರಂಗ ಅಳೋದೊಂದೇ ಬಾಕಿ. ಪಾರ್ವತಿ ಮೂತಿ ವಾರೆ ಮಾಡಿ ಸಂಬಂಧವೇ ಇಲ್ಲದಂತೆ ನಡೆದೇ ಬಿಟ್ಟಳು. ಪೊಲೀಸರು ರಂಗನನ್ನು ಜೀಪಿಗೆ ಹಾಕಿ ಸ್ಟೇಷನ್ ಕಡೆ ಹೋದರು.

'ಸಾರ್ ನಿಜವಾಗ್ಲೂ ಹೇಳ್ತೀನಿ. ಯಾವ ವಿಷ್ಯಾನೂ ನಂಗೆ ಗೊತ್ತಿಲ್ಲ ಸಾರ್' ಎಂದು ಗೋಳೋ ಅಂತ ಅತ್ತು ಎಲ್ಲಾ ಪ್ಯಾರ್ ವಿಷ್ಯ ಹೇಳಿದ. ದೇಹದಲ್ಲಿ ಚಡ್ಡಿ ಬಿಟ್ರೆ ಬೇರೇನೂ ಇರ್ಲಿಲ್ಲ. ನಾಲ್ಕು ಜನ ಪೊಲೀಸರು, ಎರಡು ಜನ ಲೇಡಿ ಕಾನ್‌ಸ್ಟೇಬಲ್‌ಗಳ ಎದುರು ರಂಗನ ಮರ್ಯಾದೆ ಹರಾಜಾಗಿತ್ತು. ಸೆಂಟ್ ಮಂಜನ ನಂಬರ್ ತೆಗೆದುಕೊಂಡ ಪೊಲೀಸರು

ಎನ್ಕ್ವಯರಿ ಮಾಡಿದರು. ಮಂಜನ ಹಳೇ ಸ್ನೇಹಿತನ ಪತ್ತೆ ಹಚ್ಚಿ ಕೂಡಲೇ ಬಂಧಿಸಿದ ಮಾಹಿತಿ ಸಿಕ್ಕಿತು. ಸದ್ಯಕ್ಕೆ ರಂಗ ಬಚಾವಾದ. ಈ ಪ್ಯಾರ್, ಇಷ್ಕ್, ಮೊಹಬ್ಬತ್ ಈ ಜನ್ಮದಲ್ಲಿ ಮಾತ್ರವಲ್ಲ ಏಳೇಳು ಜನ್ಮಕ್ಕೂ ಬೇಡ ಅಂತ ಆಗಲೇ ಭೀಷ್ಮ ಪ್ರತಿಜ್ಞೆ ಮಾಡಿಬಿಟ್ಟ. ಈಗ ಬಿಡುಗಡೆಯಾದ್ರೆ ಎಲ್ಲಾದ್ರೂ ಹುಡ್ಗೀರೇ ಇಲ್ಲದ ಕಡೆ ಹೋಗಿ ಬದುಕ್ತೀನಿ. ಸಾಕಪ್ಪಾ ಈ ಲವ್ ಸಹವಾಸ. ಹೆಣ್ಣು, ಹೊನ್ನು, ಮಣ್ಣಿನ ಹಿಂದೆ ಹೋಗ್ಬಾರ್ದು ಅಂತ ಹೇಳಿರೋ ದೊಡ್ಡೋರ ಮಾತೇ ಸರಿ. ಅಪ್ಪ ನೆಟ್ಟ ಆಲದ ಮರದ ಬುಡದಲ್ಲೇ ತುಂಬಾ ಸುಖ ಇದೆ ಎಂದು ಅರಿತುಕೊಂಡ ರಂಗ ಮಕ್ಕಳಂತೆ ಕಣ್ಣೀರು ಸುರಿಸುತ್ತ ತಲೆ ಕೆಳಗೆ ಹಾಕಿಕೊಂಡು ನಿಂತಿದ್ದ. ಇವನ ಅವಸ್ಥೆ ನೋಡಿದ ಒಬ್ಬಳು ಲೇಡಿ ಕಾನ್ಸ್‌ಟೇಬಲ್ ಹತ್ತಿರ ಬಂದು ಕರ್ಚಿಫ್ ಕೊಟ್ಟಳು. ಬೆಚ್ಚಿ ಬಿದ್ದ ರಂಗ. ಇನ್ಮೇಲೆ ಹಾಗೇನೇ ಹುಡ್ಗೀರನ್ನು ನೋಡಿದ ಕೂಡಲೇ ಬೆಚ್ಚಿ ಬೀಳ್ತಾನೆ ಹಾಗಿದೆ ಪರಿಸ್ಥಿತಿ!

'ಸಾರ್ ಏನೋ ಮಣ್ಣು ತಿನ್ನೋ ಕೆಲಸ್ಕೆ ಕೈ ಹಾಕಿ ಪಶ್ಚಾತ್ತಾಪ ಪಡ್ತಿದ್ದಾನೆ. ನಿಜವಾದ ಅಪರಾಧಿ ಸಿಕ್ಕಿದ್ಮೇಲೆ ಇವನ್ಯಾಕೆ ನಮ್ಗೆ? ಒಂದು ಮುಚ್ಚಳಿಕೆ ಬರೆಸಿ ಕಳುಹಿಸೋಣ್ವಾ?' ಕೇಳಿದಳು. ಇನ್ಸ್‌ಪೆಕ್ಟರ್ ಒಪ್ಪಿ 'ಇನ್ನೊಂದ್ಸಲ ಏನಾದ್ರೂ ಇಂಥಾ ಕೆಲಸ್ಕೆ ಕೈ ಹಾಕಿದ್ರೆ ಬೋಟಿ ಕೀಳ್ತೀನಿ ಹುಷಾರ್' ಎಂದಾಗ ಕಾಲಿಗೆ ಬಿದ್ದ ರಂಗ 'ತಪ್ಪಾಯ್ತು ಸಾರ್' ಎಂದ. ಬಟ್ಟೆ ತೊಟ್ಟುಕೊಂಡು ನೆಲ ನೋಡುತ್ತ ಕಣ್ಣೀರು ಒರೆಸಿ ಕರ್ಚೀಫ್‌ನಿಂದ ಮೂಗಲ್ಲಿ ಇಳಿದಿದ್ದ ಸಿಂಬಳ ತೆಗೆಯುತ್ತ ಹೊರ ನಡೆದ. ಲೇಡಿ ಕಾನ್ಸ್‌ಟೇಬಲ್ ಕೂಡಲೇ ಹೊರ ಬಂದು 'ಮಿಸ್ಟರ್ ರಂಗ..' ಕರೆದಳು. ಇನ್ನೇನು ಗ್ರಹಚಾರ ಕಾದಿದೆಯೋ ಅಂತ ತಿರುಗಿದ ರಂಗ.

'ನೀವು ಸಾಧು ಸ್ವಭಾವದವರು ಅಂತ ನಿಮ್ಮ ನಡತೆಯಿಂದ ಗೊತ್ತಾಯ್ತು. ನೀವು ಹುಡುಕುತ್ತಿರೋ ಪ್ರೀತಿ ನಾನು ಕೊಡ್ತೀನಿ. ನಿಮ್ಮನ್ನು ನೋಡಿದಾಗಿಂದ ನನಗೆ ಪ್ಯಾರ್ ಆಗ್‌ಬಿಟ್ಟಿದೆ' ಎಂದಾಗ ರಂಗ ಅವಳಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ಕಾಲಿಗೆ ಬಿದ್ದವನು 'ನನ್ನನ್ನು ಬಿಟ್ಟುಬಿಡಿ ಮೇಡಂ. ಇನ್ಮೇಲೆ ನಾನು ಮೂರು ಹೊತ್ತೂ ದೇವರ ಜಪ ಮಾಡುತ್ತ ಮೋಕ್ಷದ ದಾರಿ ಹುಡುಕ್ತೀನಿ' ಎಂದ. ಆದ್ರೆ ಆಕೆ 'ಎಲ್ಲಾ ಹುಡುಗ್ರೂ ಒಂದೇ ತರ ಇರೋದಿಲ್ಲ. ಹಾಗೆಯೇ ಎಲ್ಲಾ ಹುಡ್ಗೀರೂ ಕೂಡ. ಪ್ರೀತಿಸ್ತಿರೋ ಹದಿಹರೆಯದವರೆಲ್ಲರೂ ಕೊನೇ ತನಕ ಕೈ ಹಿಡೀತೀವಿ ಅನ್ನೋ ವಿಶ್ವಾಸ ಇಟ್ಕೊಂಡೇ ಪ್ರೀತಿಸಿದ್ರೆ ಈ ಪ್ರಪಂಚದಲ್ಲಿ ಮುಂದೆ ಕೂಡಾ ಪ್ರೀತಿಗೆ ಒಳ್ಳೇ ಸ್ಥಾನ ಸಿಗುತ್ತೆ. ಇಲ್ಲಾಂದ್ರೆ ಮುಂದಿನ ಪೀಳಿಗೆಗೆ ಪ್ರೀತಿ ಅಂದ್ರೆ ಏನೂಂತ ಗೊತ್ತಾಗದೆ ಟೈಂ ಪಾಸ್ ಲವ್ ಅಂತ ತಿಳ್ಕೊಂಡು ಟೈಂ ವೇಸ್ಟ್ ಮಾಡಿ ಇರೋ ನಾಲ್ಕು ದಿನದ ಜೀವನಾನ ನರಕ ಮಾಡ್ಕೊಂಡು ಕೊನೇ ಟೈಂನಲ್ಲಿ ಈ ಪ್ರೀತಿ ಎಷ್ಟು ಮಹತ್ವದ್ದು ಅಂತ ಅರಿವಾಗೋವಾಗ ಪಶ್ಚಾತ್ತಾಪ ಕಾಡುತ್ತೆ. ಈಗ್ಲಾದ್ರೂ ನನ್ನ ಒಪ್ಕೋತೀರಾ?' ಎಂದು ಲೇಡಿ ಪೊಲೀಸ್ ನಗು ಚಿಮ್ಮಿ ಹೇಳಿದಾಗ ರಂಗ ಸಂಪೂರ್ಣ ಒಪ್ಪಿಗೆ ಸೂಚಿಸಿದ. ರಂಗನ ದಿಲ್‌ನಲ್ಲಿರೋ ಸಾಂಗು ಮತ್ತೆ ಪ್ಲೇ ಆಯ್ತು. ಪ್ಯಾರ್‌ಗೆ ಆಗ್ಬುಟ್ಟೈತೆ...

❑

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯಲ್ಲಿ
ತೃತೀಯ ಬಹುಮಾನ ಪಡೆದ ಲೇಖನ

# ಕಾಕಾಯಣ

**- ವಿಜಯ ಗುರುರಾಜ**

**ಕಾ**ಕ್ ಚಿಕ್ಕೀ ಓಕಾಕ್ ಚಿಕ್ಕೀ ಇನ್ನೂ ಮಧ್ಯಾಹ್ನ ಹನ್ನೆರಡು ಘಂಟೆ. ಈಗ್ಲೆ ಯಾಕ್ ಹಂಗೆ ತೂಕಡಿಸ್ತಾ ಇದ್ದೀಯಲ್ಲ. ಎಲ್ಲೋ ಸವಾರಿ ಹೋಗ್ ಬಂದಂಗಿದೆ ಎಂದಳು ಕಾಕರಾಣಿ.

ಕಾಕ್ ಚಿಕ್ಕಿ ಪಿಳ ಪಿಳನೆ ಕಣ್ಣು ಬಿಡುತ್ತಾ ಬಾರೇ ಬಾ ಹೂಂ ಇವತ್ತು ಆ ಕೊನೆ ಮನೇಲಿ ಹೇಳಬಾರದ್ದು ಇತ್ತು ಹೋಗಿದ್ದೆ. ಹೊಟ್ಟೆ ಬಿರೀತು ಹಾಗೇ ಜೋಂಪು ಹತ್ತೇ ಬಿಡ್ತು ಕಣೆ ಮಕ್ಳೆಲ್ಲ ಎಲ್ಲಿ ಎಂದಿತು ಕೊಕ್ಕು ಸವರಿಕೊಳ್ಳುತ್ತಾ.

ಹೂಂ ಚಿಕ್ಕೀ ಮಕ್ಕಳೆಲ್ಲಾ ಗೂಡ್ನಲ್ಲೇ ಆಡ್ತಾ ಇವೆ. ಬೆಳಿಗ್ಗೇನೆ ಕಾಕರಾಜ ಅಕ್ಕಿ ತಂದಿದ್ದ ಏನು ಕಲ್ಲು ಅಂತೀಯ ಆರಿಸಿ ಮಕ್ಕಳಿಗೆ ಉಣಿಸ್ತಾ ಇದ್ದೆ. ಅದರಲ್ಲೂ ನಮ್ ಬೇಬಿಗೆ ಅಕ್ಕಿ ಅಂದ್ರೆ ಆಗಲ್ಲ ನಾನ್‌ವೆಜ್ಜೇ ಬೇಕು ಎಂದು ರಚ್ಚೆ ಹಿಡಿದ್ಲು ಒಂದೆರಡು ಹುಳ ಹಿಡ್ಕಂಡ್ ಬಂದು ತಿನ್ನಿಸ್ದೆ.

ನೀನೇ ಪುಣ್ಯಾತ್ಗಿತ್ತಿ.

ರಾಣಿ ನಂಗೇನು ಮಕ್ಳಾ ಮರೀನಾ ಇದ್ದೊಬ್ಬ ಮಗ ಕರೆಂಟಿಗೆ ಸಿಕ್ಕಿ ಸತ್ತೋದ್ನಲ್ಲಮ್ಮ ಅದೇ ಯೋಚ್ನೇಲಿ ಇವ್ರು ಮನೆ ಬಿಟ್ಟಿದ್ರಲ್ಲ ಏನ್ಮಾಡ್ಲಿ.

ಹೌದಲ್ಲ ಚಿಕ್ಕಿ ಕಾಕ್ ಚಿಕ್ಕಪ್ಪ ಕಾಣೋದೇ ಇಲ್ಲ. ಹೂಂ ಎಂದು ನಿಟ್ಟುಸಿರಿಟ್ಟ ಚಿಕ್ಕಿ ಮತ್ತೆ ಜೂಗರಿಸತೊಡಗಿತು. ಸರಿ ಬರ್ತೀನಿ ಎನ್ನುತ್ತ ಕಾಕರಾಣಿ ಮನೆ ಕಡೆ ಹಾರಿ ಬರುವಷ್ಟರಲ್ಲಿ ಪಕ್ಕದೂರಿಂದ ಕಾಕ್ ದೊಡ್ಡಮ್ಮ ಬಂದಿದ್ದಳು. ಮಕ್ಕಳೆಲ್ಲ ಅಜ್ಜಿ ತಂದಿದ್ದ ತಿಂಡಿ ಬುಟ್ಟಿ ಸುತ್ತ ಸೇರಿ ಗೂಡೆಲ್ಲ ಹಾರಿ ಹೋಗುವಂತೆ ಅರಚಿಕೊಳ್ಳುತ್ತಿದ್ದವು.

''ಕಾಕ್ ದೊಡ್ಡಮ್ಮಾ ಯಾವಾಗ್ ಬಂದೆ, ಕಾಕ್ ದೊಡ್ಡಪ್ಪ ಕಾಕ್ ತಂಗಿ ಎಲ್ಲಾ ಚೆನ್ನಾಗಿದ್ದಾರೇನು?''

ಊ ಕಣೆ ಎಲ್ಲಾ ಚೆನ್ನಾಗಿದ್ದಾರೆ. ಅದೇ ನಮ್ಮ ಓಣಿ ಮನೆ ಶ್ಯಾಂಭಟ್ರ ಅಮ್ಮ ತೀರ್‍ಕೊಂಡ್ರು. ಅದಕ್ಕೆ ವಡೆ, ಕಜ್ಜಾಯ ಎಲ್ಲ ಮಕ್ಕಳಿಗೆ ಕೊಟ್ ಹೋಗಾಣ ಅಂತ ಬಂದೆ. ನಿನ್ ದೊಡ್ಡಪ್ಪಂಗೊ ಬಿ.ಪಿ. ಜಾಸ್ತಿ ಎಣ್ಣೆ ತಿಂಡಿ ಮುಟ್ಟೋದೇ ಇಲ್ಲ, ಇನ್ ನಿನ್ ತಂಗೀನೋ ಡಯಟ್ ಅಂತ ಯಾವಾಗ್ಲೂ ಚಪಾತಿ ಕಡೀತಿರ್‍ತಾಳೆ ಎನ್ನುವಷ್ಟರಲ್ಲಿ ಪಟ ಪಟನೆ ರೆಕ್ಕೆ ಬಡಿಯುತ್ತಾ ಕಾಕರಾಜ ದೊಡ್ಡ ಮೀನೊಂದನ್ನು ಕಚ್ಚಿಕೊಂಡು ಬಂದು ಓಹೋ ದೊಡ್ಡಮ್ಮ ಬಂದಿದ್ದಾರೆ. ರಾಣೀ ಮೀನು ಮಸಾಲೆ ಮಾಡು ಎಂದು ಹೊರಗಿನ ವರಾಂಡದ ರೆಂಬೆಯ ಮೇಲೆ ಕುಳಿತ. ಮಕ್ಕಳೆಲ್ಲ ಕಾ, ಪಾ, ಎನ್ನುತ್ತ ಅಪ್ಪನನ್ನು ಮುತ್ತಿಕೊಂಡವು.

ಚಕ್ಕುಲಿ ಚೂರನ್ನು ಬಾಯಿಗೆಸೆದುಕೊಂಡ ರಾಣಿ ಮೇಲಿನ ಕೊಂಬೆಯ ಅಡುಗೆ ಕೋಣೆಗೆ ಹೋಗುತ್ತಾ ಬಾ ದೊಡ್ಡಮ್ಮ ಇಲ್ಲೆ ಎಂದಳು.

ಕಾಕ್ ಬೇಬೀನ ಎತ್ತಿಕೊಂಡು ಹಾಲುಡಿಸುತ್ತಾ ದೊಡ್ಡಮ್ಮಾ ತಂಗಿಗೇನಾದ್ರೂ ಗಂಡು ಗೊತ್ತಾಯ್ತು ಎಂದಳು. ಇಲ್ಲ ಕಣೆ ರಾಣಿ ನಿಂಗಿಂತ ಒಂದು ವರ್ಷ ಚಿಕ್ಕೋಳಲ್ವ ಇನ್ನೂ ಯಾರನ್ನೂ ಒಪ್ಪೇ ಇಲ್ಲ. ಚಿಂತೆಯ ಮುಖ ಮಾಡಿದಳು ದೊಡ್ಡಮ್ಮ.

ಹಾಲು ಕುಡಿದ ಬೇಬಿ ಅಲ್ಲೆ ಬಿದ್ದಿದ್ದ ಗೊಂಬೆಯೊಡನೆ ಆಡಲು ತೊಡಗಿತು. ಅದನ್ನೇ ನೋಡುತ್ತಿದ್ದ ದೊಡ್ಡಮ್ಮ ರೆಕ್ಕೆ ಗರಿಯಿಂದ ದೃಷ್ಟಿ ತೆಗೆದು ಈ ಬೇಬಿ ಎಲ್ಲಾ ನಿನ್ಹಾಗೆ ಕಣೆ ನೀನು ಕೂಡ ಹೀಗೆ ಇದ್ದೆ. ಕಾಕಕ್ಕನಿಗೆ ಸಕ್ಕರೆ ಖಾಯ್ಲೆ ಬಂದು ಬೇಗ ಹೋದ್ಲು ನಿಮ್ಮಮ್ಮ ಎಂದು ಅಕ್ಕನನ್ನು ನೆನೆಯುತ್ತ ಕಣ್ಣೊರೆಸಿಕೊಂಡಳು.

ಅಮ್ಮನ ನೆನಪಿನಿಂದ ರಾಣಿ ಮಂಕಾದರೂ ಅಡಿಗೆಯ ಕೆಲಸ ನೆನಪಾಗಿ ಮೀನನ್ನು ಉಜ್ಜಿ ತೊಳೆದು ತುಂಡು ಮಾಡಿ ಮಸಾಲೆ, ಉಪ್ಪು ಬೆರೆಸಿಟ್ಟಳು.

ಆಗ ದೊಡ್ಡಮ್ಮ ನೋಡೆ ರಾಣಿ ನಮ್ಮ ಪಕ್ಕದ್ ಮರದ ಮನೆಯ ಕರೀ ಕಾಮಣ್ಣ ಇದ್ದಾನಲ್ಲ ಅವ್ನು ಏನೇನೋ ಡ್ರೆಸ್ ಮಾಡಿಕೊಂಡು ನಮ್ಮ ಉಶಿ ಕಾಕಿ ಮುಂದೆ ಬಂದು ಬಲೆ ಬೀಸ್ತಿರ್ತಾನೆ. ಬೇಡ ಕಣೆ ಉಶಿ ಅವ್ನು ಒಳ್ಳೇವ್ನಲ್ಲ ಎಂದ್ರೆ ಸಾಕು ನಾನು ಅವ್ನನ್ನೇ ಮದ್ವೆ ಆಗೋದು ನೀನು ಸುಮ್ನಿರಮ್ಮ ಎಂದು ರೇಗುತ್ತಾ ನನ್ನ ಮೇಲೆ ಕರ್ರ, ಕರ್ರಾ ಎಂದು ಹಾರಿ ಬೀಳ್ತಾಳೆ. ಎಂದಾಗ

ದೊಡ್ಡಮ್ಮಾ ಉಶಿ ಕಾಕಿನ ಸ್ವಲ್ಪ ದಿನ ಇಲ್ಲಿ ಕಳಿಸು ಬುದ್ಧಿ ಹೇಳಿ ಬೇರೆ ಗಂಡು ನೋಡ್ತೀನಿ ಎನ್ನುತ್ತಾ ಎಲ್ಲರಿಗೂ ಅರಳಿ ಎಲೆಗಳಲ್ಲಿ ಮಸಾಲೆ ಮೀನಿಟ್ಟು ಗಂಡ ಮಕ್ಕಳನ್ನು ಊಟಕ್ಕೆ ಕರೆದಳು. ಈಗ ಬೇಬಿ ಅಪ್ಪನ ತೊಡೆ ಏರಿ ಕುಳಿತಳು.

ಊಟ ಮುಗಿಸಿ ಕೈ ಬಾಯಿ ತೊಳೆದ ದೊಡ್ಡಮ್ಮ ರಾಣೀ ರುಚಿಯಾಗಿತ್ತು ಕಣೆ ಅಡಿಗೆ. ಬಾಯೆಲ್ಲ ಕೆಟ್ಟೋಗಿತ್ತು, ಆಗ್ಲೆ ಕತ್ಲಾಯ್ತು ಊರ್ ಕಡೆ ಬಂದ್ಹೋಗು ಎನ್ನುತ್ತಾ ಹಾರಿ ಹೊರಟಾಗ ಅಮ್ಮನ ನೆನಪಾಗಿ ರಾಣಿಯ ಕಣ್ಣು ಒದ್ದೆಯಾಯಿತು.

ಬಾಗಿಲು ಹಾಕಿ ಬಂದಾಗ ಮಕ್ಕಳೆಲ್ಲ ಜೂಗರಿಸುತ್ತಿದ್ದವು. ಅಡಿಗೆ ಕೋಣೆ ಶುಚಿ ಮಾಡಿ ಬಂದಾಗ ಅಪ್ಪನ ಮಡಿಲಿನಲ್ಲಿದ್ದ ಬೇಬಿ ಅಮ್ಮನ ಮಡಿಲಿಗೆ ಜಾರಿತು. ಅದರ ಮೈ ಕೈ ಸವರುತ್ತಾ ಗುಬ್ಬಿ ಕಥೆ ಹೇಳುತ್ತಿದ್ದಂತೆಯೇ ಬೇಬಿ ನಿದ್ರಿಸ ತೊಡಗಿತು.

ಆಗ ಕಾಕ ರಾಜ ಆಕಳಿಸುತ್ತಾ ಬಂದು ಮಲಗಲು ಅನುವಾಗುತ್ತಿದ್ದ. ರಾಣಿಯ ಪಕ್ಕದಲ್ಲಿದ್ದ ರೆಕ್ಕೆಗಳನ್ನು ನವಿರಾಗಿ ಸವರುತ್ತಾ ಪ್ರೇಮದಿಂದ ರಾಣೀ ನಾಲ್ಕು ಮಕ್ಕಳಾದ್ರು ಏನ್ ಫಳ ಫಳಾಂತ ಮಿಂಚ್ತಾ ಇದ್ದೀಯಲ್ಲೆ ಎಂದಾಗ ತೇಲುಗಣ್ಣಿನಿಂದ ಗಂಡನನ್ನೇ ನೋಡುತ್ತ ಸಾಕು ಸುಮ್ನಿರಿ ಬೇರೆ ಹಕ್ಕಿಗಳನ್ ನೋಡಿ ಎಷ್ಟು ಬಣ್ಣಕ್ಕೆ, ಬೆಳ್ಳಗೆ ಇರುತ್ತೆ ಎಂದಾಗ ಇರಲಿ ಬಿಡು ನಮ್ಮಷ್ಟು ನವಿರಾಗಿ ಅದಿರಲ್ಲ ಅದರಲ್ಲಿ ನೀನಂತೂ ಎಂದು ಪಕ್ಕಕ್ಕೆ ಬಂದ ರಾಜನನ್ನು

ತಳ್ಳಿ ಸದ್ಯ ಸುಮ್ಮನಿರಿ ಬೇಬಿ ಇನ್ನೂ ಚಿಕ್ಕದು ಇಷ್ಟಕ್ಕೂ ನಮಗೆ ಮಕ್ಕಳು ಸಾಕು. ಎಂದಾಗ ನಸುಮುನಿಸಿನಿಂದ ಕಾಕರಾಜ ಪಕ್ಕಕ್ಕೆ ತಿರುಗಿದ. ಕಾಕ ರಾಜನನ್ನು ತಬ್ಬಿ ಮಲಗಿದಳು ರಾಣಿ.

ಅಷ್ಟರಲ್ಲಿ ಬೇಬಿ ಮಮ್ ಕಕ್ ಮಮ್ ಎಂದಿತು. ಅದನ್ನು ತಟ್ಟುತ್ತಾ ತೃಪ್ತಿಯಿಂದ ನಿದ್ರಿಸಿದಳು ರಾಣಿ. ಮುಂಜಾನೆಯೇ ಎದ್ದ ರಾಣಿ ಗೂಡಿನ ಹೊರಗೆ ಬಂದಳು. ಹಿತವಾದ ಗಾಳಿ ಬೀಸುತ್ತಿತ್ತು. ಚಳಿಗಾಲ ಬರುತ್ತಿದೆ ಒಂದಷ್ಟು ಎಲೆಗಳ ಹಚ್ಚಡ ಮಾಡಿಡಬೇಕು. ಈ ಹಚ್ಚಡಗಳೆಲ್ಲಾ ಅಮ್ಮ ಮಾಡಿದ್ದು ಹಳೆಯದಾಗಿದೆ ಎಂದುಕೊಂಡ ರಾಣಿಗೆ ಅಮ್ಮನ ನೆನಪಾಗಿ ಮನಸ್ಸು ಆರ್ದ್ರಗೊಂಡಿತು.

ಒಳ್ಳೆ ವಿಶಾಲವಾದ ಮರದ ಮನೆ. ಅಣ್ಣ, ತಾನು ಇಬ್ಬರೆ ಮಕ್ಕಳು. ಅಕ್ಕರೆಯಿಂದ ನೋಡಿಕೊಳ್ಳುವ ಅಪ್ಪ ಅಮ್ಮ. ತನ್ನ ಅಗಲವಾದ ಕಣ್ಣು ಬಿಟ್ಟು ಗದರಿದರೆ ನಾವಿಬ್ಬರೂ ಗಪ್‌ಚಿಪ್. ದಿನವೂ ಅಮ್ಮ ರಾಣಿಯ ಗರಿಗಳಿಗೆ ಎಣ್ಣೆ ಹಚ್ಚಿ ನೀವುತ್ತಿದ್ದಳು. ಅಣ್ಣನೆಂದರೆ ಬಲು ಪ್ರೀತಿ ಅಣ್ಣ ಇದೇ ಊರಿನಲ್ಲೇ ಇದ್ದಾನೆ. ಎಷ್ಟು ದಿವಸವಾಯಿತು ಹೋಗಿಬರಬೇಕು ಎಂಬ ನೆನಪಿನಿಂದ ಮನ ಮುದಗೊಂಡಿತು.

ಕಸಬರಿಗೆ ಹಿಡಿದು ಮನೆಯ ಸುತ್ತೆಲ್ಲಾ ಶುಚಿಗೊಳಿಸತೊಡಗಿದಳು. ಪಕ್ಕದ ಗೂಡಿನಲ್ಲಿ ಪಾತ್ರೆಗಳ ಶಬ್ಧ ಕೇಳಿಸಿತು. ಓಹೋ ಕಾಕಜ್ಜಿ ಮಗಳ ಊರಿಂದ ಬಂದಿರಬೇಕು ಎಂದುಕೊಂಡು ಹೊಂಡದ ನೀರಿನಲ್ಲಿ ಮುಖ ಕೈ ಕಾಲು ತೊಳೆದು ಬರುತ್ತಿದ್ದಂತೆಯೇ ಕಾಕಜ್ಜಿ ಹುಶ್ ಎನ್ನುತ್ತಾ ಬಂದು ಅಲ್ಲೆ ಕುಳಿತಿತು.

ಓ ಕಾಕಜ್ಜಿ ಮೂರು ದಿನದಿಂದ ಕಾಣ್ಲಿಲ್ಲ ಎಲ್ ಹೋಗಿದ್ದೆ. ಕಾಕ್ ಪುಟ್ಟಿ ಮನೇಗೆ ಹೋಗಿದ್ದಾ. ಮುಮ್ಮಕ್ಳು ಚೆನ್ನಾಗಿದ್ದಾರಾ ಅಜ್ಜಿ ಎಂದು ಪ್ರಶ್ನೆಗಳ 'ಕ' ಕಾರವನ್ನೇ ಸುರಿಸಿದಳು ರಾಣಿ.

ತಾಳು ತಾಳು ಹೇಳ್ತೀನಿ ಈಗ ಕಾಕ್ ಪುಟ್ಟಿ ಪೇಟೇಲಿದ್ದಾಳೆ. ಅವಳ್ ಗಂಡ ಕಾಕ್ ಪುಟ್ಟ ಅಲ್ಲೇ ಮಂಡೀಲಿ ಕೆಲ್ಸ ಮಾಡ್ತಾನೆ. ನಮ್ ಪುಟ್ಟಿ ಅಂತೂ ಸಣ್ಣಗೆ ಹಂಚಿ ಕಡ್ಡಿ ತರ ಆಗಿದ್ದಾಳೆ. ಕೆಲ್ಸಕ್ ಹೋಗ್ಬೇಡಾ ಕಣೆ ಅಂದ್ರೆ ಪೇಟೇಲಿ ಎಲ್ರೂ ದುಡೀಬೇಕಮ್ಮಾ ಇಲ್ದಿದ್ರೆ ಜೀವ್ನ ನಡ್ಸಲ್ಲ ಅಲ್ದೇ ಮನೇಲೆ ಇದ್ರೆ ಮೈ ಬಂದ್ಬುಡುತ್ತೆ.

ಅಮ್ಮಾ ನೀನು ಈ ಜಿಡ್ಡು, ಪಡ್ಡು ಎಲ್ಲಾ ತಿನ್ಬೇಡ, ಮುದ್ದೇನೊ ಚಪಾತೀನೋ ತಿನ್ನು ಅಂತ ನನಗೆ ತಿರುಮಂತ್ರ ಹೇಳಿದ್ದಲ್ದೆ ಅದನ್ನೇ ಮಾಡೋಳು. ನಂಗಂತೂ ಬಾಯೆಲ್ಲ ಸಪ್ಪೆ ಸಪ್ಪೆ ಆಗೋಯ್ತು. ಸ್ವಲ್ಪ ಉಪ್ಪಿನ್ ಕಾಯ್ ಕೊಡು ಎಂದಿತು.

ಆಯ್ತಜ್ಜಿ ಮೊನ್ನೆ ತಾನೆ ಏಡಿಕಾಯಿ ಸಿಕ್ಕಿತ್ತು. ಅದರ ಉಪ್ಪಿನ ಕಾಯಿ ಕೊಡ್ತೀನಿ ಎಂದು ಎಲೆಯ ಮೇಲೆ ಹಾಕಿ ತಂದಳು ರಾಣಿ. ಏಡಿ ಉಪ್ಪಿನ ಕಾಯಿನ ಬಾಯಲ್ಲಿ ಹಾಕಿ ಚಪ್ಪರಿಸಿದ ಕಾಕಜ್ಜಿ ಮುದುಡಿ ಕುಳಿತು ಲೊಟ್ಟೆ ಹೊಡೆಯಿತು.

ಸಾಕಾಯ್ತಮ್ಮ ಪೇಟೆ ಸಹವಾಸ ಆ ಕಾರು, ಆ ಬಸ್ಸು, ಆ ಧೂಳು ರಾಮ ರಾಮ ಇಲ್ಲಿ ನೋಡು ಎಷ್ಟ್ ಥಣ್ಣಗೆ ಮರಗಳ ಗಾಳಿ ಕುಡೀತಾ ರಾಮ ಕೃಷ್ಣಾ ಅಂತ ಕಾಲಹಾಕ್ತೀನಿ ಎನ್ನುತ್ತಾ ಕಣ್ಣುಮುಚ್ಚಿ ನಾಲಿಗೆ ಚಪ್ಪರಿಸುತ್ತಿತ್ತು.

ರಾಣಿಯ ತಲೆ ಧಿಂ ಎನ್ನುತ್ತಿತ್ತು. ಅಲ್ಲೆ ಕುಳಿತ ರಾಣಿಗನ್ನಿಸಿತು. ಹೌದು ಕಾಲ ತುಂಬಾ ಮುಂದುವರಿದಿದೆ. ಪೇಟೆ ಮಕ್ಕಳಲ್ಲ ಇಲ್ಲಿರುವ ಮಕ್ಕಳೂ ಅಷ್ಟೆ ನಮ್ಮಂತೆ ಅಲ್ಲ ಯೋಚಿಸಿ ಮಾತನಾಡ್ತಾರೆ.

ಮೊನ್ನೆ ದೊಡ್ಡ ಮಗನನ್ನು ಕರೆದು ಬಾರೋ ಟಿಂಕು 'ಕಾಗೆಯೊಂದು ನೀರಿಗೆ' ಹಾಡು ಹೇಳ್ಕೊಡ್ತೀನಿ ಎಂದಾಗ, ಹೋಗಮ್ಮ ಆ ಹಾಡು ಕೇಳಿದ್ದೀನಿ ಇನ್ನೂ ಅಜ್ಜನ ಕಾಲದಂತೆ ಹೂಜಿಗೆ ಕಲ್ಲು ತುಂಬ್ತಾರೆ. ಸ್ಟ್ರಾ ಹಾಕಿ ನೀರು ಕುಡಿದರೆ ಆಯ್ತು ಅಲ್ವಾ ಎನ್ನುತ್ತ ಹೊರ ಹಾರಿಹೋದ.

ಮ್ಲಾನವದನದಿಂದ ಯೋಚಿಸುತ್ತಾ ಒಳ ಬಂದಾಗ ಕಾಕರಾಜ ನೆನ್ನೆ ಉಳಿದ ತಂಗಳು ಮೀನನ್ನು ಮಕ್ಕಳಿಗೆ ತಿನ್ನಿಸುತ್ತಿದ್ದ. ರಾಣೀ ಏನಾಯ್ತು ಹುಶಾರಿಲ್ಲವೆ ಬಾ ಬೇಜಾರಾದರೆ ಇಂದು ಅಡಿಗೆ ಮಾಡಬೇಡ ಎಲ್ಲರೂ ಹೋಗಿ ಹಾರಾಡಿಕೊಂಡು ಏನಾದರೂ ತಿಂದು ಬರೋಣ ಬೇಡವೆಂದು ತಲೆಯಾಡಿಸಿ ತಾನೂ ಬೆಳಗಿನ ತಿಂಡಿಯ ಶಾಸ್ತ್ರ ಮುಗಿಸಿ ಮನೆಯನ್ನೆಲ್ಲಾ ಶುಚಿಮಾಡಿ ಮಕ್ಕಳಿಗೆ ಸ್ನಾನ ಮಾಡಿಸಿ ಆಡಲು ಬಿಟ್ಟು ಬೇಬಿಗೆ ಹಾಲು ಕೊಟ್ಟು ಮಲಗಿಸಿದಳು.

ತಾನೂ ಶುಚಿಯಾಗಿ ರೆಕ್ಕೆಗಳನ್ನೆಲ್ಲಾ ಸವರಿ ಹೊದ್ದುಕೊಳ್ಳುವ ಹೊತ್ತಿಗೆ ಹೊರಗಿನಿಂದ ರಾಣೀ, ರಾಣೀ ಎನ್ನುವ ಕೂಗಿಗೆ ಹೊರ ಬಂದಳು. ಬಾಗಿಲಲ್ಲಿ ಕಾಕಣ್ಣ, ಕಾಕತ್ತಿಗೆ ನಿಂತಿದ್ದರು. ಓ ಬನ್ನಿ, ಬನ್ನಿ ಎಂದು ಈಚಲ ಚಾಪೆ ಹಾಸಿದಳು.

ಏಕೊ ಅತ್ತಿಗೆ ಸಣ್ಣ ಆಗಿದ್ದಾರೆ ಎನ್ನಿಸಿತು, ಏನ್ ಅಣ್ಣಾ ಸಮಾಚಾರ ಸುಧಾ ಕಾಕಿ, ಅರೂಕಾಕ ಏಕೆ ಬರಲಿಲ್ಲ ಎಂದಾಗ ಏ ನಿನ್ನ ಮುದ್ದಿನ ಸೊಸೇನ ಕಾಕಜ್ಜೀ ಎಂದರೆ ಉರಿದು ಬೀಳ್ತಾಳೆ ಸುಧಾ ಎಂದು ಮಾತ್ರ ಕರೆಯಬೇಕಂತೆ. ಎಲ್ಲೂ ಬರಲ್ಲ ಎಕ್ಸರ್‌ಸೈಜ್, ಏರೋಬಿಕ್ಸ್ ಅಂತ ಥಯ್ಯಾ, ಥಕ್ಕ ಎಂದು ಕುಣೀತಿರ್ತಾಳೆ. ಅದೇನೋ ಸ್ಲಿಂ ಆಗ್‌ಬೇಕಂತೆ ಊಟ ಸರ್‍ಯಾಗಿ ಮಾಡೋದೇ ಇಲ್ಲ, ಆ ಕಾಲೇಜ್ ಹುಡ್ಗೀರ ಹಿಂದೇನೆ ಸುತ್ತುತ್ತಾ ಚಿಪ್ಸ್, ಕೋಕ್ ಅಂತ ಕುಡೀತಿರ್ತಾಳೆ.

ಆಗ ಕಾಕತ್ತಿಗೆಯು ನಾಜೂಕಾಗಿ ರಾಣಿ ಕೊಟ್ಟ ತಿಂಡಿಯಲ್ಲಿ ಚೂರನ್ನೇ ಬಾಯಿಗೆಸೆದುಕೊಳ್ಳುತ್ತಾ ಅರೂ ಕಾಕಾ ಏನ್ ಕಮ್ಮಿ ಅಂತೀಯಾ ಅದೇ ಚಿಕ್ಕ ಹುಡುಗ್ರು ತಿಂತಾರಲ್ಲ, ಹುಳ ತರ ಅದೇ ನೂಡಲ್ಸ್ ಅಂತೆ. ಎಣ್ಣೇ ಬೇಕು ಅಂತಾನೆ.

ಆಗ ಅಣ್ಣ ಅಷ್ಟೇ ಅಲ್ಲಮ್ಮ ಅದೇನೋ ಸಿಕ್ಸ್‌ಪ್ಯಾಕ್ ಅಂತೆ ಅದನ್ನ ಹೊಟ್ಟೇ ಮೇಲೆ ಹಾಕ್ಕೋಬೇಕು ಅಂತ ಕಾಸು ಕೊಟ್ಟು ಕಬ್ಬಿಣ ಹೊರೋಕ್ ಹೋಗ್ತಾನೆ. ಏನೋ ಇವ್ರಿಗೆಲ್ಲಾ ಸ್ಲಿಂ ಭೂತ ಮೆಟ್ಟಿಕೊಂಡಿದೆ.

ರಾಣೀ ಈಗೀಗ ನೀನೂ ಊದಿಕೊಳ್ತಾ ಇದ್ದೀಯ. ಸ್ವಲ್ಪ ಸಣ್ಣಗಾಗಲು ಯೋಗಾ, ಧ್ಯಾನ ಮಾಡು. ಹಾಗೆ ಮಕ್ಳನ್ ಕರ್‍ಕೊಂಡು ಎರಡ್ ದಿನ ಬಂದ್ಹೋಗು. ಬರ್ತೀವಮ್ಮ ಮನೇಗೆ

ಸಾಮಾನು ತರ್ಬೇಕು ಎಂದು ಹೇಳುತ್ತ ಹಾರಿದರು ಸ್ಲಿಂ ಜೋಡಿಗಳು. ರಾಣಿ ರೆಕ್ಕೆ ಬೀಸಿದಳು ಅಣ್ಣ ಅತ್ತಿಗೆಗೆ.

ರಾಣಿ ಕನ್ನಡಿ ನೋಡಿಕೊಂಡಳು. ಹೌದು ತಾನು ಗುಂಡಾಗಿ ಅರಳಿಕೊಂಡು ಅಮ್ಮನ ತರಹವೇ ಕಾಣ್ತೇನಿ. ಇದಕ್ಕೆ ಕಾಕರಾಜನ ಅತಿ ಪ್ರೀತಿಯೂ ಕಾರಣ ಇರಬಹುದು. ಮೊದಲು ಕಾಕಾಸ್ಪತ್ರೆಗೆ ಹೋಗಿ ಮಕ್ಕಳಾಗದಂತೆ ಆಪರೇಶನ್ ಮಾಡಿಸಿಕೊಳ್ಳಬೇಕು. ಆರೋಗ್ಯವಾಗಿರಬೇಕಾದರೆ ಸಿಕ್ಕಾಪಟ್ಟೆ ತಿನ್ನುವುದನ್ನು ನಿಲ್ಲಿಸಬೇಕು ಎಂದು ನಿರ್ಧರಿಸಿಕೊಳ್ಳತೊಡಗಿದಳು.

ಭರ್ರ್ ಎಂದು ರೆಕ್ಕೆ ಬೀಸುತ್ತಾ ಬಂದ ಕಾಕರಾಜ ರಾಣೀ ಸಿದ್ಧಳಾಗು. ಹಾಗೇ ಹಾರಾಡಿ ಬರೋಣ ಹಿಂದಿನ ರಸ್ತೆಯಲ್ಲಿ ಮದುವೆ ಇದೆ ಎಲ್ಲರೂ ಗಮ್ಮತ್ತಾದ ಊಟ ಮಾಡೋಣ ಎಂದು ಹತ್ತಿರ ಬಂದು ನಿಂತ ಕಾಕರಾಜನ ಕಡೆ ತಿರುಗಿ ಯಾಕೋ ನನ್ಗೆ ಹೊಟ್ಟೇನೇ ಸರಿ ಇಲ್ಲ ನೀವೆಲ್ಲ ಹೋಗ್ಬನ್ನಿ ಎಂದು ಕಾಕರಾಜನ ರೆಕ್ಕೆ ಸವರುತ್ತಾ ಅನುನಯಿಸಿದಳು. ಬೇಬಿ ತಾನೂ ಅಪ್ಪನ ಜೊತೆ ಹೋಗುವೆನೆಂದು ಎಗರಾಡತೊಡಗಿತು.

ಬೇಡ ಮರಿ ನೀನು ಅಮ್ಮನ ಜೊತೆ ಇರು ಬರುವಾಗ ನಿನಗೆ ತಿಂಡಿ ತರ್ತೀನಿ ಎಂದು ಸಮಾಧಾನ ಪಡಿಸಿ ಟಿಂಕು, ಕಾಕಣ್ಣಿಯರನ್ನು ಕರೆದುಕೊಂಡು ಹಾರಿಹೋದ.

ರಾಣಿ ಮಗುವಿಗೆ ಬಿಸ್ಕೆಟ್ ಕೊಟ್ಟು ತಾನು ಹೊಟ್ಟೆ ತುಂಬ ನೀರು ಕುಡಿದು ಹೊರಬಂದಳು. ಮನೆ ಓನರ್ ಮಗಳು ಮಂಜುಳ ಮೈ ಕೈ ಬಗ್ಗಿಸುತ್ತಾ ವ್ಯಾಯಾಮ ಮಾಡುತ್ತಿದ್ದಳು. ನಂತರ ಅಲ್ಲೆ ಕುಳಿತು ಎರಡು ಮೊಟ್ಟೆಗಳನ್ನು ಒಡೆದು ಲೋಟಕ್ಕೆ ಹಾಕಿ ಕುಡಿದು ಅಲ್ಲೇ ಅಡ್ಡಾಡತೊಡಗಿದಳು.

ತಾನೂ ಹಾಗೇ ಸ್ಲಿಂ ಆಗಬೇಕು ಎನ್ನುವ ಆತ್ಮ ವಿಶ್ವಾಸವನ್ನು ಬಲಗೊಳಿಸಿದಾಗ ಮನದಲ್ಲಿ ನೆಮ್ಮದಿ ಎನಿಸಿತು ರಾಣಿಗೆ. ಅಲ್ಲೆ ಎಸೆದಿದ್ದ ಅರ್ಧ ಚಪಾತಿಯನ್ನು ಕಡಿಯುತ್ತಾ ಇನ್ನೂ ಉಳಿದಿದ್ದ ಮೊಟ್ಟೆಯ ರಸವನ್ನು ಕೊಕ್ಕಿನಿಂದ ಹೀರಿ ಮನೆಗೆ ಬಂದು ಬೇಬಿಯನ್ನು ಮಲಗಿಸಿ ತಾನು ಟೊಂಗೆಯ ಮೇಲೆ ಕುಳಿತು ಕಣ್ಣು ಮುಚ್ಚಿ ಧ್ಯಾನಾಸಕ್ತಳಾದಳು ನಮ್ಮ ಕಾಕರಾಣಿ.

❑

---

ರಾಜಕೀಯದಲ್ಲಿ ಕಾಲೆಳೆಯುವುದೊಂದು ಆಟ
ಇವರ ಕಾಲು ಅವರಿಗೆ ಅವರ ಕಾಲು ಇವರಿಗೆ
ನಾಲ್ಕು ಗೋಡೆಗಳ ನಡುವೆ ಇಬ್ಬರೂ ಸ್ನೇಹಿತರೇ
ಹೊರಗೆ ಮಾತ್ರ ಪರಮವೈರಿಗಳ ಸೋಗಿನವರೇ

*– ಸುಕೇಶವ*

# ''ಪಾಸ್‌ವರ್ಡ್ ಪ್ರಕರಣ''

**- ನಂದಿನಿ ಕಾಪಡಿ**

**ಮೊ**ನ್ನೆಯಿಂದ ನನ್ನ ಪತಿ ದೇವರು ನನ್ನ ಮೇಲೆ ತುಂಬಾ ಮುನಿಸಿಕೊಂಡಿದ್ದಾರೆ. ದೊಡ್ಡ ಕಾರಣ ಏನೂ ಇಲ್ಲ, ಆದರೂ ಬಲು ಕೋಪ!

ಸಂಗತಿ ಏನು ಅಂದರೆ, ಈ ನಡುವೆ ನನಗೆ ತುಂಬಾ ಅಂತರ್ಜಾಲದ ರೂಢಿ. ಬೇರೆ ಬೇರೆ ಬ್ಯಾಂಕ್ ಅಕೌಂಟ್‌ಗಳು, ವಿವಿಧ ಕ್ರೆಡಿಟ್ ಕಾರ್ಡ್‌ಗಳು, ಬೇರೆ ಬೇರೆ ಏರ್ ಲೈನ್‌ಗಳು ಕೊಟ್ಟಿರುವ ಪುಕ್ಕಟೆ ಕಾರ್ಡ್ ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಅಂತರ್ಜಾಲ ಮುಖೇನ ಕೆಲಸ ಮಾಡುತ್ತವೆ. ಸರಿ, ಪ್ರತಿ ಅಕೌಂಟಿಗೂ ಪಾಸ್‌ವರ್ಡ್. ಇದಲ್ಲದೇ ಈ ಮೇಲ್, ಫೇಸ್ ಬುಕ್ ಇತ್ಯಾದಿ ಬೇಕೇ ಬೇಕಲ್ಲ, ಅಲ್ಲೂ ಪಾಸ್‌ವರ್ಡ್ ಹಾವಳಿ!

ಪ್ರತಿ ಪಾಸ್‌ವರ್ಡ್ ನೆನಪು ಮಾಡಿಕೊಂಡು ಸರಿಯಾದ ಕಡೆ ಸರಿಯಾದ ಪಾಸ್‌ವರ್ಡ್ ಹಾಕಿ ಕೆಲಸ ಮಾಡಬೇಕು. ಮೊದ ಮೊದಲು ನಾನೂ ತುಂಬಾ ಉತ್ಸಾಹದಿಂದ ಪಾಸ್‌ವರ್ಡ್ ತಯಾರಿ ಮಾಡಿಕೊಂಡು ತುಂಬಾ ಖುಷಿಯಾಗಿದ್ದೆ. ನನ್ನ ಹುಟ್ಟಿದ ದಿವಸ, ನನ್ನ ಮದುವೆಯ ತಾರೀಖು, ನಾನು ಸರ್ಕಾರದ ಸೇವೆಗೆ ಸೇರಿದ ತಾರೀಖು ಇತ್ಯಾದಿ. ದಿನಗಳು ಸರಿಯಾಗಿಲ್ಲ, ಪುಂಡ ಜನರು ಎಲ್ಲ ಕಂಪ್ಯೂಟರ್ ಅಕೌಂಟ್ಸ್ ಹ್ಯಾಕ್ ಮಾಡುತ್ತಾರೆ. ನಿಮ್ಮ ನಿಮ್ಮ ಪಾಸ್‌ವರ್ಡ್ ಬದಲಾಯಿಸಿ ಎಂದು ಎಲ್ಲಾ ಕಡೆಯಿಂದ ಅಹವಾಲು ಬಂದ ಮೇಲೆ ನಾನೂ ತುಂಬಾ ಜಾಣತನದಿಂದ ಪಾಸ್‌ವರ್ಡ್ ಬದಲಾಯಿಸಿದೆ. ನನ್ನ ಹುಟ್ಟಿದ ತಾರೀಖು ನಂತರ ಯಜಮಾನರ ಹುಟ್ಟಿದ ತಾರೀಖು, ನನ್ನ ಹೆಸರು, ಮಗಳ ಹೆಸರು, ಚಿಕ್ಕ ಮಗಳು ಮೊದಲು ಹೆಜ್ಜೆಯಿಟ್ಟ ದಿನ, ದೊಡ್ಡ ಮಗಳು ಶಾಲೆಗೆ ಸೇರಿದ ದಿನ ಇತ್ಯಾದಿ ಸೇರಿಸಿ, ಕಲಸು ಮೇಲೋಗರ ಮಾಡಿ, ನನ್ನ ಹೊಸ ಪಾಸ್‌ವರ್ಡ್‌ಗಳನ್ನು ತಯಾರಿಸಿದೆ. ಇಲ್ಲೇ ಬಂದದ್ದು ಸಮಸ್ಯೆ. ಮೊದ ಮೊದಲು ಎಲ್ಲವೂ ಸರಿಯಾಗಿ ಜ್ಞಾಪಕದಲ್ಲಿದ್ದವು. ನಂತರ, ವಿಪರೀತ ಮರೆವು! ಒಂದಕ್ಕೆ ಬೇರೊಂದು ಪಾಸ್‌ವರ್ಡ್ ಹಾಕಿಬಿಡುತ್ತಿದ್ದೆ. ಎರಡನೆಯ ಬಾರಿ ತಪ್ಪು ಮಾಡಿದಾಗ ಕಂಪ್ಯೂಟರ್ ಅಕ್ಕ ಮುನಿಸಿಕೊಂಡು ಏನೇನೋ ಪ್ರಶ್ನೆ ಕೇಳಿ ಬಿಡುವಳು. ನಿಮ್ಮ ತಾಯಿ ನಿಮ್ಮನ್ನು ಯಾವ ಮುದ್ದು ಹೆಸರಿನಿಂದ ಕರೆಯುತ್ತಾರೆ. ನಿಮಗೆ ಇಷ್ಟವಾದ ಹೂವು ಯಾವುದು ಇತ್ಯಾದಿ, ಇತ್ಯಾದಿ. ಹೋಗಲಿ ಬಿಡಿ, ಹೇಳಿದರಾಯಿತು ಎಂದುಕೊಂಡು ನನ್ನ ತಾಯಿ ನನ್ನನ್ನು ಮುದ್ದಿನಿಂದ ಪುಟ್ಟಿ ಎನ್ನುತ್ತಾರೆ ಎಂದು ಬರೆದಾಕ್ಷಣ, ಕ್ಷಮಿಸಿ ಅದು ತಪ್ಪು ಉತ್ತರ ಎಂದು ಕಂಪ್ಯೂಟರ್ ಅಕ್ಕ ಗದರಿಕೊಂಡು ನಿನ್ನ ಅಕೌಂಟ್ ಸದ್ಯ ಸಸ್ಪೆಂಡ್ ಮಾಡಲಾಗಿದೆ. ಕಸ್ಟಮರ್ ಸರ್ವಿಸ್‌ಗೆ ಕರೆ ಮಾಡಿ ಎಂದು ಬಿಡುವಳು. ಆಮೇಲೆ ಗೊತ್ತಾಯಿತು ನಾನು ಮೊದಲಿಗೆ ನನ್ನ ಮುದ್ದು ಹೆಸರು ಮುನ್ನಿ ಎಂದು ಬರೆದಿದ್ದು!

ಒಂದು ದಿನ ನನ್ನ ಮಗಳು ತುಂಬಾ ಬೇಜಾರು ಮಾಡಿಕೊಂಡು ತನ್ನ ಗೆಳತಿ ಹೇಗೆ ಪಾಸ್‌ವರ್ಡ್ ಸರಿಯಿಲ್ಲದೆ ತೊಂದರೆಗೆ ಸಿಕ್ಕು ಹಾಕಿಕೊಂಡಿದ್ದಳು ಎಂದು ಹೇಳಿದಾಗ ನಾನೂ

ಆತಂಕ ಪಟ್ಟುಕೊಂಡು ಗೂಗಲ್ ಮೂಲಕ ಪಾಸ್‌ವರ್ಡ್ ಸೆಕ್ಯೂರಿಟಿ ಎಂದರೆ ಏನು ಎಂದು ತಿಳಿದುಕೊಂಡೆ. ಸರಿ, ಒಂದೋ ಅಥವಾ ಜಾಸ್ತಿ ಅಕ್ಷರ ಇರಬೇಕು. ಒಂದೋ ಎರಡೋ ಸಂಖ್ಯೆ ಇರಬೇಕು, ಒಂದೋ ಎರಡೋ ಚಿಹ್ನೆ ಕೂಡ ಇರಬೇಕು. ಆಗ ಪಾಸ್‌ವರ್ಡ್ ಬೇಧಿಸುವುದು ಕಷ್ಟ ಎಂದು ತಿಳಿಯಿತು. ಅಷ್ಟೇ ತಾನೆ, ಸುಲಭವಾಗಿ ನಾಲ್ಕಾರು ಪಾಸ್‌ವರ್ಡ್‌ಗಳನ್ನು ತಯಾರು ಮಾಡಿದೆ. ಬೇರೆ ಬೇರೆ ಬ್ಯಾಂಕ್ ಅಕೌಂಟ್‌ಗಳಿಗೆ, ಬೇರೆ ಬೇರೆ ಪಾಸ್‌ವರ್ಡ್‌ಗಳನ್ನೂ ನೊಂದಾಯಿಸಿದೆ. ಆದರೆ, ಯಾವ ಪಾಸ್‌ವರ್ಡ್ ಯಾವ ಅಕೌಂಟ್‌ಗೆ ಎನ್ನುವುದನ್ನು ಎಲ್ಲೂ ಬರೆದುಕೊಳ್ಳಲಿಲ್ಲ. ಸರಿ, ಮೊದಲನೆಯ ಸಲ ಪರವಾಗಿಲ್ಲ, ಸರಿಯಾದ ಪಾಸ್‌ವರ್ಡ್ ಹಾಕಿದೆ. ಆದರೆ ಎರಡನೆಯ ಸಲ ಮರೆತು ಬಿಟ್ಟೆ ಕಂಪ್ಯೂಟರ್ ಅಕ್ಕ ನನ್ನನ್ನು ಕೂಲಂಕುಷವಾಗಿ ಪರೀಕ್ಷೆಗೆ ಒಳಪಡಿಸಿದಳು. ಈ ಸಾರ್ತಿ ಎಲ್ಲಾ ಪ್ರಶ್ನೆಗಳಿಗೆ ಸರಿಯಾಗಿಯೇ ಉತ್ತರ ಕೊಟ್ಟೆ. ಆದರೂ ಅಕ್ಕ ಸುಮ್ಮನೆ ಬಿಡದೆ, ಒಂದು ಬಾಕ್ಸ್‌ನಲ್ಲಿ, ಸೊಟ್ಟ ಸೊಟ್ಟವಾಗಿ ಬರೆದಿದ್ದ ಅಕ್ಷರಗಳನ್ನು ಮತ್ತೆ, ಮತ್ತೆ ಬರೆಸಿದಳು. ಇಷ್ಟರಲ್ಲಿ ಕಾಲಿಂಗ್ ಬೆಲ್ ಸದ್ದು ಕೇಳಿ ಬಾಗಿಲು ತೆಗೆಯಲು ಹೋದೆ. ಹೋಗಿ ಬರುವಷ್ಟರಲ್ಲಿ ಕನೆಕ್ಷನ್ ಹೋಗಿಬಿಟ್ಟಿತ್ತು. ಮುಂದಿನ ಕಥೆ ಎಂದರೆ, ಕಸ್ಟಮರ್ ಸರ್ವಿಸ್‌ಗೆ ಫೋನಾಯಿಸಿ ಎರಡು ತಿಂಗಳ ನಂತರ, ಹೊಸದಾಗಿ ಮತ್ತೆ ಅಕೌಂಟ್ activate ಆಯಿತು. ಅಲ್ಲಿಯವರೆಗೆ ಬ್ಯಾಂಕ್‌ಗೆ ಖುದ್ದಾಗಿ ಭೇಟಿ ನೀಡುವ ಫಜೀತಿ. ಅಲ್ಲೂ assitant ನನ್ನನ್ನು ಕೆಟ್ಟದಾಗಿ ನೋಡಿ ''ಯಾಕೆ ಮೇಡಂ, ನಿಮ್ಮ ಮನೆಯಲ್ಲಿ ಕಂಪ್ಯೂಟರ್ ಇಲ್ಲವೇ? ನೆಟ್ ಬ್ಯಾಂಕಿಂಗ್ ಫೆಸಿಲಿಟಿ ನಿಮಗೆ ಕೊಟ್ಟಿದ್ದೆವಲ್ಲ'' ಎನ್ನುವಳು! ನನಗೋ ಎಲ್ಲರ ಮುಂದೆ ಮುಖ ಭಂಗ!

ಕೆಲವು ದಿನಗಳ ನಂತರ ನನ್ನ ಪತಿ ಸೂಚಿಸಿದರು. ಎಲ್ಲಾ ಅಕೌಂಟ್‌ಗಳಿಗೂ ಒಂದೇ ಪಾಸ್‌ವರ್ಡ್ ಮಾಡಿಬಿಡು ಎಂದು. ಆದರೆ ಅಂದೇ ಈ ಮೇಲ್‌ನಲ್ಲಿ ನನ್ನ ಸಹೋದ್ಯೋಗಿ ಆಫ್ರಿಕಾದಲ್ಲಿ ಲೂಟಿಗೊಳಗಾಗಿ ಹೇಗಾದರೂ 25000 ರೂಪಾಯಿಗಳನ್ನು ಅವರಿಗೆ ವರ್ಗಾಯಿಸು ಎಂದು ಕೇಳಿದ್ದರು. ಓಹೋ ಇದು ನೈಜೀರಿಯಾ ಚೋರರ ಕೃತಿ. ಪಾಸ್‌ವರ್ಡ್ ಹ್ಯಾಕ್ ಮಾಡಿ ಈ ರೀತಿ ಮೆಸೇಜ್ ಕಳಿಸಿದ್ದಾರೆ. ಸರಿ ಮಗಳ ಹತ್ತಿರ ಚರ್ಚಿಸಿದೆ. ಎಲ್ಲಾ ಅಕೌಂಟ್‌ಗಳಿಗೂ ಒಂದೇ ಪಾಸ್‌ವರ್ಡ್ ಬೇಡ ಎಂದು ತಿಳಿಯಿತು. ನನ್ನ ಇಬ್ಬರೂ ಮಕ್ಕಳು ಹೇಳಿಕೊಟ್ಟಂತೆ ನನ್ನ ವಿವಿಧ ಅಕೌಂಟ್‌ಗಳ ಪಾಸ್‌ವರ್ಡ್‌ಗಳನ್ನೂ, ಒಂದು ಸಣ್ಣ ಡೈರಿಯಲ್ಲಿ ಬರೆದಿಟ್ಟುಕೊಳ್ಳುವುದು. ಯಜಮಾನರು ಅಂಗಡಿಗೆ ಹೋಗಿ ಎರಡು ಡೈರಿಗಳನ್ನು ತಂದುಕೊಟ್ಟರು. ಹಳದಿ ಬಣ್ಣದ ಡೈರಿಯಲ್ಲಿ, ಪಾಸ್‌ವರ್ಡ್ ಬರೆದಿಟ್ಟುಕೊ, ಕೆಂಪು ಬಣ್ಣದ ಡೈರಿಯಲ್ಲಿ, ಬ್ಯಾಂಕ್ ಲಾಕರ್ ವಿವರಗಳನ್ನು ಬರೆದಿಡು ಎಂದು ಹೇಳಿದರು. ಸಧ್ಯ ಕೆಲಸ ಸುಗಮವಾಯಿತು.

ಈಗ ನನ್ನ ಮುಂದಿರುವ ಪೇಚಿನ ಪ್ರಸಂಗ ಬೇರೆ. ಎರಡೂ ಡೈರಿಗಳನ್ನು ಜೋಪಾನವಾಗೇ ಇಟ್ಟುಕೊಂಡಿದ್ದೆ. ಆದರೂ ಸಿಕ್ಕುತ್ತಿಲ್ಲ. ಯಜಮಾನರು ತುಂಬಾ ಕೋಪದಿಂದ ಮಾತನಾಡುವುದೇ ಬಿಟ್ಟಿದ್ದಾರೆ. ಪ್ರತಿಸಲ ಪಾಸ್‌ವರ್ಡ್ ಮರೆತು ಹೋಗಿದೆ ಎಂದರೆ ಎಂತಹ ಅವಮಾನ ಎನ್ನುತ್ತಾರೆ! ಅಲ್ಲಾರೀ ಕಂಪ್ಯೂಟರ್ ಅಕ್ಕನಿಗೆ ನನ್ನ ವಿಷಯ

ಗೊತ್ತಿಲ್ಲವೇ? ನನ್ನಂತಹ ನೂರಾರು ಜನರು ಪ್ರತಿದಿನ ಪಾಸ್‌ವರ್ಡ್ ಮರೆಯುವುದಿಲ್ಲವೇ? ಎಲ್ಲರ ಸಲುವಾಗಿ ಏನಾದರೂ ಉಪಾಯ ಮಾಡಬೇಕಲ್ಲವೇ?

ಕೆಲವು ವರ್ಷದ ಹಿಂದೆ, ನಮ್ಮ ಮನೆಗೆ ನಮ್ಮ ಹಳೆಯ ನೆರೆಯವರಾದ ಗಣೇಶನ್ ಮಾಮ ಕುಟುಂಬದೊಂದಿಗೆ ಬಂದಿದ್ದರು. ಅವರ 6 ವರ್ಷದ ಮೊಮ್ಮಗ ಅನಿರುಧ್ ತನ್ನ ತಂದೆ ಮುರಳಿಯ laptopನಲ್ಲಿ ಆಡುತ್ತಿದ್ದ. ''ಅಪ್ಪ ನಿನ್ನ ಇಂಟರ್ನೆಟ್ ಪಾಸ್‌ವರ್ಡ್ ಹಾಕಿ ಕೊಡಿ'' ಎಂದು ದುಂಬಾಲು ಬಿದ್ದ. ಮುರಳಿ ಮಗನ ಪ್ರತಾಪ ಹೇಳುತ್ತಾ ಅಷ್ಟು ಚಿಕ್ಕ ವಯಸ್ಸಿನಲ್ಲೇ ಅನಿರುಧ್ ಇಂಟರ್ನೆಟ್‌ನಲ್ಲಿರುವ ಚಿಕ್ಕ ಮಕ್ಕಳ ಆಟಗಳನ್ನು ಸಲೀಸಾಗಿ ಆಡುತ್ತಾನೆ ಎಂದು ಹೇಳಿದ. ಅಷ್ಟರಲ್ಲಿ, ನಾನು ಕಾಫಿ ತಿಂಡಿ ತಂದೆ. ಅನಿರುಧ್ ಬೇಗ ಬೇಗ ತಿಂಡಿ ತಿಂದು ಮತ್ತೆ ತಂದೆಯನ್ನು ಪಾಸ್‌ವರ್ಡ್ ಕೊಡಿ ಎಂದು ಪೀಡಿಸಿದ. ಅಷ್ಟರಲ್ಲಿ ಮುರಳಿಗೆ ಫೋನ್‌ಬಂತು. ಅವನ ಗಮನ ಫೋನ್‌ಕಡೆ. ಅನಿರುಧ್ ನನ್ನತ್ತ ನೋಡಿ ''ಹೋಗಲಿ ಬಿಡಿ. ನಾನೇ ಪಾಸ್‌ವರ್ಡ್ ಹಾಕಿಬಿಡುತ್ತೇನೆ'' ಎಂದವನೇ, laptop ತೆಗೆದು ಪಾಸ್‌ವರ್ಡ್ ಎನ್ನುವ ಕಡೆ, ******** ಎಂದು ನಕ್ಷತ್ರದ ಚಿಹ್ನೆ ಟೈಪ್ ಮಾಡಿದ. ಮಗುವಿನ ಮುಗ್ಧ ಬುದ್ಧಿವಂತಿಗೆ ನೋಡಿ ನಾವೆಲ್ಲಾ ನಕ್ಕೆವು, ಕೌತುಕ ಪಟ್ಟೆವು. ಈಗ ಅನಿರುಧ್ 7ನೇ ಕ್ಲಾಸ್‌ನಲ್ಲಿ ಓದುತ್ತಿದ್ದಾನೆ. ಅಷ್ಟು ಚಿಕ್ಕ ವಯಸ್ಸಿಗೆ ದೊಡ್ಡ ದೊಡ್ಡ ಕಂಪ್ಯೂಟರ್ ಪರೀಕ್ಷೆಗಳನ್ನು ಸುಲಭವಾಗಿ ಪಾಸು ಮಾಡಿರುವನಂತೆ. ಅವನಿಗೆ ಮುಂದೆ ಓದಲು ಸ್ಕಾಲರ್‌ಶಿಪ್ ಸಿಕ್ಕಿದೆಯಂತೆ!

ಈಗ ನನಗೊಂದು ಐಡಿಯಾ ಹೊಳೆದಿದೆ. ಒಂದು ನಾನೂ ಮಗು ಅನಿರುಧ್ ನಂತೆ ಬರೀ ನಕ್ಷತ್ರ ಚಿಹ್ನೆ ಹಾಕಿಬಿಡಲೇ? ನಿಮಗೇನಾದರೂ ಸುಲಭ ಮಾರ್ಗ ಗೊತ್ತೇ? ಮರೆತಿರುವ ಪಾಸ್‌ವರ್ಡ್ ಜ್ಞಾಪಿಸಲು ಬೇರೆ ಸಾಧನವಿದೆಯೇ?

ಅಥವಾ ಎಲ್ಲಾ ಕಡೆ ''ನಾನು ನಂಬರ್ 1 ಮೂರ್ಖಳು!'' ಎಂಬ ಒಂದೇ ಪಾಸ್‌ವರ್ಡ್ ಇಟ್ಟುಕೊಳ್ಳಲೆ? ಯಜಮಾನರೂ ಖುಷಿಯಾಗುತ್ತಾರೆ. ಕಡೆಗೂ ತಮ್ಮ ಪತ್ನಿ ಸತ್ಯವನ್ನು ಅರಿತು ಒಪ್ಪಿಕೊಂಡಳು ಎಂದು!!!

❑

---

ಈಗ ಮಹಾ ವಿಷಯ ಮಹಿಳಾ ಮೀಸಲಾತಿ
ಬಸ್ಸಿನಲ್ಲೂ ಬಿಟ್ಟುಕೊಡಬೇಕು ಅವರಿಗೆ ಸೀಟು
ರಾಜಕೀಯದಲ್ಲೂ ಉಂಟು ಮೀಸಲಾತಿ ಸೀಟು
ಇದೇ ಅಂತೆ ಭವ್ಯಭಾರತದ ದೊಡ್ಡ ಗೇಟು

*– ಸುಕೇಶವ*

# ಟೆಂಪಲ್ ಪ್ರೀಮಿಯರ್ ಲೀಗ್ (ಟಿಪಿಎಲ್)

**- ಇ.ಆರ್. ರಾಮಚಂದ್ರನ್**

**ಈ**ಗ ಕ್ರಿಕೆಟ್ ನಮ್ಮ ಜೀವನದ ಎಲ್ಲಾ ಹೊಕ್ಕು ಸಿಕ್ಕುಗಳಲ್ಲಿ ಸೇರಿದಾಗಿನಿಂದ ಬೇರೆ ಯಾವ ವಿಷಯಕ್ಕೂ ಯಾರಿಗೂ ಟೈಮಿಲ್ಲ.

ಐಪಿಎಲ್ ಬಂದ ಮೇಲೆ ಈಗ ಸಿನಿಮಾದವರು, ಬಾಲಿವುಡ್, ಟಾಲಿವುಡ್, ಸ್ಯಾಂಡಲ್‌ವುಡ್ ಹೀರೋ, ವಿಲನ್, ಕ್ಯಾರೆಕ್ಟರ್ ಆಕ್ಟರ್, ಕ್ಯಾರೆಕ್ಟರ್‌ಲೆಸ್ ಆಕ್ಟರ್, ಕ್ಯಾಬರೆ, ಅರೆಬರೆ, ಎಕ್ಸ್ಟ್ರಾಸ್ ಸೇರಿ ತಮ್ಮದೇ ಆದ 'ಸಿನಿ ಪ್ರೀಮಿಯರ್ ಲೀಗ್' ಮಾಡಿ ಟಿ-20 ಮ್ಯಾಚ್ಗಳು ಆಡ್ತಿಲ್ವೇ?

ಹಾಗೇ ಬೇರೆ ಗ್ರೂಪಿನವರ ಲೀಗೂ ಶುರುವಾಗಿದೆ.

ಟೆಂಪಲ್ಸ್ ಪ್ರೀಮಿಯರ್ ಲೀಗಿನಲ್ಲಿ (ಟಿಪಿಎಲ್) ತಿರುಪತಿ ತಿಮ್ಮಪ್ಪಾಸ್, ಅಮೃತ್ಸರ್, ಗೋಲ್ಡನ್‌ಟೆಂಪಲ್ ಗೋಲ್ಡೀಸ್, ನಂಜನಗೂಡು ನಂಜುಂಡಪ್ಪಾಸ್, ಜಮ್ಮು ವೈಶ್ಣೋದೇವಿ ವಿನ್ನರ್ಸ್, ಶ್ರೀರಂಗಪಟ್ಟಣ ರಂಗನಾಥ ರೇಂಜರ್ಸ್, ಕಂಚಿ ಕಾಮಾಕ್ಷಿ ಕಠಾರಿವೀರನ್ಸ್ - ಇವರ ಟೀಮಿನಲ್ಲಿ ಅರ್ಚಕರು, ಟ್ರಸ್ಟಿಗಳು, ನಾದಸ್ವರ ನುಡಿಸುವವರು, ತವಿಲ್ ಬಾರಿಸುವರು, ಹೂವು ಹಣ್ಣು ಪೂಜಾ ಸಾಮಗ್ರಿ ಸಪ್ಲೈ ಮಾಡುವರು, ತೇರು ರಥ ಎಳೆಯೋವ್ರು, ಹೇರ್‌ಕಟಿಂಗ್ ಮಾಡೋವ್ರು ಇತ್ಯಾದಿ..

**ಇದೊಂದು ಅಪ್ಪಟ ಆಲ್ ರಿಲಿಜಿಯನ್ ಲೀಗ್. ಇಲ್ಲಿ ಎಲ್ಲ ಮತದವರಿಗೂ ಅವಕಾಶ**

ಟಿಪಿಎಲ್‌ನ ಓವರ್ಸೀಸ್ ಅಬ್ಸರ್ವರ್ ಈಗ ಲಂಡನ್ನಿಗೆ ಓಡಿ ಹೋಗಿ ಅವಿತುಕೊಂಡಿರುವ ಲಲಿತ್ ಮೋದಿ.

ಮೊದಲನೇ ಮ್ಯಾಚ್ ತಿರುಪತಿಯ ಬಾಲಾಜಿ ಸ್ಟೇಡಿಯಂನಲ್ಲಿ ಮೌನಿ ಅಮಾವಾಸೆಯ ದಿನ ತಿಮ್ಮಪ್ಪಾಸ್ ಮತ್ತು ಅಮೃತ್ಸರ್ಸ್ ಗೋಲ್ಡೀಸ್ ಡೇ ನೈಟ್ ಮ್ಯಾಚ್. ಐದು ಶಂಕರಾಚಾರ್ಯರು ದೀಪವನ್ನು ಬೆಳಗುವ ಮೂಲಕ ಟೂರ್ನಮೆಂಟ್ ಶುರುವಾಯಿತು.

ಸುನಿಲ್ ಗವಾಸ್ಕರ್ ಬೆಳ್ಳಂಬೆಳಿಗ್ಗೆ ಪುಟ್ಟಪರ್ತಿಯಿಂದ ಬರುತ್ತಿದ್ದಂತಯೇ ದೇವ್ರ ದರ್ಶನ ಮಾಡಿ ಕಲಾಪತ್ತಿನ ಪಂಚೆ ಶಲ್ಯ ಉಟ್ಟುಕೊಂಡು ಕಾಮೆಂಟ್ರಿ ಬಾಕ್ಸಿನ ಕಡೆ ಹೊರಟಾಗ ಅವರ ಹಿಂದೆಯೇ ಬರೀಪಂಚೆ ಉಟ್ಟು ಕೈಲಿ ಡ್ರಿಂಕ್ಸಿಗೆ ಬೇಕಾಗುವ ಲೋಟ, ತಟ್ಟೆ ಇಟ್ಟುಕೊಂಡು ಇನ್ನೊಂದು ಕೈಲಿ ಏಕ ನಾದ ಮೀಟುತ್ತಾ ರವಿ ಶಾಸ್ತ್ರಿ ನಡೆದರು.

ಆರ್ಚ್ ಬಿಷಪ್ ಅಫ್ ಕ್ಯಾಂಟರ್ಬರಿ ಟಾಸ್ ಮಾಡಿದ ಮೇಲೆ ಮ್ಯಾಚ್ ಶುರುವಾಯಿತು.

ವರ್ಷ ವಿಡೀ ತುಪ್ಪದ ಲಾಡು ಉಂಡೆ ಮಾಡಿ ಜಿಡ್ಡಿನ ಕೈನಲ್ಲಿ ತಿಮ್ಮಪ್ಪಾಸ್ ಮಂದಿ ಬೋಲ್ ಮಾಡಿದಾಗ, ಬಾಲು ಯರ್ರಾಬಿರ್ರಿ ಸ್ವಿಂಗ್ ಮತ್ತು ಬುಗುರಿ ಹಾಗೆ ಸ್ಪಿನ್ ಆಗ್ತಾ ಇತ್ತು. ಮೂರು ಓವರ್ ಆಡಿದ ಗೋಲ್ಡೀಸ್ ಇದು ಅನ್ಫೇರ್ ಪ್ರಾಕ್ಟಿಸ್ ಎಂದು ಐಸಿಸಿ ಮ್ಯಾಚ್ ರೆಫ್ರೀಗೆ ಕಂಪ್ಲೇನ್ ಮಾಡಿದ್ರು. ಕಾಶಿ ವಿಶ್ವನಾಥನ ದೇವಸ್ಥಾನದಿಂದ ಬಂದಿದ್ದ ಮ್ಯಾಚ್ ರೆಫ್ರೀ ಓಮ್ ಪ್ರಕಾಶ್ ಪಾಂಡ ಎರಡು ದಿನದಿಂದ ಊಟಕ್ಕೆ ಮೂರು ಹೊತ್ತೂ ಲಾಡು, ವಡೆ ತಿಂದ ಪರಿಣಾಮ ಹೊಟ್ಟೆ ಅಪ್ಸೆಟ್ ಆಗಿ ಮ್ಯಾಟರ್ನ್ನ ಹೋಟೆಲ್ನಿಂದಲೇ ವೀಡಿಯೋ ಪರಿಶೀಲಿಸಿ, ಕಿಟಕಿಯಿಂದಲೇ ಹೆಬ್ಬೆಟ್ಟು ಎತ್ತಿ ತಿಮ್ಮಪ್ಪಾಸ್ ಪರವಾಗಿ ಡಿಸಿಷನ್ ಕೊಟ್ಟರು. ಗ್ಲೂಕೋಸ್ ಡ್ರಿಪ್ಸಿನಿಂದ ಬದುಕಿದ ಪಾಂಡ ಕೈ ಎತ್ತಿ ಬೈ ಬೈ ಮಾಡುವುದಕ್ಕೂ ಶಕ್ತಿ ಇಲ್ಲದೆ ಕಾಶಿಗೆ ವಾಪಸ್ಸು ದೌಡಾಯಿಸಿದರು.

ಮತ್ತೆ ಮ್ಯಾಚ್ ಶುರುವಾದಾಗ ತಮ್ಮ ವಿರುದ್ಧ ಆದ ತೀರ್ಪಿಗೆ ಜಗ್ಗದೆ ಅಮೃತ್ಸರ್ಸ್ ಓಪನಿಂಗ್ ಬ್ಯಾಟ್ಸ್ಮನ್ ತಲೆಗೆ ಕರ್ಚೀಫ್ ಕಟ್ಕೊಂಡು ಬಂದು ಬೋಡು ಹೊಡೆಸಿಕೊಂಡ ತಿಮ್ಮಪ್ಪಾಸ್ ಫೀಲ್ಡರ್ಸ್ ತಲೆ ಥಳಥಳಾಂತ ಹೊಳೆದು ಕಣ್ಣು ಚುಚ್ಚುತ್ತೆ ಅಂತ ಕಂಪ್ಲೇನ್ಟ್ ಮಾಡಿದ್ರು. ಹೊಸದಾಗಿ ರೆಫ್ರೀಯಾಗಿ ನೇಮಕವಾದ ಬಾಬ್ರಿ ಮಸೀದಿಯ ಇಕ್ಬಾಲ್ ಕುರೇಷಿ ಸ್ವತಹ ಗ್ರೌಂಡಿಗೆ ಬಂದು ಚೆಕ್ ಮಾಡಿ ತಕ್ಷಣವೇ ಕೂಲಿಂಗ್ ಗ್ಲಾಸ್ ಏರಿಸಿ ಫೀಲ್ಡಿಂಗ್ ಟೀಮ್ ಸ್ಕಲ್ ಕ್ಯಾಪ್ ಹಾಕಿಕೊಂಡು ಆಡಬೇಕೆಂದು ಅಪ್ಪಣೆ ಮಾಡಿದರು.

ಮ್ಯಾಚ್ ಶುರುವಾದಾಗ ತಿಮ್ಮಪ್ಪಾಸ್‌ರ ಹೊಸ ಸ್ಟ್ರಾಟಜಿ!! 'ಹೌಝೂಟ್!' ಅಂತ ಕೂಗಿಗೆ ಬದಲಾಗಿ 'ಗೋವಿಂದ ಗೋವಿಂದ' ಎಂದು ಅಪೀಲ್ ಮಾಡಿದ್ದಕ್ಕೆ ರೇಗಿ, ಅಮೃತ್ಸರ್ ಗೋಲ್ಡೀಸ್ 'ಜೋ ಬೋಲೆ ಸೋ ನಿಹಾಲ್' ಎಂದು ಕೂಗುತ್ತಾ ಸಿಕ್ಸರ್ ಬಾರಿಸೋಕ್ಕೆ ಶುರು! ಅಂಪೈರಾಗಿ ನಿಂತಿದ್ದ ವೇಟಿಕನ್ ಪೋಪ್‌ಗಳು ಕ್ರಿಕೆಟ್ ಮ್ಯಾಚಿನ ಮಧ್ಯೆ ರಿಲಿಜನ್ ತರಬಾರದಾಗಿತ್ತು ಎಂದು ಬೇಜಾರಿಸಿಕೊಂಡು ತಕ್ಷಣವೇ ಮ್ಯಾಚ್ ನಿಲ್ಲಿಸಿ ಪೋಪ್ಗೆ ಮಾಸ್ ರೆಸಿಗ್ನೇಷನ್ ಇ-ಮೈಲ್ ಮಾಡಿದ್ರು. ಅದು ಹೋಗುವುದಕ್ಕೆ ಮುಂಚೆ ಪೋಪ್ ಅವರೇ ರಿಸೈನ್ ಮಾಡಿದ್ದಾರೆ ಅನ್ನುವ ಸುದ್ದಿ ಜೈಂಟ್ ಸ್ಕೋರ್ ಬೋರ್ಡ್‌ನಲ್ಲಿ ಫ್ಲಾಷಾಯಿತು! ಕೊನೆಗೆ ಡೆಲ್ಲಿಯಿಂದ ಎಲ್ಲಾ ಇಟಾಲಿಯನ್ ಅಂಪೈರ್‌ಗಳಿಗೂ ಸ್ಪೆಷಲ್ಲಾಗಿ ಗುಪ್ತ ಫೋನ್ ಬಂತು. ಹೆಲಿಕಾಪ್ಟರ್ ಡೀಲಿನಿಂದ ಬರುವ ದುಡ್ಡಿನಲ್ಲಿ ನಿಮಗೂ ಪಾಲುಂಟು ಮತ್ತು ನಿಮಗೆ ತಲಾ ಒಂದೊಂದು ಹೆಲಿಕಾಪ್ಟರ್ ಫ್ರೀ ಕೊಡಿಸ್ತೀವಿ ಎಂದು ಭರವಸೆ ಬಂದಾಗ ವೇಟಿಕನ್ ಅಂಪೈರ್‌ಗಳು ಮ್ಯಾಚ್ನ ಮುಂದುವರಿಸಿ ಸಿಕ್ಸರ್ ಮತ್ತು ಔಟ್ನ ಡಬಲ್ ಉತ್ಸಾಹದಿಂದ ಕೈ ಎತ್ತಲಾರಂಭಿಸಿದರು.

ಉರಿಯುವ ಬಿಸಿಲು ಜಳದಿಂದ ಸುಸ್ತಾಗಿದ್ದ ಎರಡು ಟೀಮಿಗೂ ಪಾನಕ ಮತ್ತು ನೀರು ಮಜ್ಜಿಗೆ ಕಮಂಡಲಗಳಿಂದ ಸರಬರಾಜು ಮಾಡಿದ್ದಾಯಿತು. ಹಿಪ್ ಫ್ಲಾಸ್ಕಿನಲ್ಲಿಟ್ಟಿದ್ದ ಹೋಲಿ ವಾಟರ್ ಅನ್ನು ಇಟಾಲಿಯನ್ ಅಂಪೈರ್ಸ್ ನೇರವಾಗಿ ಕುಡಿದರು.

★★★

ಎರಡನೇ ಪಂದ್ಯ ಪದ್ಮನಾಭ ಕೋವಿಲ್ ಕಾನ್ಕರರ್ಸ್ ಮತ್ತು ಜಮ್ಮುವಿನ ವೈಷ್ಣೋದೇವಿ ವಿಕ್ಟರ್ಸ್‌ರ ಮಧ್ಯೆ ಟ್ರಿವೇಂಡ್ರಂ ಸ್ವಾತಿ ತಿರುನಾಳ್ ಸ್ಟೇಡಿಯಂನಲ್ಲಿ ಶುರುವಾಗುವುದಕ್ಕೆ ಮುಂಚೆ ಬೊಗಸೆ ಗಾತ್ರವಿರುವ ಚಿನ್ನದ ನಾಣ್ಯ ಎರಡು ಕೈಯಿಂದ ಹಿಡಿದು ದಲೈಲಾಮಾ ಟಾಸ್ ಮಾಡಿದ್ರು. ಕಳೆದ ವರ್ಷ ನಡೆದ ಆಡಿಟ್ನಲ್ಲಿ ಪದ್ಮನಾಭ ಟೆಂಪಲ್ನಲ್ಲಿ ಸಾವಿರಾರು ವರ್ಷದ ಹಿಂದೆ ಹೂತಿಟ್ಟ ಕೊಟ್ಯಾಂತರ ರೂಪಾಯಿ ಆಭರಣಗಳ ಮಧ್ಯೆ ಈ ನಾಣ್ಯ ಸಿಕ್ಕಿತ್ತು. ದಲೈಲಾಮ ಅವರು ಟಾಸ್ ಮಾಡುವುದನ್ನು ಪ್ರಪಂಚದ ಎಲಾ ್ಲಕಡೆಯಿಂದ ಸಹಸ್ರಾರು ಜ್ಯೂಯಲರ್ಸ್ ಬಂದು ವೀಕ್ಷಿಸಿದರು.

ದಿನಾ ಭಕ್ತಾದಿಗಳಿಗೆ ಚಪ್ಪಾತಿ ಲಟ್ಟಿಸಿ ಫೋರ್ ಆರಮ್ಡ್ ಪೈಲ್ವಾನ್ರ ಹಾಗೆ ಬೆಳಸಿಕೊಂಡ ವೈಷ್ಣೋದೇವಿ, ಕೋವಿಲ್ರ ಬೋಲಿಂಗ್ನ ಹಿಗ್ಗಾಮುಗ್ಗವಾಗಿ ಥಳಿಸಲಾರಂಭಿಸಿದರು. ಅಷ್ಟರಲ್ಲಿ ಇಸ್ರೋವಿನ ಲ್ಯೂನಾರ್ ಮಾಡ್ಯೂಲ್ನಲ್ಲಿ ಬಾಳೆಕಾಯಿ ಚಿಪ್ಸ್ ಮತ್ತು ಕುಸುಬಲಕ್ಕಿಯ ಗಂಜಿ ಬಂತು. ಅದನ್ನು ಕುಡಿದ ಅರ್ಧಘಂಟೆಯಲ್ಲಿ ವಿಕ್ಟರ್ಸ್ ಟೀಮ್ ಆಲೌಟ್ ಆದರು. ಪೆವಿಲಿನ್ನಲ್ಲಿ ಕೂತವರೂ ಎರಡರೆಡು ನಿಮಿಷಕ್ಕೆ ಬಾತ್ರೂಮ್ಗೆ ದೌಡು!

ಗವಾಸ್ಕರ್ ಮತ್ತು ಶಾಸ್ತ್ರಿ ಡ್ರಿಂಕ್ಸ್ ಮುಟ್ಟಲ್ಲಾಂತ ಹೇಳಿ, ಬೊಂಬಾಯಿ ಸಿದ್ಧಿ ವಿನಾಯಕ ಟೆಂಪಲ್‌ನಿಂದ ತಂದಿದ್ದ ಮೋದಕ್ ಮತ್ತು ಎಳನೀರಿನಲ್ಲೇ ಊಟದ ಶಾಸ್ತ್ರ ಮುಗಿಸಿದರು.

ಕಲರ್ ಲುಂಗಿಯನ್ನುಟ್ಟುಕೊಂಡ ಕೋವಿಲ್ಸ್ ಹುಶಾರಾಗಿ ಆಡಿ, ಜಿಂಕೆಯ ಹಾಗೆ ರನ್ ಓಡಿ ಸುಲಭವಾಗಿ ಮ್ಯಾಚ್ ಗೆದ್ದರು. ಇಲ್ಲೂ ಹೋಮ್ ಟೀಮಿನ ವಿರುದ್ಧ ದೂರು ಬಂತು. ವಿಕ್ಟರ್ಸ್ನ ಡಯೆಟ್‌ನಲ್ಲಿ ಪಾಮಾಯಿಲ್ ಹಾಕಿ ತಿನ್ನಿಸಿದ ಬಾಳೇಕಾಯಿ ಚಿಪ್ಸ್‌ನಿಂದ ಎಲ್ಲರಿಗೂ ಡೀಸೆಂಟ್ರಿ ಆಗಿ ಬ್ಯಾಟು ಹಿಡಿಯೋದಕ್ಕೆ ಕಷ್ಟವಾಯಿತೆಂದು ದೂರು ಕೊಟ್ಟರು ವೈಷ್ಣೋದೇವಿ.

ಮ್ಯಾಚ್ ರೆಫ್ರೀ ಸೇಂಟ್ ಫಿಲೊಮಿನಾಸ್‌ನ ಪಾದ್ರಿ ಫಾದರ್ ಇಗ್ನೇಷಿಯಸ್ ರಿಪೋರ್ಟ್ ಸಬ್ಮಿಟ್ ಮಾಡಲು ಸ್ವಾತಿ ತಿರುನಾಳ್ ಸ್ಟೇಡಿಯಂಗೆ ಹೋಗುವಾಗ ದಾರಿಯಲ್ಲಿ ಅವರ ಕಾರು ಓಣಂ ಹಬ್ಬದ ಅಂಗವಾಗಿ ಬೀದಿಯಲ್ಲಿ ಬರುತ್ತಿದ್ದ ಬಾಹುಬಲಿ ತೇರಿಗೆ ಢಿಕ್ಕಿಹೊಡೆದು ತೀವ್ರವಾಗಿ ಗಾಯಗೊಂಡ ಇಗ್ನೇಷಿಯಸ್ ಅವರನ್ನು ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಲಾಯಿತು. ಇದು ನಿಜವಾಗಿಯೂ ಆಕ್ಸಿಡೆಂಟಾ ಅಥವಾ ಪ್ರೀಪ್ಲಾನ್ಡಾಂತ ನಿಶ್ಚಯಿಸಲು ಟಿಪಿಎಲ್ ಕೌನ್ಸಿಲ್ ಕಮಿಟಿಯೊಂದನ್ನು ರಚಿಸಿತು.

★★★

ಇಷ್ಟು ಚೆನ್ನಾಗಿ ಆರ್ಗನೈಸ್ ಮಾಡಿದ ಈ ಟೂರ್ನಮೆಂಟ್ ಜೊತೆ ಐಪಿಎಲ್‌ನ ಸೇರಿಸಿ, ಮುಂದಿನ ವರ್ಷದಿಂದ ಜಾಯಿಂಟ್ ಟೂರ್ನಮೆಂಟ್ ಮಾಡೋಣ ಎಂಬ ಬಿಸಿಸಿಐನ ಸಲಹೆಯನ್ನು ಟಿಪಿಎಲ್ ತಳ್ಳಿಹಾಕಿತು.

ನಾವು ಪ್ರೆಸ್‌ಗೆ ಹೋದಾಗ ಸುನಿಲ್ ಗವಾಸ್ಕರ್ ಮತ್ತು ರವಿ ಶಾಸ್ತ್ರಿಯವರನ್ನು ಎರಡು ಪಂಗಡಗಳೂ ಮೀಡಿಯೇಟರ್ಸ್ನಾಗಿ ನೇಮಿಸಿ ಅವರ ಶಿಫಾರಿಸ್ಸಿಗಾಗಿ ಕಾಯುತ್ತಿದ್ದರು.

❑

# ತಿಂಡಿಪೋತ

**- ಸುಷ್ಮಾ ನಿವಾಲ್ಕರ್**

**ನ**ನ್ನ 8 ವರ್ಷದ ಮಗನನ್ನು ಅವರ ತಾತ – ಅಂದರೆ ನನ್ನ ತಂದೆ – ತಿಂಡಿಪೋತ ಎಂದೇ ಕರೆಯುತ್ತಾರೆ. ಏಕೆ ಗೊತ್ತೆ?

ಅವನು ಪ್ರತಿ ದಿನ ಬೆಳಿಗ್ಗೆ 'ಅಮ್ಮಾ ಏನು ತಿಂಡಿ ಮಾಡಿದ್ದೀ?' ಎಂದು ಕೇಳುತ್ತಲೇ ಹಾಸಿಗೆಯಿಂದ ಏಳುತ್ತಾನೆ.

'ಇವತ್ತು ದೋಸೆ' ಎಂದು ನಾನು ಹೇಳಿದರೆ 'ದೋಸೆ? ಇಡ್ಲಿ ಯಾಕೆ ಮಾಡಲಿಲ್ಲ. ಸಬ್ಬಕ್ಕಿ ಖಿಚಡಿ ಮಾಡಿ ಎಷ್ಟು ದಿನ ಆಯಿತು?' ಎಂದು ಆಕ್ಷೇಪಣೆ ವ್ಯಕ್ತಪಡಿಸುತ್ತಾನೆ.

'ಮೂರು ದಿನಗಳ ಹಿಂದೆ ಸಬ್ಬಕ್ಕಿ ಖಿಚಡಿ ತಿಂದೆ' ಎಂದು ನೆನಪಿಸಿದರೆ ಅವನಿಗೆ ವಾದ ಮಾಡಿ ಪ್ರಯೋಜನ ಇಲ್ಲ ಎಂದು ಅನಿಸಿದರೆ ನನಗೆ, ಅವನ ಲಂಚ್ ಬಾಕ್ಸ್‌ಗೆ ಎರಡು ಐಟಂ ಹಾಕಿ ಮನೆಮಂದಿಗೆ ಊಟಕ್ಕೆ ತಯಾರಿ ಮಾಡುವ ಕಾಳಜಿ.

'ಸರಿ ಹಾಗಿದ್ದರೆ. ದೋಸೆ ಜತೆ ಚಟ್ನಿಪುಡಿ ಕೊಡು ಅಮ್ಮ. ಜತೆಗೆ ಸಕ್ಕರೆ ಮತ್ತು ತುಪ್ಪ. ಮತ್ತೆ ಚಟ್ನಿ ಯಾವುದು ಹಸಿರೊ ಬಿಳೀದೋ?'

'ಚಟ್ನಿ ಮೊದಲು ಮುಗಿಸಿದರೆ ಮಾತ್ರ ಸಕ್ಕರೆ' ಎಂದು ನಾನವನಿಗೆ ಷರತ್ತು ಹಾಕುತ್ತೇನೆ.

ಈಗವನಿಗೆ ಲಂಚ್ ಬಾಕ್ಸ್ ಬಗ್ಗೆ ಕಾಳಜಿ.

'ಅಮ್ಮ, ಲಂಚ್ ಬಾಕ್ಸ್‌ಗೆ ಏನು?'

'ದೋಸೆ ಮತ್ತು ಪರಾಠ'

'ಪರಾಠ? ಯಾವ ಪರಾಠ?'

'ಮೂಲೀದು'

**ಇವನು ತಿಂಡಿಪೋತನೋ ಅಲ್ಲವೋ ನೀವೇ ಹೇಳಿ...**

'ಹೌದೆ? ಜತೆಗೆ ಸಾಸ್ ಹಾಕಲು ಮರೆಯಬೇಡ ಅಮ್ಮ.'

'ಆಗಬಹುದು. ಆದರೆ ತಾವು ಮೊದಲು ಬ್ರಶ್ ಮಾಡೋಣವಾಗಲಿ.'

'ಅಮ್ಮಾ..'

'ಏನಪ್ಪಾ..'

'ನಾನು ಸ್ಕೂಲಿನಿಂದ ಬಂದಮೇಲೆ ಊಟಕ್ಕೆ ಏನಿರುತ್ತೆ?' ಈಗವನಿಗೆ ಊಟದ ಯೋಚನೆ.

ನನ್ನ ಸಹನೆ ಒಡೆಯುತ್ತಿರುತ್ತದೆ. ಆದರೂ 'ಅದರ ಬಗ್ಗೆ ಇನ್ನೂ ಯೋಚಿಸಿಲ್ಲ. ಈಗ ಬ್ರಶ್ ಮಾಡ್ತೀಯೋ ಇಲ್ಲವೋ..?' ಎಂದು ದನಿ ಏರಿಸುತ್ತೇನೆ.

'ಅಮ್ಮಾ, ಇವತ್ತು ಬಿರಿಯಾನಿ ಮಾಡು. ನಮ್ಮ ಸ್ಕೂಲ್ ಕ್ಯಾಂಟೀನಿನಲ್ಲಿ ಬಿರಿಯಾನಿ ಎಷ್ಟು ಚೆನ್ನಾಗಿ ಮಾಡ್ತಾರೆ ಗೊತ್ತಾ?'

'ಇನ್ನೈದು ನಿಮಿಷದಲ್ಲಿ ಬ್ರಶ್ ಮಾಡಿಕೊಂಡು ಬರದಿದ್ದರೆ ನಾನು ಇವತ್ತು ಊಟಕ್ಕೆ ಕಾಲಿಫ್ಲವರ್ ಪಲ್ಯ ಮಾಡ್ತೀನಿ. ತಿಳೀತೆ?'

ಈ ಎಚ್ಚರಿಕೆ ಕೆಲಸ ಮಾಡುತ್ತದೆ ಏಕೆಂದರೆ ಕಾಲಿಫ್ಲವರ್ ಅಂದರೆ ಅವನು ಮೈಲಿದೂರ ಓಡುತ್ತಾನೆ. ಅಷ್ಟು ದ್ವೇಷ ಆ ತರಕಾರಿ ಬಗ್ಗೆ ಅವನಿಗೆ.

ಕೊನೆಗೊಮ್ಮೆ ಯೂನಿಫಾರ್ಮ್ ಧರಿಸಿ ಸ್ಕೂಲಿಗೆ ಹೊರಡಲು ಸಿದ್ದನಾಗಿ ದೋಸೆ ತಿನ್ನಲು ಬರುತ್ತಾನೆ.

'ಅಮ್ಮಾ ನನಗೆ ಎಷ್ಟು ದೋಸೆ ಕೊಡ್ತೀಯ?'

'ಎಷ್ಟು ಬೇಕಾದರೂ ತಿನ್ನು'

'ಅಮ್ಮ ನನ್ನ ಫ್ರೆಂಡ್ ಸಮರ್ಥ್ ನಿನಗೆ ಗೊತ್ತಲ್ಲ ಅವನು ಮ್ಯಾಗಿ ತರ್ತಾನೆ.'

ಮೂಲಿ ಪರಾಠ ಬೇಯಿಸುತ್ತಿರುವ ನಾನು 'ಸರಿ' ಎಂದು ಗೊಣಗುತ್ತೇನೆ.

'ನನಗೇಕೆ ನೀನು ನೂಡಲ್ಸ್ ಕಳಿಸಲ್ಲ?' ಎಂದು ದೋಸೆ ತಿನ್ನುತ್ತಾ ಪ್ರಶ್ನಿಸುತ್ತಾನೆ.

'ಏಕೆಂದರೆ ನಿನಗೆ ಬೇರೆ ಏನೇನೋ ಮಾಡಿ ಕಳಿಸ್ತೀನೆ ಅದಕ್ಕೆ..' ಎಂಬುದು ನನ್ನ ವಿವರಣೆ.

'ಅಮ್ಮ, ನಿನಗೆ ಅಡಿಗೆ ಮಾಡೋದು ಯಾರು ಹೇಳಿಕೊಟ್ಟರು?' ಎಂಬ ಮಹತ್ವದ ಪ್ರಶ್ನೆ ಅವನಿಂದ ಬರುತ್ತದೆ.

'ತುಂಬಾ ಜನ' ಎಂದು ನಾನು ವಿವರಣೆ ಕೊಡುತ್ತೇನೆ.

'ಅಮ್ಮ ಈವಾರ ನಾವು ಮನೇಲಿ ಪಿಜ್ಜಾ ಮಾಡೋಣವೆ?'

'ಮಾಡೋಣ ಆದರೆ ನೀನು ಸರಿಯಾಗಿ ಹೋಂ ವರ್ಕ್ ಮಾಡಿದರೆ' ಎಂಬ ಷರತ್ತನ್ನು ಹಾಕುತ್ತೇನೆ.

'ಮತ್ತೆ ಹೋಂ ವರ್ಕ್.. ನಿನಗೆ ಯಾವಾಗಲೂ ಹೋಂ ವರ್ಕ್.. ಹೋಂ ವರ್ಕ್..' ಅವನಿಗೆ ಕೋಪ ಬರುತ್ತೆ.

'ಮತ್ತೆ ಪಿಜ್ಜಾ ಬೇಕಾದರೆ ಹೋಂ ವರ್ಕ್ ನೀನೇ ಮಾಡಿ ಮುಗಿಸಬೇಕು.'

'ಅಮ್ಮ, ದೋಸೆ ಫಸ್ಟ್ ಕ್ಲಾಸ್. ನನಗೆ ಇನ್ನೂ ಬೇಕು.'


ಮೂರು ದೋಸೆ ಮುಗಿಸುತ್ತಿದ್ದಂತೆ ಅವನಿಗೆ ಸ್ಕೂಲ್ ನೆನಪಿಗೆ ಬರುತ್ತೆ. 'ಅಮ್ಮ ಇವತ್ತು ಕ್ರಿಕೆಟ್ ಮ್ಯಾಚ್ ಇದೆ. ನಾನೇ ಕ್ಯಾಪ್ಟನ್' ಎಂದು ಘೋಷಿಸುತ್ತಾನೆ.

ಅಂದಹಾಗೆ ಊಟದ ನಂತರ ಅವನ ಇನ್ನೊಂದು ಅಚ್ಚುಮೆಚ್ಚು ಎಂದರೆ ಕ್ರಿಕೆಟ್.

ರಾತ್ರಿ ಊಟದ ಸಮಯದಲ್ಲಿ ಕ್ರಿಕೆಟ್ ಆಟದ ಬಗ್ಗೆ ವಿವರಣೆಯನ್ನು ನಾನು ಕೇಳುತ್ತಿರಬೇಕು. ಜತೆಜತೆಗೆ ನಾಳಿನ ಬ್ರೇಕ್‌ಫಾಸ್ಟ್ ಬಗ್ಗೆ ಚಿಂತನೆಯೂ ನಡೆಸಿರುತ್ತಾನೆ.

ಆದುದರಿಂದಲೇ ಅವನೊಬ್ಬ ತಿಂಡಿಪೋತ ಅಲ್ಲವೆ?

❑




**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಸೋಲೋತ್ಸವ

**– ಸಿ.ಆರ್. ಸತ್ಯ**

**ಹಾ**ಲಿನ ಹನುಮಂತಪ್ಪ ನಮ್ಮ ಮನೆಗೆ ಬಂದು ''ಸಾರ್, ....ಅಪ್ಪನವರು ಭಾಷಣ ಮಾಡ್ತಾರಂತೆ. ನೀವೂ ಬರಬೇಕಂತೆ. ಜನ ಇಲ್ಲವಂತೆ. ಸ್ಕೂಲ್ ಮೈದಾನದಲ್ಲಿ, ಈಗ'' ಅಂತ ಅಂದ. ನಾನು, ''ಅಲ್ಕಣಪ್ಪ, ಹನುಮಂತ, ಈ ...ಅಪ್ಪನವರು ಇವತ್ತು ಬೆಳಿಗ್ಗೇ ತಾನೇ ಅಸೆಂಬ್ಲಿ ಎಲೆಕ್ಶನ್ನಲ್ಲಿ ಸೋತಿದ್ದಾರೆ ಅಂತ ತೀರ್ಮಾನ ಬಂದಿದೆ. ಇನ್ಯಾವ ಭಾಷಣ?'' ಅಂದೆ. ''ಸೋತ್ಕೊಂಡಿದ್ದಕ್ಕೇ ಬಾಸನಾ ಮಾಡ್ತಾರಂತೆ ಬನ್ನಿ'' ಅಂದ. ಸರಿ, ನನಗೆ ಇನ್ನೇನು ಕೆಲಸ? ಹೋದೆ.

> **ನಾನು ಸೋತಿದ್ದೀನಿ, ಒಪ್ಕೋತೀನಿ. ನನ್ನ ಆಸೆಗಳೆಲ್ಲಾ ನೆಗೆದು ಬಿತ್ತು. ಒಪ್ಕೋತೀನಿ. ಆದರೆ ನಾನು ಖಂಡಿತವಾಗಿ, ನಿಜವಾಗಿ ಸೋತೇ ಇಲ್ಲ....**

ಮೈದಾನದ ಸ್ಟೇಜ್ ಮೇಲೆ ....ಅಪ್ಪನವರು ನಿಂತಿದ್ರು. ಪಕ್ಕ ಅವರ ಇಬ್ಬರು ಗಂಡು ಮಕ್ಕಳು; ಹಿಂದೆ ಅವರ ಮೂವರು ಅಳಿಯಂದಿರು – ಪಂಚ ಪಾಂಡವರ ಹಾಗೆ ಈ ಐದು ಜನರೂ ಪಾರ್ಟಿ ವರ್ಕರ್ಸ್ ಅಂತ ದುಡೀತಿದ್ರು. ಈಗ ಎಲ್ಲರ ಮುಖಗಳಲ್ಲೂ ಎಣ್ಣೆ ಇಳಿಯುತ್ತಿತ್ತು. ನನ್ನ ನೋಡಿ, ...ಅಪ್ಪನವರು ಖುದ್ದಾಗಿ, ಬನ್ನಿ, ಬನ್ನಿ, ಕೂಡಿ ಅಂತ ಉಪಚಾರ ಬೇರೆ ಮಾಡಿದ್ರು. ನಾನು ಹಿಂದೆ ತಿರುಗಿ ನೋಡಿದೆ. ನಾನೂ ಸೇರಿ ಅಲ್ಲಿ ಆರುವರೆ ಜನಗಳಿದ್ವಿ. ಅಂದರೆ, ಆರು ಜನ ದೊಡ್ಡವರು ಮತ್ತು ಜಾರೋಬಂಡೆ ಆಡೋಕ್ಕೆ ಬಂದಿದ್ದ ಒಂದು ಮಗು ಅಷ್ಟೆ. ಇಂತಹ ಜನಸ್ತೋಮವನ್ನ ಉದ್ದೇಶಿಸಿ, ...ಅಪ್ಪನವರು ತಮ್ಮ ಭಾಷಣಕ್ಕೆ ಇಳಿದರು.

''ಮಹನೀಯರೇ ಮತ್ತು ಮಹಿಳೆಯರೇ...'' ಅಂತ ಶುರು ಮಾಡಿದಾಗ ಇಲ್ಯಾವ ಹೆಂಗಸಿದ್ದಾಳೆ? ಅಂತ ಮೈದಾನದ ಕಡೆ ನೋಡಿದೆ. ಅಲ್ಲೊಂದು ಹಸು ನಿಂತಿತ್ತು. ಓಹೋ! ಗೋ ಮಾತೆ! ಸರಿ, ಅಂದ್ಕೊಂಡೆ.

''ಇವತ್ತು ಬೆಳಿಗ್ಗೆ ವಿಧಾನ ಸಭಾ ಚುನಾವಣೆ ತೀರ್ಪು ನಿಮ್ಮ ಮುಂದಿದೆ. ನಾನು ಸೋತಿದ್ದೀನಿ. ಒಪ್ಕೋತೀನಿ. ನನ್ನ ಆಸೆಗಳೆಲ್ಲಾ ನೆಗೆದು ಬಿತ್ತು. ಒಪ್ಕೋತೀನಿ. ಆದರೆ ನಾನು ಖಂಡಿತವಾಗಿ, ನಿಜವಾಗಿ ಸೋತೇ ಇಲ್ಲ...''

ಈಗ ಹನುಮಂತಪ್ಪ ಜೋರಾಗೇ ''ಏಯ್, ಅಷ್ಟೊಂದು ಜನಗಳ ವೋಟ್ಗಳನ್ನು ಎಣಿಸೇ ಇಲ್ವ, ನೀವು ಸೋತ್ರೀ ಅಂತ ಏಳಿದ್ದು? ಅದ್ಯಾಕೆ ನೀವು ಸೋತಿಲ್ಲ ಅಂತ ಏಳ್ತೀರಾ?'' ಅಂತ ಕೇಳಿದ.

''ವೋಟ್ಗಳ ಸಂಖ್ಯೆಗಳಲ್ಲಿ ಸೋತಿದೀನಿ ಹನುಮಂತಪ್ಪ. ಆದರೆ, ನನ್ನ ಜೀವನದ ಧ್ಯೇಯದಲ್ಲಿ ನಾನು ಸೋತಿಲ್ಲ. ಅದು ನಾನು ಹೇಳೋಕ್ಕೆ ಹೋಗಿದ್ದು...''

''ಈ ಧ್ಯೇಯ ಅಂದ್ರೇನು ಸ್ವಾಮಿ?'' ಇದು ನಮ್ಮ ಪಿ.ಡಬ್ಲ್ಯೂ.ಡಿ. ಕಂಟ್ರಾಕ್ಟರು ತಿಮ್ಮಣ್ಣನವರ ಪ್ರಶ್ನೆ.

''ಏ, ಅದು ನಿಮ್ಮಂತಹ ಕಂಟ್ರಾಕ್ಟರುಗಳಿಗೆ ಅರ್ಥವಾಗಲ್ಲ ಬಿಡಿ. ನೋಡಿ, ನನ್ನ ಮನಸ್ಸಿನಲ್ಲಿ ಇದ್ದಿದ್ದು, ಈಗ ಇರೋದು, ನಿಸ್ವಾರ್ಥ ಜನ ಸೇವೆ. ಅದು ನನ್ನ ಜೀವನದ ಧ್ಯೇಯ. ನಾನು ಎಂ.ಎಲ್.ಎ. ಆಗಲಿ ಬಿಡಲಿ, ನೀವೆಲ್ಲಾ ನನಗೆ ವೋಟ್ ಹಾಕಲಿ, ನಾನು ಎಂದೂ ಜಯಶಾಲೀನೇ!''

ಈಗ ಜಾರೋಬಂಡೆ ಮೊಮ್ಮಗುವಿನ ತಾತಾ ಅಂತ ಕಾಣುತ್ತೆ – ಹೆಸರು ಗೊತ್ತಿಲ್ಲ – ಎದ್ದು ನಿಂತ್ರು. ''ಅಲ್ರೀ, ...ಅಪ್ಪನವರೇ, ಮೂರೋ ನಾಲ್ಕೋ ಕೋಟಿ ರೂಪಾಯಿಗಳನ್ನ ಖರ್ಚು ಮಾಡಿ ನಮಗೆಲ್ಲಾ ಒಬ್ಬೊಬ್ಬರ್ರಿಗೆ ಒಂದೊಂದು ಪಂಚೆ ಕೊಟ್ಟಿದ್ದೀರಾ. ಹೆಂಗಸರಿಗೆಲ್ಲಾ ಬ್ಲೌಸ್ ಪೀಸ್, ಕಾಟನ್ ಸೀರೆ ತೆಕ್ಕೊಟ್ಟಿದ್ದೀರಾ. ನಿಮ್ಮ ಪಾರ್ಟಿ ವರ್ಕರ್ಸ್‌ಗ್ಗೆಲ್ಲ ದಿನ ನಿತ್ಯ ಚಿಕನ್ ಬಿರ್ಯಾನಿ. ಬೀರು ಕೊಡಿಸಿದೀರಾ. ನಿಮ್ಮ ಫೋಟೋನಾ, ಜೊತೆಗೆ ನಿಮ್ಮ ಪಕ್ಕದ ಚಿಹ್ನೆ – ಚೌರದ ಕತ್ತಿ – ಫೋಟೋನಾ ಕಂಡಕಂಡವರ ಗೋಡೆಗಳ ಮೇಲೆ ಪ್ರಿಂಟ್ ಮಾಡಿ ಅಂಟಿಸಿದ್ದೀರಾ. ಇದೆಲ್ಲಾ ಈಗ ನೀರಿನಲ್ಲಿ ಹೋಮ ಆಗಿದೆ. ಹಾಗೂನೂ, ನೀವು ನಿಮ್ಮನ್ನ ಇನ್ನೂ ಜಯಶಾಲಿ ಅಂತ ಹೇಳ್ಕೊತಿದೀರಲ್ಲಾ?'' ಅಂತ ಸವಾಲ್ ಹಾಕಿದ್ರು.

''ನೀವು ಅಲ್ಲೇ ತಪ್ಪಾಗಿ ತಿಳಿದುಕೊಂಡಿರೋದು ಒಪ್ಪಿದೆ. ಹಣ ಕಳೆದು ಕೊಂಡಿದೀನಿ. ಆದರೆ ಹಣ ಎಂದರೆ ಏನು? ಬರುತ್ತೆ, ಹೋಗುತ್ತೆ! ನಾನು ಸ್ವತಂತ್ರ ಕ್ಯಾಂಡಿಡೇಟ್ ಆಗಿದ್ದೆ ಅಲ್ಲವೆ? ಆಗ ಪ್ರತಿ ಪಕ್ಷದವರು, ನಿಮ್ಮ ಹೆಸರು ವಾಪಸ್ ತೊಗೊಳ್ಳಿ. ಇಲ್ಲದಿದ್ರೆ ವೋಟುಗಳು ಚದರಿ ಹೋಗಿ ನಾವೂ ಗೆಲ್ಲಲ್ಲಿ, ನೀವೂ ಗೆಲ್ಲಲ್ಲ ನೋಡಿ. ಹಾಗೆ ಮಾಡಿದ್ರೆ, ನಿಮಗೆ ಐದು ಕೋಟಿ ರೂಪಾಯಿ ಕೊಡ್ತೀವಿ ಅಂದ್ರು. ಆದರೆ, ನಾನು ನಿಮ್ಮ ದುಡ್ಡಿಗೆ ನನ್ನ ಧ್ಯೇಯಗಳನ್ನ ಬಿಡ್ಲಾರೆ ಅಂತ ಖಡಾ ಖಂಡಿತವಾಗಿ ಹೇಳ್ಬಿಟ್ಟೆ. ನಾನೇನಾದ್ರೂ ಎಸ್! ಅಂದಿದ್ರೆ ಆಗ, ಇಷ್ಟು ಹೊತ್ತಿಗೆ ಇಲ್ಲಿ ನಿಂತಿರೋ ಈ ಪಂಚ ಪಾಂಡವರೆಲ್ಲರೂ ತಲಾ 500 ಎಕರೆ ಭೂಮಿಗಳ ಒಡೆಯರುಗಳಾಗುತ್ತಿದ್ದರು.''

''ಸರಿ, ....ಅಪ್ಪನವರೆ, ನಮ್ಮಂತಹವರಿಗೆ ಏನು ಮಾಡ್ತಿದ್ರೀ...?'' ಇದು ಹಾಲಿನ ಹನುಮಂತಪ್ಪನ ಪ್ರಶ್ನೆ. ''ಎಮ್ಮೆಗಳಿಗೆ, ಹಸುಗಳಿಗೆ ಸ್ಪೆಷಲ್ ಇಂಜಕ್ಷನ್ ಕೊಡಿಸಿ, ಹಾಲು ಉತ್ಪನ್ನ ಡಬಲ್ ಮಾಡಿಸಿ, ನಿಮ್ಮನ್ನೆಲ್ಲ ಶ್ರೀಮಂತರನ್ನಾಗಿ ಮಾಡ್ತಿದ್ದೆ. ನನ್ನ ಎರಡನೆ ಅಳಿಯ ಇಂಜಕ್ಷನ್ ಫ್ಯಾಕ್ಟ್ರಿ ತೆಗೆಯೋಕ್ಕೆ ಎಲ್ಲಾ ರೆಡಿ ಮಾಡ್ಕೊಂಡಿದ್ದ.''

ನೀವೇನಾದ್ರೂ ಗೆದ್ದಿದ್ರೆ, ನಮ್ಮಂತಹ ಕಂಟ್ರಾಕ್ಟರುಗಳ ಗತಿ ಏನಾಗುತ್ತಿತ್ತೋ...?'' ಅಂತ ತಿಮ್ಮಣ್ಣ ಕೇಳಿದ.

''ಎಷ್ಟು ಬಕ್ರ ನೀನು ತಿಮ್ಮಣ್ಣ!'' ಹೊಸ ಸರ್ಕಾರ ಅರ್ಕಾವತಿ ನದಿಗೆ ಜೀವ ಕೊಡುತ್ತೆ. ಆಗ ನಮ್ಮ ಬಡಾವಣೆಗೆ ಪ್ರವಾಹ ಆಗುತ್ತೆ. ಅದಕ್ಕೆ ಈ ಸ್ಕೂಲ್ ಮೈದಾನದ ಆ ಕಡೆಗೆ ಒಂದು

ಕಿಲೋಮೀಟರ್ ಉದ್ದದ ಎತ್ತರದ ಕಲ್ಲಿನ ಗೋಡೆ ಕಟ್ಟಿಸಿ, ನಿಮ್ಮನ್ನೆಲ್ಲ ರಕ್ಷಿಸೋ ಪ್ಲಾನ್ ಹಾಕಿದ್ದೆ. ಹತ್ತು ಕೋಟಿ ಪ್ರಾಜೆಕ್ಟು.. ನೀನೇ ಕಂಟ್ರಾಕ್ಟರ್ ಆಗ್ತಿದ್ದೆ!''

''ಅರ್ಕಾವತಿ ಅಂದಾಗ ಜ್ಞಾಪಕ ಬಂತು. ತಮ್ಮ ಬಡಾವಣೇಲಿ ನೀರೇ ಬರಲ್ಲವಲ್ಲ, ಅದಕ್ಕೇನು ಮಾಡ್ತಿದ್ದೀ?'' ಇದು ನನ್ನ ಪ್ರಶ್ನೆ.

''ರೀ, ಅಯ್ಯನವರೇ, ಎಲ್ಲರೂ ನೀರು ಕುಡ್ಕೊಂಡೇ ಬದುಕಿಲ್ಲರೀ.... ಇನ್ನೂ ಬೇರೆ ಏನೇನೋ ಇವೆ. ನನ್ನ ಎರಡನೇ ಅಳಿಯ ಈ ಮೈದಾನದ ಪಕ್ಕ, ಮಿನರಲ್ ವಾಟರ್ ಏಜೆನ್ಸಿ ತೆಗೆಯೋದ್ರಲ್ಲಿದ್ದ. ಜೊತೆಗೆ ನನ್ನ ಮಗ ನೀರಿಲ್ಲದಿದ್ದರೆ, ಬೀರಾದರೂ ಇರಲಿ ಅಂತ ಒಂದು ವೈನ್ ಶಾಪ್ ತೆಗೆಯೋದ್ರದಲ್ಲಿದ್ದ... ನನ್ನ ಮೊದಲನೇ ಮಗ ಆಗಲೆ ಎರಡು ವಾಟರ್ ಟ್ಯಾಂಕರ್‌ಗಳಿಗೆ ಆರ್ಡರ್ ಮಾಡಿದ್ದ. ನಾನು ಗೆದ್ದಿದ್ರೆ ಇದೊಂದು ರಾಮ ರಾಜ್ಯವಾಗ್ತಿತ್ತು.''

ಜಾರೋಬಂಡೆ ಮಗುವಿನ ತಾತ ''ಮಕ್ಕಳಿಗೆ ಆಡೋಕ್ಕೆ ಜಾಗವೇ ಇಲ್ಲವಲ್ರೀ... ಇಲ್ಲೊಂದು ಪಾರ್ಕ್ ಕಟ್ಟಿಸ್ತೀನಿ ಅಂತ ಹೇಳ್ತಿದ್ರಲ್ರೀ?'' ಅಂತ ಕೇಳಿದ್ರು.

''ತಾತ! ನೀವು ಯಾವ ಕಾಲದಲ್ಲಿದ್ದೀರಿ?... ಆ ಸೈಟ್‌ನಲ್ಲಿ ನನ್ನ ಮಗ ಅಪಾರ್ಟ್‌ಮೆಂಟ್ ಕಟ್ಟಿ ನಿಮ್ಮಂತಹವರಿಗೆ, ಆಶ್ರಮ ಕಟ್ಟಿಸಬೇಕು ಅಂತಿದ್ದ. ಮಕ್ಕಳಿಗೆ ಯಾಕೆ ಆಟದ ಮೈದಾನ? ಕಂಪ್ಯೂಟರ್ ಕೊಟ್ಟು ಮನೇಲೇ ಕೂರಿಸಿದರಾಯ್ತು.''

ನನ್ನ ಎದುರಿಗೇ ಕೂತಿದ್ದ ಶ್ರೀಪಾದ ರಾಯರು ''ಗೆದ್ದರೆ, ಇಲ್ಲೆ ಒಂದು ಬ್ಯಾಂಕ್ ಶಾಖೆ ತೆಗಿಸ್ತೀನಿ ಅಂತ ಹೇಳಿದ್ರಿ...'' ಅಂತ ಶುರುಮಾಡಿದ್ರು. ಅವರಿಗೆ ಯಾವಾಗಲೂ ಎಸ್ಬಿ ಅಕೌಂಟು, ಇಂಟರೆಸ್ಟು ಇದರದೇ ಯೋಚನೆ.

''ರಾಯರೆ, ಯೋಚನೆ ಮಾಡ್ಬೇಡಿ... ನನ್ನ ಅಳಿಯ ಈಗ ಒಂದು ಸ್ವಿಸ್ ಬ್ಯಾಂಕ್‌ಗೆ ಸೆಲ್ಲಿಂಗ್ ಏಜೆಂಟ್ ಆಗಿದಾನೆ. ನಿಮಗೆ ಅಲ್ಲೇ ಒಂದು ಅಕೌಂಟ್ ತೆಗೆಸಿಕೊಡ್ತಾನೆ.''

ಈ ಸಮಯಕ್ಕೆ ಮೈದಾನದಲ್ಲಿ ಏನೋ ಗಡಿಬಿಡಿ ಆದಾಗೆ ಆಯಿತು. ನೋಡಿದ್ರೆ, ....ಅಪ್ಪನವರ ಹೆಂಡತಿ, ಬಂಗಾರಮ್ಮನವರು ವೇದಿಕೆ ಕಡೆ ಬರ್ತಾ ಇದ್ರು. ಸಿಲ್ಕ್ ಸೀರೆ ಉಟ್ಟಿ, ಮೈ ಮೇಲೆ ಬಂಗಾರ, ಚಿನ್ನ ಬೆಳ್ಳಿ ಒಡವೆಗಳನ್ನೆಲ್ಲಾ ಹೇರಿಕೊಂಡು ಬರ್ತಿದ್ದ ಆಕೇನಾ ಕಂಡೊಡನೇ, .....ಅಪ್ಪನವರು ''ಏನು ಬಂಗಾರೂ... ಇಲ್ಲಿಗೇ ಬಂದ್ಬುಟ್ಟೆ?'' ಅಂತ ಕೇಳಿದ್ರು.

''ಮನೇಲೀ ಮೊಬೈಲ್ ಬಿಟ್ಟು ಬಂದಿದ್ದೀ.... ಗೆದ್ದ ಪಾರ್ಟಿ ಅವರಿಂದ ಕಾಲ್ ಬಂದಿತ್ತು. ಅಸೆಂಬ್ಲಿಯಲ್ಲಿ ಮೆಜಾರಿಟಿ ಇಲ್ಲವಂತೆ... ನಮ್ಮ ಕ್ಷೇತ್ರದಲ್ಲಿ ವೋಟುಗಳನ್ನ ಎಣಿಸೋವಾಗ ಗೋಲ್ ಮಾಲ್ ಆಗಿದೆ. ಅಂತ ರಿ ಕೌಂಟಿಂಗ್ ಇಟ್ಕೊಂಡಿದಾರಂತೆ. ಅಕಸ್ಮಾತ್ ನಿಮ್ಮ ಯಜಮಾನ್ರು ರಿ ಕೌಂಟಿಂಗ್‌ನಲ್ಲಿ ಗೆದ್ರೆ, ನಮ್ಮ ಪಕ್ಷದ ಕಡೆ ವಾಲಿಕೊಳ್ಳೋಕ್ಕೆ ಹೇಳಿ, ಆಗ ಮಿನಿಸ್ಟ್ರಿ ನಮ್ಮದೇ ಆಗುತ್ತೆ... ಇಪ್ಪತ್ತು ಕೋಟಿ ರೂಪಾಯಿಗಳು ನಿಮ್ಮದೇ ಆಗುತ್ತೆ. ಇದೇ ಕೊನೇ ಆಫರ್ ಅಂತ ಹೇಳಿದ್ರು. ಅದನ್ನ ಹೇಳೋಕ್ಕೆ ಓಡೋಡಿ ಬಂದೆ'' ಅಂತ ಏದುಸಿರು ಬಿಟ್ರು.

ತಕ್ಷಣ... ಅಪ್ಪನವರು, ''ಮಹನೀಯರೆ ಮತ್ತು ಮಹಿಳೆಯರೇ, ಆಗಲೇ ಹೇಳಿದ ಹಾಗೆ ನಾನು ವೋಟಿನ ಸಂಖ್ಯೆಗಳಿಂದ ಅಪಜಯ ಗಳಿಸಿದ್ದರೂ, ನನ್ನ ಧ್ಯೇಯದ ಗುರಿಯಿಂದ ನಾನು ಜಯಶೀಲನಾಗಿದ್ದೀನಿ. ನನ್ನಿಂದ ನಿಮಗೆ ಯಾವ ರೀತಿಯ ಸೇವೆಗಳಾದರೂ ಕೇಳಿ ಪಡೆಯಿರಿ. ನಾನು ಸದಾ ನಿಮ್ಮ ಸೇವಕ... ಬರಲೇ?'' ಅಂತ ವೇದಿಕೆಯಿಂದ ಇಳಿದರು.

ಪಂಚ ಪಾಂಡವರು ''ಜನ ಸೇವಕ... ಅಪ್ಪನವರಿಗೇ...'' ಅಂತ ಕೂಗಿದ್ರು.

ಬಂಗಾರಮ್ಮನವರು – ಅದೆಂತಹ ಗಂಟಲೂ ಅಂತೀರಿ? – ''ಜಯವಾಗಲೀ!!!'' ಅಂತ ಅರಚಿದರು. ಈಗ ನಮ್ಮ ಸರತಿ ತಾನೇ? ನಮ್ಮ ಮುಖಗಳಲ್ಲಿ ಎಣ್ಣೆ ಇಳಿಸಿಕೊಂಡು, ನಾವು ಮನೆ ಕಡೆ ನಡೆದ್ವಿ.

❑

---

ರಾಜಕೀಯ ಅಂದರೆ ಬಟ್ಟೆ ಮಾತ್ರ ಬಿಳಿಯಂತೆ
ಮಿಂಚೊಂದು ಸದಾ ಆಗಸದಲ್ಲಿ ಹೊಳೆವಂತೆ
ಬಾಯಿಬಿಟ್ಟರೆ ಮಾತ್ರ ಹೊಲಸಿನ ಕಂತೆ ಕಂತೆ
ಇದೇ ರಾಜಕೀಯದ ನಿರಂತರ ಮಂತ್ರವಂತೆ

* * *

ಇಲ್ಲಿನ ಸಮಸ್ಯೆಗೆ ದಿಲ್ಲಿಗೆ ಹೋಗುತ್ತಾರೆ ಯಾತ್ರೆ
ಕುಡಿದು ತಿಂದು ಕುಪ್ಪಳಿಸಿ ಆನಂದಿಸಿ ಬರುತ್ತಾರೆ
ನಮ್ಮ ರೈತನಿಗೆ ಕುಡಿಯುವ ನೀರಿಗೆ ಬರ ಇದ್ದರೂ
ಬೇಕು ಇವರಿಗೆ ಬಾಟಲಿ ನೀರು ದರ ಹೆಚ್ಚಿದ್ದರೂ

* * *

ಎಲ್ಲಕ್ಕೂ ರಾಜಕೀಯ ಬೆರೆಸಿ ಮಾತಾಡುತ್ತಾರೆ
ಎಲ್ಲ ಅಡಿಗೆಗೂ ಉಪ್ಪು ಬೆರೆಸಿ ರುಚಿ ಹೆಚ್ಚಿಸುವಂತೆ
ಬೇಯುತ್ತಲೇ ಇರಬೇಕು ರಾಜಕೀಯದ ಬೇಳೆ
ಇಲ್ಲದಿದ್ದರೆ ಅಧಿಕಾರ ಹೋಗಿಬಿಟ್ಟರೆ ಒಂದು ವೇಳೆ

* * *

ಮಠಾಧಿಪತಿಗಳಿಗೂ ರಾಜಕಾರಿಣಿಗಳಿಗೂ ನಂಟು
ಅವರನ್ನು ಬಿಟ್ಟು ಇವರಿಲ್ಲ ಇವರನ್ನು ಬಿಟ್ಟು ಅವರಿಲ್ಲ
ಮಠಕ್ಕೇಕೆ ರಾಜಕೀಯ ಎಂದು ಅರ್ಥವಾಗುವುದಿಲ್ಲ
'ಅರ್ಥ'ವಿಲ್ಲದೇ ಮಠವಿಲ್ಲ ಎಂದರೆ ಗೊತ್ತಾಗುತ್ತಲ್ಲ

*– ಸುಕೇಶವ*

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಆ

- ರಾಜಕೀಯಕ್ಕೆ ಬಂದು ನಾನು ನಟನೆ ಕಲಿತುಕೊಂಡೆ ಎಂದು ತಾರಾ, ರಮ್ಯ, ಪೂಜಾ ಗಾಂಧಿ, ಭಾವನಾ ಮುಂತಾದವರು ಇನ್ನೂ ಹೇಳಿಲ್ಲ.
- ಇನ್ನೊಬ್ಬರಲ್ಲಿ ಇಲ್ಲದಿದ್ದುದನ್ನು ಬಯಸುವವರ ಕಂಡಿದ್ದೀರಾ?
- ಒಬಾಮ ಈಗ ಯೋಗ ಪರ ಇರುವುದರಿಂದ ಅವರನ್ನು 'ಓಂ'ಬಾಮ ಎಂದು ಕರೆಯುವವರು ಇದ್ದಾರೆ.
- ತೀರ್ಥವೂ ನೀರು.... ಕೆಲವರಿಗೆ.
- ಹಲ್ಲು ಕಿತ್ತುವ ವೈದ್ಯರನ್ನು ಡಾ. ಕಿತ್ತೂರಾಯ ಎಂದರೆ ಹೇಗೆ?
- *Do you never begin because you fear the end?*
- ಕಣ್ಣಿನಲ್ಲಿ ನೋಡದೆ ನ್ಯಾಯದೇವತೆ ಹೇಗೆ ತೂಕ ಮಾಡುತ್ತಾಳೆ?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಮನೆ ಪಕ್ಕದಲ್ಲೇ ದೇವಸ್ಥಾನ ಇದೆ ಎಂದ ಮಾತ್ರಕ್ಕೆ ದೇವರು ಸಮೀಪದಲ್ಲಿದ್ದಾನೆ ಎಂದು ಭಾವಿಸಬೇಕಿಲ್ಲ.
- ಮನುಷ್ಯನಿಗೆ ಜೀವನದಲ್ಲಿ ಆನೆ ಇರಬೇಕು – 'ಆ' ಅಂದರೆ ಆರೋಗ್ಯ, 'ನೆ' ಎಂದರೆ ನೆಮ್ಮದಿ.
- *Be the tailor's needle which passes through every cloth without making distinction.*
- ವಜ್ರಕ್ಕೇನು ಗೊತ್ತು ಅದನ್ನು ಧರಿಸಿದವರ ವಯಸ್ಸು?
- ಹೆಚ್ಚು ಮಾತನಾಡದ ವ್ಯಕ್ತಿಯ ಬಗ್ಗೆ ಹೆಚ್ಚು ಹೇಳಲು ಸಾಧ್ಯ.
- ನಮಗೆ ಅನೇಕ ವಿಷಯಗಳು ತಿಳಿದಿವೆ. ಆದರೆ ನಮ್ಮ ಬಗ್ಗೆ ಮಾತ್ರ ತಿಳಿದಿಲ್ಲ.
- *The difference between truth and fiction is that truth has to be believed.*
- ಕೆಟ್ಟದೆಂಬುದು ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಕೆಲವರಲ್ಲಿ ಒಳ್ಳೇತನ ಇರುವುದಿಲ್ಲ ಅಷ್ಟೆ
- ನೀವು ಈಗ ಮಾಡುತ್ತಿರುವುದನ್ನೇ ಮಾಡುತ್ತಿದ್ದರೆ ನಿಮಗೆ ಈಗ ಸಿಗುತ್ತಿರುವುದಷ್ಟೇ ಸಿಗುತ್ತದೆ.
- ಅವನ/ಳ ಬಾಡಿಯೇ ಬಾಕ್ಸ್ ಆಫೀಸ್.

❑

# ಬೇಸಿಗೆ ಬಗ್ಗೆ ಒಂದು ತಂಪು ನೆನಪು

- ಗೋಪಾಲಿ

ಮಕ್ಕಳಿಗೆ, ಆರೇಳು ತಿಂಗಳುಗಳಲ್ಲಿ ತಾಯಿ ಆಗುವವರಿಗೆ, ಸಂಗೀತ ಪ್ರಿಯರಿಗೆ ಟ್ರಾವೆಲ್ ಏಜಂಟರುಗಳಿಗೆ ಅತ್ಯಂತ ಪ್ರಿಯವಾಗುವ ಸೀಸನ್ ಯಾವುದು? ಹಾಗೇ ಸೀನಿಯರ್ ಸಿಟಿಜನ್ನುಗಳಿಗೆ, ತಿಂಗಳ ಸಂಬಳ ಪಡೆಯುವವರಿಗೆ, ರಸ್ತೆ ಬದಿಯ ವ್ಯಾಪಾರಿಗಳಿಗೆ, ಕಟ್ಟಡದ ಕೆಲಸಗಾರರಿಗೆ ಇಷ್ಟವೇ ಆಗದ ಸೀಸನ್ ಯಾವುದು? ಎರಡೂ ಪ್ರಶ್ನೆಗಳಿಗೆ ಒಂದೇ ಉತ್ತರ ಅಂದರೆ ಬೇಸಿಗೆ ಅಥವಾ ಸಮ್ಮರ್...!

**ಹೊಂಗೆಮರದ ಬುಡದಲ್ಲಿ ಹಾಸಿಗೆ ಹಾಸಿದ ಹಾಗೆ ಬಿದ್ದಿದ್ದ ಹೊಂಗೆ ಹೂಗಳ ಮೇಲೆ ಅಂಗಾತವಾಗಿ ಮಲಗಿ ಕಣ್ಣು ಮುಚ್ಚಿದೆ, ಐವತ್ತು ವರ್ಷ ಹಿಂದೆ ಹೋದೆ.**

ಬೇಸಿಗೆ ರಜಾ ಬರುವುದೇ ಸಂದಿಗ್ಧ ಕಾಲದಲ್ಲಿ. ಆಗ ತಾನೇ ಪರೀಕ್ಷೆ ಎಂಬುವ ಪೆಡಂಭೂತವನ್ನು ಎದುರಿಸಿರುವ ಮಕ್ಕಳು ಸಮಯ ಕಳೆಯಲು ಆಯ್ದುಕೊಳ್ಳುವ ಹಲವಾರು ವೈವಿಧ್ಯಮಯ ಆಟ, ಪಾಟ, ಸಮ್ಮರ್ ಕೋರ್ಸು ಇತ್ಯಾದಿಗಳಲ್ಲಿ ಮೈಮರೆಯುತ್ತವೆ. ಅಪ್ಪ ಅಮ್ಮ ಇವುಗಳನ್ನು ಎಲ್ಲಿ ತೊಡಗಿಸಬೇಕು ಎಂದು ತಲೆಕೆಡಿಸಿಕೊಂಡು ಒದ್ದಾಡುತ್ತವೆ. ಮಧ್ಯಮ ವರ್ಗದ ಜನರು ಕಡಿಮೆ ಖರ್ಚಿನ ದಾರಿಗಳನ್ನು ಹುಡುಕುವ ಹುನ್ನಾರಕ್ಕೆ ಮೊರೆ ಹೋಗುತ್ತಾರೆ. ಮಕ್ಕಳ ಕೊನೆ ವರ್ಷದ ಕಾಲೇಜು ವ್ಯಾಸಂಗ ಮುಗಿಯಲಿ ಎಂದು ಕಾದಿದ್ದ ಅಪ್ಪ ಅಮ್ಮಂದಿರು ದೂರದ ಊರುಗಳಿಗೆ ಮಕ್ಕಳನ್ನು ಅದರಲ್ಲೂ ಹೆಣ್ಣು ಕೂಸುಗಳನ್ನು ಕರೆದೊಯ್ದು ತೋರಿಸಲು ಕಾತುರರಾಗಿರುತ್ತಾರೆ. ಸಮುದ್ರ ನೋಡಿಲ್ಲ ಎಂದು, ಬೆಟ್ಟ ಕಂಡಿಲ್ಲ ಎಂದು, ಪರ್ವತ ಅಂದರೇನು ಎಂದು ಕೇಳುವ, ಹಳ್ಳಿ ಹೇಗಿರುತ್ತೆ ಎಂದು ಆಶ್ಚರ್ಯ ಪಡುವ ಮಕ್ಕಳಿಗೆ ಅವುಗಳನ್ನು ತೋರಿಸುವ ಜವಾಬ್ದಾರಿ ಮನೆಯಲ್ಲಿನ ಮಧ್ಯಮ ವಯಸ್ಸಿನ ಅಪ್ಪ ಅಮ್ಮಂದಿರದ್ದಾಗುತ್ತದೆ.

ಊರ ಜನ ಪ್ರವಾಸ ಹೊರಟರೆ ಯಾರಿಗೆ ಖುಷಿ? ಸಹಜವಾಗಿಯೇ ಟ್ರಾವೆಲ್ ಏಜೆಂಟುಗಳು ತಮ್ಮ ಆದಾಯ ತೂಗಿಸಲು ಕ್ರಿಯಾಶೀಲರಾಗುತ್ತಾರೆ.

ತಿಂಗಳ ಸಂಬಳದಲ್ಲಿ ಜೀವನ ನೂಕುತ್ತಿರುವ ಹಲವಾರು ಕುಟುಂಬಗಳಿಗೆ ಸಮ್ಮರ್ರೂ ಒಂದೇ ವಿಂಟರ್ರೂ ಒಂದೇ ಆಗಿರುತ್ತದೆ. ಮಕ್ಕಳಿಗೆ ಬೇಸಿಗೆ ರಜಾ ಬಂದಾಗ ಇವರ ಪಾಡು ಯಾರಿಗೂ ಬೇಡ ಅನಿಸುತ್ತದೆ. ಹೊರಗಡೆಗೆ ಕರೆದೊಯ್ಯಲು ಜೇಬಿನಲ್ಲಿ ತ್ರಾಣವಿಲ್ಲ. ನೆರೆಹೊರೆ, ಸ್ನೇಹಿತರು ಹೊರಗೆ ಹೋಗುತ್ತಾರೆ, ಮಕ್ಕಳು ಅದನ್ನೇ ಕೇಳಿದಾಗ ತಮ್ಮ ಬರಿದಾದ ಜೇಬಿನ ಕಾರಣ ಹೇಳಲು ಒಂದು ರೀತಿಯ ಹಿಂಜರಿತ... ಹೀಗಾಗಿ ಇವರು ಸಮ್ಮರ್ ಯಾಕಾದರೂ ಬರುತ್ತೋ ಎಂದು ಕಳವಳಿಸುತ್ತಾರೆ.

ಬೇಸಿಗೆಯ ಒಂದು ವಿಚಿತ್ರ ಗಮನಿಸಿದ್ದೀರಾ? ಅಕ್ಟೋಬರ್ ವೇಳೆಗೆ ಕೊನೆಯ ಮಳೆ ಬಿದ್ದು ನಂತರ ಒಂದೆರೆಡು ಸಲ ಚದುರಿದ ಹಾಗೆ ಮಳೆ ಬಂದಿರುತ್ತೆ. ಸುಮಾರು ಆರೇಳು ತಿಂಗಳ ಕಾಲ

ಮಳೆಯ ಸುಳಿವೇ ಇರುವುದಿಲ್ಲ. ಬಿಸಿಲು ಜಾಸ್ತಿಯಾಯಿತು ಅಂತ ಇಡೀ ಪ್ರಪಂಚ ಕೂಗಿಕೊಳ್ಳಲು ಆರಂಭಿಸುತ್ತೆ. ಕುಡಿಯಲೇ ನೀರಿಲ್ಲ ಅಂತ ನಾವು ಬೆಂಗಳೂರಿಗರು ಬಾಯಿ ಬಾಯಿ ಬಿಡುತ್ತಿರುತ್ತೇವೆ.

ಆದರೆ ಇದಕ್ಕೆಲ್ಲಾ ಕೇಮೇ ಮಾಡದೇ ಮನೆ ಮುಂದಿನ ಮಾವಿನ ಮರ ಚಿಗುರೊಡೆದು ಹೂವು ಬಿಡುತ್ತದೆ, ಪುಟ್ಟಪುಟ್ಟ ಹೀಚು ಗಾಯಿ ಕಾಣುತ್ತದೆ, ಬೇಸಿಗೆಯ ಆರಂಭದಲ್ಲಿಯೇ ಮುಷ್ಟಿ ಗಾತ್ರದ ಕಾಯಿ ಇಡೀ ಮರದಿಂದ ನೇತು ಹಾಕಿರುವ ದೀಪಗಳ ಹಾಗೆ ಕಾಣಿಸಲು ತವಕಗೊಳ್ಳುತ್ತದೆ. ಉಗಾದಿಯ ಮಾವಿನ ಕಾಯಿ ಚಿತ್ರಾನ್ನಕ್ಕೆ ನಿಮ್ಮಾಕೆ ರೆಡಿಯಾಗುತ್ತಾಳೆ. ಇಡೀ ಏರಿಯಾದ ಪಡ್ಡೆ ಹುಡುಗರು ನಿಮ್ಮ ರಸ್ತೆಯ ಮಾವಿನ ಮರದ ಕಾಯಿಯ ಮೇಲೆ ತಮ್ಮ ಯಜಮಾನ್ಯತೆಯನ್ನು ಸ್ಥಾಪಿಸಲು ಮುಂದಾಗುತ್ತಾರೆ. ಅವರುಗಳ ಕಣ್ಣಿನ ಕೈಗಳ ನೋಟದಿಂದ ಮಾವಿನಕಾಯಿ ರಕ್ಷಿಸಲು ತಾವು ಪಡುವ ಪಾಡು ನೆನೆದರೇ ಅಯ್ಯೋ ಅನಿಸಬೇಕು! ಜತೆಗೆ ಆಗಾಗ ನೀವು ನೋಡೇ ಇರದ ಯಾವಯಾವುದೋ ಏರಿಯಾದ ಬಸಿರಿ ಹುಡುಗಿಯರು ನಿಮ್ಮ ಬಾಗಿಲು ಬಡಿದು ಆಂಟೀ ಎರಡು ಕಾಯಿ ಕೊಡ್ತೀರಾ? ಐ ಅಯಾಮ್ ಕ್ಯಾರಿಯಿಂಗ್....! ಅಂತ ನಸು ನಾಚಿಕೆಯಿಂದ ಮೂತಿ ಕೆಂಪಿಸಿಕೊಂಡು ಕೇಳಿದಾಗ ನೀವು ನಿಮ್ಮ ಚೊಚ್ಚಲ ಬಸಿರಿನ ಕಾಲಕ್ಕೆ ನಿಮಗೇ ಅರಿವಿಲ್ಲದ ಹಾಗೆ ಜಾರಿರುತ್ತೀರಿ...!

ಎರಡು ಕಾಯಿ ಕೇಳಿದ ಹುಡುಗಿಗೆ ಹತ್ತು ಕಿತ್ತು ಕ್ಯಾರಿ ಬ್ಯಾಗಿನಲ್ಲಿ ಹಾಕಿ ಒಳ ಕರೆದು ತಂಪಾದ ಜ್ಯೂಸ್ ಕೊಟ್ಟು ಅವಳಿ ಮಕ್ಕಳನ್ನ ಹಡಿಯೇ ತಾಯೀ ಎಂದು ಹಾರೈಸಿದ ಹೆಂಗಸು ಬೆಂಗಳೂರಿನಲ್ಲಿ ಹುಡುಕಿದರೂ ನಿಮಗೆ ಸಿಗದು. ಬೇಸಿಗೆಯಲ್ಲಿಯೇ ನಿಮಗೆ ಮಾರುಕಟ್ಟೆಗಳಲ್ಲಿ ಹಣ್ಣುಗಳು ಹೇರಳವಾಗಿ ಸಿಗುತ್ತೆ, ಜೇಬಿನಲ್ಲಿ ಕಾಸಿದ್ದಷ್ಟೂ ನೀವು ವ್ಯಾಪಾರ ಮಾಡಬಹುದು.

ಸುಮಾರು ತಿಂಗಳುಗಳ ಕಾಲ ಚಳಿ, ಮಳೆಯಲ್ಲಿ ಕಳೆದು ಆಗತಾನೇ ಬಿಸಿಲಿನ ಚುಮುಚುಮು ಅನುಭವಿಸುತ್ತಿರುವ ಸೀನಿಯರ್ ಸಿಟಿಜನ್ನುಗಳು ಬೇಸಿಗೆ ಶುರುವಾಗುತ್ತಿದ್ದ ಹಾಗೆಯೇ ಚಡಪಡಿಕೆ ಅನುಭವಿಸುತ್ತಾರೆ. ಈ ಸಲದ ಬೇಸಿಗೆ ಹೋದವರ್ಷಕ್ಕಿಂತಲೂ ಜಾಸ್ತಿ ಅನ್ನುವುದರಿಂದ ಇವರ ಮಾತು ಶುರು. ಸೂರ್ಯ ನೆತ್ತಿ ಮೇಲೆ ಬರುವ ಮೊದಲೇ ಗೂಡು ಸೇರಬೇಕು, ಇಲ್ಲವಾದಲ್ಲಿ ಸನ್‌ಸ್ಟ್ರೋಕ್‌ಗೆ ಸಿಗುವ ಭಯ. ಜತೆಗೆ ಬೇಸಿಗೆಯ ಕಾರಣ ಮನೆಯಲ್ಲಿರುವ ಎಲ್ಲರೂ ಇವರ ಮೇಲೆ ತೋರುವ ಕಾಳಜಿ ಇವರಿಗೆ ಇರುಸು ಮುರುಸು ಉಂಟುಮಾಡುತ್ತೆ. ಓಡಾಟ ಕುಂಠಿತವಾಗುತ್ತೆ ಮತ್ತು ಇವರ ಅರಿವಿಗೆ ಬಾರದ ಹಾಗೆ ಇವರುಗಳು ಕೆಲವು ವರ್ಷಗಳು ಹೆಚ್ಚಿಗೆ ಬೆಳೆದು ಬಿಡುತ್ತಾರೆ! ಈ ಹೆದರಿಕೆಗೆ ಬೇಸಿಗೆ ಬಾರದಿರಲಿ ಎಂದು ಹಂಬಲಿಸುವವರು ಹೆಚ್ಚು.

ಆದರೂ ಇದೇ ಸಮಯದಲ್ಲಿಯೇ ಅಲ್ಲವೇ ಉಗಾದಿ, ರಾಮೋತ್ಸವ ಮೊದಲಾದ ಹಬ್ಬಗಳ ಸಾಲು ಸಾಲೇ ಬರುವುದು? ಉಗಾದಿಯ ಮಾವಿನ ಕಾಯಿ ಚಿತ್ರಾನ್ನ, ಹೋಳಿಗೆ ಬಿಟ್ಟವರುಂಟೇ? ರಾಮೋತ್ಸವದ ಸಂಗೀತ ಕಛೇರಿಗಳಿಗೆ ಹೋಗಿ ಅಲ್ಲಿ ಕೂತು ಸಂಗೀತಾಸ್ವಾದನೆ ಮಾಡದಿದ್ದರೆ ಹೇಗೆ? ನನಗೆ ತಿಳಿದಿರುವ ಹಿರಿಯರೊಬ್ಬರು ಪ್ರತೀ ರಾಮೋತ್ಸವದ ಸಂಗೀತ ಕಛೇರಿ ಕೇಳಿ ಬಂದನಂತರ ಹಲವಾರು ವರ್ಷ ಚಿಕ್ಕವರಾಗಿ ಬೆಳೆದುಬಿಡುತ್ತಾರೆ. ಗ್ರೋಯಿಂಗ್ ಯಂಗ್ ಎಂದು ಇಂಥಹವರನ್ನೇ ನೋಡಿ ಹೇಳಿರಬಹುದು ಎನ್ನುವ ಸಂಶಯ ನನಗೆ!

ಮನೆ ಪಕ್ಕದಲ್ಲಿ ನಾಲ್ಕಂತಸ್ತಿನ ಮನೆಗೆ ಪಾಯ ಅಗೆದು ಅದಕ್ಕೆ ಕಂಬಿ ಕಟ್ಟುತ್ತಿದ್ದಾರೆ. ಚರ್ಮ ಮೈಗಂಟಿಸಿಕೊಂಡ ದೇಹದ ಮೂಳೆಗಳನ್ನು ಹರವಿ ಬಿಟ್ಟ ಕಟ್ಟಡ ಕಾರ್ಮಿಕರು ಬಿಸಿಲಿನಲ್ಲಿ ಬೆವರು ಸುರಿಸುತ್ತಾ ಬಿಸಿಉಸಿರು ಬಿಡುತ್ತಾ ಗಂಟೆಗೆ ಆರು ಸಲ ಬಾಟಲಿಯಿಂದ ನೀರು ಕುಡಿಯುತ್ತಾ ಅವರ ಕಾಯಕದಲ್ಲಿ ತೊಡಗಿರುವುದನ್ನು ನೋಡಿದರೆ ಕರುಳು ಚುರುಕ್ ಅನ್ನುತ್ತೆ. ಮನೆಮುಂದೆ ತರಕಾರಿಯನ್ನು ಗಾಡಿಯಲ್ಲಿಟ್ಟುಕೊಂಡು ಮಾರಲು ಬರುವ ಪೊನ್ನುಚಾಮಿಯಂತೂ 'ಎನ್ನಾ ಚಾರೀ, ಇಂದ ವರ್ಸಂ ಇಂದ ಮಾದರಿ ಚುಡ್ರುದಿ...' ಅಂದಾಗ 'ಅಪ್ಪಾ ನಿಮ್ಮೂರಲ್ಲಿ ಬೆಂದೇ ಹೋಗ್ತಿದ್ದೆಯಲ್ಲೋ ನಮ್ಮೂರು ವಾಸಿ ಅಲ್ಲವೇ' ಅಂತ ಹೇಳಬೇಕು ಅನಿಸುತ್ತೆ. ಆದರೂ 'ಆಮ ಆಮ' ಎನ್ನುವಿರಿ, ಅವನ ಮಾತಿಗೆ ತಾಳ ಹಾಕುವಿರಿ..

ಹೊಂಗೆಮರದ ನೆರಳು ತುಂಬಾ ತಂಪಾಗಿರುತ್ತೆ ಅಂತ ಅನುಭವದಿಂದ ಬಲ್ಲೆ. ನನಗೆ ನಾಲ್ಕೋ ಐದೋ ವರ್ಷವಾಗಿದ್ದಾಗ ನಮ್ಮ ಹಳ್ಳಿಯ ಪಕ್ಕದಲ್ಲಿನ ರೈಲ್ವೆ ಹಳಿಗಳ ಪಕ್ಕದಲ್ಲಿದ್ದ ಹೊಂಗೆಮರದ ನೆರಳಿನಲ್ಲಿ ಮರಳು ಹಾಸಿನ ಮೇಲೆ ಮಲಗಿ ತಂಪಿನ ಸುಖ ಅನುಭವಿಸಿದ್ದು ಈಗಲೂ ನನಗೆ ಹಸಿರು ಹಸಿರು ನೆನಪು. ಅದೆಷ್ಟೋ ಶತಮಾನಗಳ ನಂತರ ಕಳೆದ ಬೇಸಿಗೆಯಲ್ಲಿ ಹೊಂಗೆಮರದ ನೆರಳಿನಲ್ಲಿ ಕೂಡಬೇಕು, ಕೊಂಚ ಹೊತ್ತು ಮಲಗಲೂ ಬೇಕು ಅನ್ನುವ ಆಸೆ ಹತ್ತಿಬಿಡಬೇಕೇ? ಮನೆಯವರ ಹತ್ತಿರ ಈ ಬಯಕೆ ಹೇಳಿಕೊಂಡರೆ ಇನ್ನೊಂದು ಸಾವಿರ ವರ್ಷ ನಾನು ಇವರುಗಳಿಗೆ ಹಾಸ್ಯದ ವಸ್ತು ಆಗಿಬಿಡುತ್ತೇನೆ ಅಂತ ಬಲವಾಗಿ ಅನಿಸಿಬಿಟ್ಟಿತು. ಮನೆಯಲ್ಲಿ ಯಾರಿಗೂ ಹೇಳದೇ ಒಂದು ಬೆಳಿಗ್ಗೆ ಆಚೆ ಹೊರಟೆ. ಕೆಂಪು ಬೋರ್ಡಿನ ಬಸ್ಸಿನಲ್ಲಿ ಕೂತೆ. ದಿನಪೂರ್ತಿ ಓಡಾಡುವ ಅವಕಾಶವಿರುವ ಐವತ್ತು ರೂಪಾಯಿನ ಬಸ್ ಪಾಸು ತೆಗೆದುಕೊಂಡೆ. ಅದೆಷ್ಟೋ ದೂರ ಹೋದ ನಂತರ ಇಳಿದು ಎರಡು–ಮೂರು ಕಿಲೋಮೀಟರು ನಡೆದೆ. ದೂರದಲ್ಲಿ ಹೊಂಗೆ ಮರವೊಂದು ಕೈಬೀಸಿ ಕರೆಯಿತು. ಅದರ ಬುಡದಲ್ಲಿ ಹಾಸಿಗೆ ಹಾಸಿದ ಹಾಗೆ ಬಿದ್ದಿದ್ದ ಹೊಂಗೆ ಹೂವುಗಳು, ಅದರ ವಾಸನೆ..... ಹೋ...!

ನೇರ ಮರದ ಕೆಳಗೆ ಹೋದೆ, ಅಂಗಾತವಾಗಿ ಮಲಗಿದೆ. ಕಣ್ಣು ಮುಚ್ಚಿದೆ, ಐವತ್ತು ವರ್ಷ ಹಿಂದೆ ಹೋದೆ. ನೆರಳು ಹರಿದು ಮರದ ಅಂಚಿನಿಂದ ಬಿಸಿಲು ಮೈಮೇಲೆ ಬೀಳುವ ತನಕ ಕಣ್ಣು ಮುಚ್ಚಿದ್ದೆ. ಸಂಜೆ ನೆರಳು ಮೈಮೇಲೆ ಬೀಳುತ್ತಿದ್ದ ಹಾಗೇ ಯಾರೋ ಬಗ್ಗಿ ನನ್ನನ್ನು ವೀಕ್ಷಿಸುತ್ತಿರುವುದು ಅರಿವಾಯಿತು.

ಮಧ್ಯಾಹ್ನದಿಂದ ಇಲ್ಲೇ ಹೀಗೇ ಬಿದ್ದಿದ್ದೀರಿ ಯಾವುದೋ ಹೆಣ ಅಂದುಕೊಂಡು ಬಿಟ್ಟಿದ್ದೆ... ಅಂದ ಆ ಮನುಷ್ಯ ಕೊಂಚ ಹೊತ್ತಿನ ನಂತರ. ಅವನ ಕೈಲಿ ಮಾತು ಆಡಿ ಪಳಗಿದಾಗ 'ಅಪ್ಪಾ ನೀವೇ ಪುಣ್ಯವಂತರೋ ಹೊಂಗೆ ನೆರಳು ನಿಮಗೆ ಬೇಕೆಂದಾಗ ಸಿಗುತ್ತೆ' ಅಂದೆ.

'ಅಯ್ಯೋ ಎಲ್ಲೀ ಸಾಮೀ ಈ ಸುಖ? ಈ ಜಾಗದಾಗೆ ಮುಂದಿನವರ್ಷ ಅಪಾರ್ಟ್‌ಮೆಂಟು ಬರ್ತದೆ' ಅಂದ.

ಮುಂದಿನ ಬೇಸಿಗೆಗೆ ಹೊಂಗೆ ಮರ ಹುಡುಕಿಕೊಂಡು ಎಲ್ಲಿಗೆ ಹೋಗಬೇಕಾಗಬಹುದು? ಆಗಿನ ಸಮ್ಮರ್ ಹೇಗಿರಬಹುದು?

❑

ಹುರುಳಿ ಕಟ್ಟು...

# ಇಂತಹ ನಾಯಕರೂ ಇದ್ದರು, ಒಮ್ಮೆ

**- ಎಚ್. ಗೋಪಾಲಕೃಷ್ಣ**

**ನಾ**ನು ಹೈಸ್ಕೂಲು ಸೇರಿದ ಮೊದಲ ವರ್ಷದಲ್ಲಿ ಒಂದು ಚುನಾವಣೆ ಬಂದಿತ್ತು. ಅದು ಅಸೆಂಬ್ಲಿಗೆ ನಡೆದ ಚುನಾವಣೆ ಅಂತ ಕಾಣುತ್ತೆ.

ನಮ್ಮ ಮನೆಗೆ ಚುನಾವಣೆಗೆ ನಿಂತಿದ್ದ ಅಭ್ಯರ್ಥಿ ಬಂದಿದ್ದರು. ಮನೆ ಒಳಗೆ ಬಂದು ಕುರ್ಚಿ ಮೇಲೆ ಕೂತರು. ನಮ್ಮ ಅಣ್ಣನ ಕಾರ್ಖಾನೆಯಲ್ಲಿನ ಕಾರ್ಮಿಕ ಸಂಘಟನೆಯೊಂದರ ಲೀಡರು ಅವರು ಅಂತ ತಿಳಿದಿತ್ತು. ನಮ್ಮ ತಾಯಿಯ ಕಾಲಿಗೆ ಬಿದ್ದು ಆಶೀರ್ವಾದ ಮಾಡಿ ಅಮ್ಮ ಅಂತ ಕೇಳಿದ್ದರು ಮತ್ತು ನಮ್ಮ ಮನೆಯವರೆಲ್ಲರನ್ನೂ ತುಂಬಾ ಆಪ್ತವಾಗಿ, ಆತ್ಮೀಯತೆಯಿಂದ ಮಾತು ಆಡಿಸಿದ್ದರು.

ಎಲೆಕ್ಷನ್ನಿಗೆ ನಿಲ್ಲೋದಕ್ಕೆ ಹಣವಿಲ್ಲ ಅಮ್ಮಾ ನಮ್ಮದು ಬಡವರ ಪಕ್ಷ, ನೀವೇ ದುಡ್ಡು ಕೊಡಬೇಕು ನೀವೇ ಓಟೂ ಹಾಕಬೇಕು... ಅಂತ ಅಮ್ಮನ ಹತ್ತಿರ ಹತ್ತು ರೂಪಾಯಿ ತೆಗೆದುಕೊಂಡು ಅದಕ್ಕೆ ರಸೀತಿ ಕೊಟ್ಟಿದ್ದರು. ಕಾರ್ಮಿಕ ಸಂಘಟನೆಯ ಲೀಡರು, ಪಾಪ ಬಡವರು ಅಂತ ನಾವೂ ಹುಡುಗರು ಅವರಿಗೆ ಓಟುಕೊಡಿ ಅಂತ ಕೇಳುವುದಕ್ಕೆ ಅವರ ಜತೆಜತೆಗೆ ಮನೆಮನೆಗೆ ಹೋಗಿದ್ದೆವು. ಹೋದ ಮನೆಗಳಲ್ಲಿ ಇವರನ್ನ ಕೂಡಿಸಿ ಪ್ರೀತಿಯಿಂದ ಕಾಫಿ, ಜ್ಯೂಸು, ಹಾಲು ಹೀಗೆ ಕೊಡುತ್ತಿದ್ದರು. ಈ ಮನುಷ್ಯ ಬೇಜಾರೇ ಇಲ್ಲದೆ ಅವರು ಕೊಟ್ಟಿದ್ದರಲ್ಲಿ ಒಂದು ಸ್ವಲ್ಪ ಅವರು ತಗೊಂಡು ಮಿಕ್ಕಿದ್ದು ನಮಗೆ ಹಂಚುತ್ತಿದ್ದರು. ಮನುಷ್ಯ ಎಷ್ಟು ಸಿಂಪಲ್ಲು ನೋಡ್ರೀ ಅಂತ ಅವರು ಹೋದ ಮೇಲೆ ಮನೆಯ ಹೆಂಗಸರು ಮಾತನಾಡಿಕೊಳ್ಳುತ್ತಿದ್ದುದು ನಮ್ಮ ಕಿವೀಗೂ ಬೀಳುತ್ತಿತ್ತು.

ಹೇಳೀ ಕೇಳೀ ಲೇಬರ್ ಕಾಲೋನಿಯ ವಾಸಿಗಳು ನಾವು. ಯಾರಾದರೂ ನಮಗೆ ಅಯ್ಯೋ ಅಂದರೆ ಅವರಿಗೆ ನಾವು ಜೀವ ಕೊಡುವ ಹಂತಕ್ಕೂ ಹೋಗುವವರು. ಲೀಡರ ಮೇಲೆ ಸಹಜವಾಗಿಯೇ ನಮಗೆ ಆತ್ಮೀಯತೆ ಹುಟ್ಟಿತ್ತು. ನಮಗೆ ಗೊತ್ತಿಲ್ಲದೆಯೇ ನಾವು ಅವರ ಪ್ರಭಾವಳಿಯಲ್ಲಿ ಸೇರ್ಪಡೆಯಾಗಿದ್ದೆವು. ಅವರಿಗಾಗಿ ಕ್ಯಾನ್‌ವಾಸ್ ಮಾಡುವುದು, ಪೋಸ್ಟರು ಬರೆಯುವುದು, ರಾತ್ರಿ ಹೊತ್ತಿನಲ್ಲಿ ಅದನ್ನು ಅಂಟಿಸುವುದು, ಜಟಕಾದಲ್ಲಿ ಕೂತು ಮೈಕಿನಲ್ಲಿ ಇವರಿಗೇ ಓಟು ಕೊಡಿ ಅಂತ ಬೇಡುವುದೂ... ಹೀಗೆ ನಾವೆಲ್ಲರೂ ಆಕ್ಟೀವ್ ಆಗಿದ್ದೆವು.

ಚುನಾವಣೆ ಬಂತು. ನಮ್ಮ ಲೀಡರೇ ಗೆದ್ದರು. ಆಯ್ತು ಈ ಯಪ್ಪ ನಿಮ್ಮನ್ನ ನೋಡೋಕ್ಕೆ ಬರ್ತಾನಾ? ಇನ್ನು ಐದು ವರ್ಷ ಆದಮೇಲೇನೇ ಅವನು ಇತ್ತ ತಲೆಹಾಕೋದೂ ಅಂತ ನಮ್ಮ ಎದುರು ಪಾರ್ಟಿ ಲೇವಡಿ ಮಾಡಿಯೂ ಆಯಿತು. ಆದರೆ ಈ ಲೀಡರು ಮಾತ್ರಾ

ವಾರಕ್ಕೋ ಎರಡು ವಾರಕ್ಕೋ ನಮ್ಮ ರಸ್ತೆಗೆ ಬರ್ತಾ ಇದ್ದರು. ಮನೆಮನೆಗೆ ಹೋಗಿ ಅಮ್ಮಾ ಚೆನ್ನಾಗಿದ್ದೀರಾ? ನೀರು ಬರ್ತಾ ಇದೆಯಾ? ಸೊಸೈಟಿಲಿ ಸಾಮಾನು ಸರಿಯಾಗಿ ಸಿಕ್ತಾ ಇದೆಯಾ? ಯಜಮಾನರು ಸಂಬಳ ಸರಿಯಾಗಿ ಮನೆಗೆ ತರ್ತಾ ಇದಾರಾ.... ಅಂತ ಕುಶಲೋಪರಿ ವಿಚಾರಿಸುತ್ತಿದ್ದರು. ಕೊನೆಯ ಪ್ರಶ್ನೆ ಯಾಕೆ ಅಂದರೆ ಆಗ ತಾನೇ ನಮ್ಮ ಏರಿಯಾದಲ್ಲಿ ಒಂದು ಹೆಂಡದ ಅಂಗಡಿ ಶುರುವಾಗಿ ಸುಮಾರು ಮನೆಯ ಗಂಡಸರು ಅದಕ್ಕೆ ಪರ್ಮನೆಂಟ್ ಮೆಂಬರಾಗಿದ್ದರು.

ಕೆಲವರು ಅಂಥಹವರನ್ನು ಸರಿದಾರಿಗೆ ತರಲು ಪ್ರಯತ್ನ ಮಾಡುತ್ತಿದ್ದರು...

ಐದು ವರ್ಷ ಕಳೀತೋ. ಲೇಬರ್ ಕಾಲೋನಿಗೆ ಅವಶ್ಯಕವಾಗಿ ಬೇಕಿದ್ದ ಮೂಲ ಸವಲತ್ತುಗಳು ಸಿಕ್ಕಿದ್ದು ಅದರ ಕಾರಣಕರ್ತರು ತಾವು ಅಂತ ಹೇಳಿಕೊಳ್ಳುವ ಜನರೂ ಹುಟ್ಟಿದ್ದರು. ಹಾಗೆಯೇ ಲೀಡರಿಗೆ ವಿರುದ್ಧವಾಗಿ ಚುನಾವಣೆಗೆ ನಿಲ್ಲಲು ಬೇರೆ ಬೇರೆ ಪಕ್ಷಗಳಿಂದ ಜನರೂ ತಯಾರಾಗಿದ್ದರು.

ಚುನಾವಣೆ ಬಂತು. ಈ ಸಲವೂ ಲೀಡರು ಹೋದಸಲದ ಹಾಗೇ ಲೋಕೀ ಪ್ರಚಾರ ನಡೆಸಿದರು. ಅವರ ಎದುರಾಳಿ ಸಿನಿಮಾ ಸ್ಟಾರ್ಸ್‌ನ ಕರೆದುಕೊಂಡು ಬಂದ, ಸಿನಿಮಾ ಹಾಡಿನ ಫಂಕ್ಷನ್ ಮಾಡಿದ, ಎಲೆಕ್ಷನ್‌ಗೆ ವಾರ ಮೊದಲು ಸೀರೆ, ಪಂಚೆ ಹಂಚಿದ ಮತ್ತು ಎಲೆಕ್ಷನ್ ಹಿಂದಿನ ರಾತ್ರಿ ಹಣ ಹೆಂಡ ಎರಡೂ ಹರೀತು.

ಲೀಡರು ಈ ಸಲ ಸೋತರು. ಆದರೂ ನಮ್ಮ ಸಂಪರ್ಕ ಇಟ್ಟುಕೊಂಡೆ ಇದ್ದರು. ಅವರ ಪೂರ್ವಿಕರು ಮಾಡಿದ್ದ ಆಸ್ತಿಯಲ್ಲಿ ಒಂದು ಭಾಗವನ್ನು ಜನರಿಗೆ ಒಳ್ಳೆಯದಾಗಲಿ ಅಂತ ಒಂದು ಮದುವೆ ಛತ್ರಮಾಡಿ ಬಿಟ್ಟರು. ಅವರಿಗೆ ಬರುತ್ತಿದ್ದ ಪಾರ್ಟಿ ಸಂಬಳದಲ್ಲಿ ಕೆಲವು ಬಡವರಿಗೆ ವಿದ್ಯೆಗೆ ಅನುಕೂಲವಾಗಲಿ ಅಂತ ಒಂದು ಟ್ರಸ್ಟು ಮಾಡಿಬಿಟ್ಟರು...

ಆದರೆ ಯಾವತ್ತೂ ಈ ರೀತಿಯ ಕೆಲಸಗಳಿಗೆ ಪ್ರಚಾರವನ್ನೇ ಪಡೀಲಿಲ್ಲ ಅವರು. ಅವರ ಎದುರು ಗೆದ್ದವನು ಮಾರನೇ ಸಲ ನಮ್ಮ ಏರಿಯಾ ಬಿಟ್ಟು ಬೇರೆ ಕಡೆ ನಿಂತು ಚುನಾವಣೆ ಸೋತ. ಇವರು ಮಾತ್ರ ನಮ್ಮಲ್ಲೇ ನಿಂತರು, ಮತ್ತೆ ಗೆದ್ದರು, ಮತ್ತೆ ಸೋತರು....... ಜನಸೇವೆ ಮಾಡೋದಿಕ್ಕೆ ಪದವಿಯ ಅಗತ್ಯ ಇಲ್ಲಪ್ಪಾ ಅಂತ ಹೇಳುತ್ತಲೇ ಮಡಿದರೂ ಇನ್ನೂ ನಮ್ಮ ಮನಸ್ಸಿನಲ್ಲಿಯೇ ಇದ್ದಾರೆ.....

ಅವರು ಸಾರ್ವಜನಿಕರಿಗೆ ಬಿಟ್ಟುಹೋದ ಕಲ್ಯಾಣ ಮಂಟಪದಲ್ಲಿ ಇವತ್ತಿಗೂ ಮದುವೆಗಳು ನಡೀತವೆ, ಅವರು ನೀಡಿದ ನೆರವಿನಿಂದ ವಿದ್ಯಾವಂತರಾದ ಸಾವಿರಾರು ಜನ ಇವತ್ತು ಬಡಮಕ್ಕಳ ವಿದ್ಯೆಗೆ ಅನುಕೂಲ ಒದಗಿಸುತ್ತಿದ್ದಾರೆ. ಈಗಲೂ ಜನ ಅವರನ್ನು ನಮ್ಮ ಲೀಡರು ಅಂತಲೇ ನೆನೆಸುತ್ತಾರೆ. ಹೆಂಡ ಹಂಚಿ ನೋಟು ಕೊಟ್ಟು ಎಲೆಕ್ಷನ್ ಗೆದ್ದನಲ್ಲಾ ಅವನ ಹೆಸರೂ ಸಹ ಈಗ ಯಾರ ಮನದಲ್ಲಿಯೂ ಇಲ್ಲ....!

❑